# ಮೈಸೂರು ವಿಶ್ವವಿದ್ಯಾನಿಲಯ

**ಮೈಸೂರು ವಿಶ್ವವಿದ್ಯಾನಿಲಯ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ: 20-09-2024ರ ಪೂರ್ವಾಹ್ನ 11.00 ಗಂಟೆಗೆ ನಡೆದ "ಸಿಂಡಿಕೇಟಿನ ಆರನೇ ಸಾಮಾನ್ಯ ಸಭೆ"ಯ ನಡಾವಳಿ.**

<u>ಉಪಸ್ಥಿತರು :</u>

| | | |
|---|---|---|
| 1. | ಪ್ರೊ. ಎನ್.ಕೆ. ಲೋಕನಾಥ್, ಕುಲಪತಿಗಳು | – ಅಧ್ಯಕ್ಷರು |
| 2. | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.<br>ಪ್ರೊ. ಎ.ಹೆಚ್.ಎಂ.ವಿಜಯಲಕ್ಷ್ಮಿ, ಜಂಟಿ ನಿರ್ದೇಶಕರು,<br>ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು. | – ಸದಸ್ಯರು |
| 3. | ಪ್ರೊ. ಸೋನರ್ ನಂದಪ್ಪ | – ಸದಸ್ಯರು |
| 4. | ಡಾ. ಟಿ.ಆರ್. ಚಂದ್ರಶೇಖರ್ | – ಸದಸ್ಯರು |
| 5. | ಶ್ರೀ ಗೋಕುಲ್ ಗೋವರ್ಧನ್ | – ಸದಸ್ಯರು |
| 6. | ಡಾ. ಗಣೇಶ್ ಕೆ. | – ಸದಸ್ಯರು |
| 7. | ಡಾ. ಅಂತೋಣಿ ಪೌಲ್ ರಾಜ್ ಸಿ. | – ಸದಸ್ಯರು |
| 8. | ಪ್ರೊ. ಯಜ್ಞಮೂರ್ತಿ ಶ್ರೀಕಾಂತ್ | – ಸದಸ್ಯರು |
| 9. | ಡಾ. ಮುಜ಼ೀದ ಬಾನು | – ಸದಸ್ಯರು |
| 10. | ಶ್ರೀ ಮಹದೇಶು | – ಸದಸ್ಯರು |
| 11. | ಶ್ರೀ ನಾಗರಾಜು ಸಿ. | – ಸದಸ್ಯರು |
| 12. | ಡಾ. ಬಸವರಾಜು ಸಿ. | – ಸದಸ್ಯರು |
| 13. | ಪ್ರೊ. ಶಬ್ಬೀರ್ ಮೊಹಮದ್ ಮುಸ್ತಫ | – ಸದಸ್ಯರು |
| 14. | ಡಾ. ಶಿಲ್ಪ ಜೆ. | – ಸದಸ್ಯರು |
| 15. | ಡಾ. ನಟರಾಜು ಹೆಚ್.ಎಸ್. | – ಸದಸ್ಯರು |
| 16. | ಡಾ. ನಾಗರಾಜ, ಕುಲಸಚಿವ (ಪರೀಕ್ಷಾಂಗ) | – ಸದಸ್ಯರು |
| 17. | ಶ್ರೀಮತಿ ವಿ.ಆರ್. ಶೈಲಜ, ಕೆ.ಎ.ಎಸ್., ಕುಲಸಚಿವರು | – ಸದಸ್ಯ ಕಾರ್ಯದರ್ಶಿ |
| 18. | ಶ್ರೀಮತಿ ರೇಖಾ ಕೆ.ಎಸ್, ಹಣಕಾಸು ಅಧಿಕಾರಿ | – ವಿಶೇಷ ಆಹ್ವಾನಿತರು |

<u>ಅನುಪಸ್ಥಿತರು</u>

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.

3. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

4. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

5. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಮೊದಲಿಗೆ ಮಾನ್ಯ ಕುಲಸಚಿವರು ಸಿಂಡಿಕೇಟ್ ಸಭೆಯ ಅಧ್ಯಕ್ಷತೆ ವಹಿಸಿಕೊಂಡಿರುವ ಮಾನ್ಯ ಕುಲಪತಿಗಳಾದ ಪ್ರೊ. ಎನ್.ಕೆ. ಲೋಕನಾಥ್ ಹಾಗೂ ಉಪಸ್ಥಿತರಾಗಿರುವ ಗೌರವಾನ್ವಿತ ಸದಸ್ಯರುಗಳನ್ನು ಸ್ವಾಗತಿಸಿದರು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
| --- | --- |

ದಿನಾಂಕ: 30.07.2024 ರಂದು ಜರುಗಿದ "ಸಿಂಡಿಕೇಟಿನ ನಾಲ್ಕನೇ ಸಾಮಾನ್ಯ ಸಭೆ"ಯ ನಡಾವಳಿಯನ್ನು ದೃಢೀಕರಿಸುವ ಬಗ್ಗೆ.

ಹಾಗೂ

ದಿನಾಂಕ: 14.08.2024 ರಂದು ಜರುಗಿದ "ಸಿಂಡಿಕೇಟಿನ ಐದನೇ ಸಾಮಾನ್ಯ ಸಭೆ"ಯ ನಡಾವಳಿಯನ್ನು ದೃಢೀಕರಿಸುವ ಬಗ್ಗೆ.

ಮಾನ್ಯ ಕುಲಪತಿಗಳು ಮಾತನಾಡಿ, PROMOTIONS TO UNIVERSITY TEACHERS UNDER UGC-CASಗೆ ಸಂಬಂಧಿಸಿದ ವಿಷಯವನ್ನು ಸಭೆಯ ಗಮನಕ್ಕೆ ತರುತ್ತಾ, ವಿಶ್ವವಿದ್ಯಾನಿಲಯದ ವಿವಿಧ ವಿಷಯಕ್ಕೆ ಸಂಬಂಧಿಸಿದ ಪ್ರಾಧ್ಯಾಪಕರುಗಳಿಗೆ ಹಿರಿಯ ಪ್ರಾಧ್ಯಾಪಕರು(Senior Professor)ಗಳಾಗಿ ಪದೋನ್ನತಿ ನೀಡುವ ಸಂಬಂಧ ವಿಷಯವನ್ನು ಪ್ರಸ್ತಾಪಿಸುತ್ತಾ, ಒಟ್ಟು 23 ಪ್ರಾಧ್ಯಾಪಕರುಗಳಿಗೆ ಅವರ ಅರ್ಹತೆಗನುಗುಣವಾಗಿ ದಿನಾಂಕ : 30.08.2024 ಹಾಗೂ 31.08.2024ರಂದು ನಡೆದ ಆಯ್ಕೆ ಸಮಿತಿ ಸಭೆಯ ಶಿಫಾರಸ್ಸಿನ ಮೇರೆಗೆ ಹಿರಿಯ ಪ್ರಾಧ್ಯಾಪಕರುಗಳನ್ನಾಗಿ ಬಡ್ತಿ ನೀಡಿರುವುದಕ್ಕೆ ಸಭೆಯ ಅನುಮೋದನೆಯನ್ನು ಕೋರುತ್ತಾ, ಇನ್ನೂ ಹಲವು ಪ್ರಾಧ್ಯಾಪಕರುಗಳು ಹಿರಿಯ ಪ್ರಾಧ್ಯಾಪಕರುಗಳ ಹುದ್ದೆಗೆ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಆ ಹಿರಿಯ ಪ್ರಾಧ್ಯಾಪಕರುಗಳಿಗೆ ಪದೋನ್ನತಿಯನ್ನು ನೀಡಿ, ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಮಂಡಿಸುವುದಾಗಿ ತಿಳಿಸುತ್ತಾ, ಪ್ರಸ್ತುತಪಡಿಸಿರುವ ಹಿರಿಯ ಪ್ರಾಧ್ಯಾಪಕರುಗಳಿಗೆ ಪದೋನ್ನತಿ ನೀಡಲು ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕೋರಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಪ್ರಾಧ್ಯಾಪಕರುಗಳಿಗೆ ಪದೋನ್ನತಿ ನೀಡುವ ಸಂಬಂಧ ನನ್ನ ಆಕ್ಷೇಪಣೆಯಿರುವುದಾಗಿ ತಿಳಿಸುತ್ತಾ, ಸದರಿ ವಿಷಯಕ್ಕೆ ಅನುಮೋದನೆಯಿರುವುದಿಲ್ಲವೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ವಿಶ್ವವಿದ್ಯಾನಿಲಯದ ನಿಯಮಾವಳಿಗಳ ಪ್ರಕಾರ ಪದೋನ್ನತಿಯನ್ನು ನೀಡಿರುವುದರಿಂದ ಹಾಗೂ ಯಾವುದೇ ನಿಯಮಾವಳಿಗಳನ್ನು ಬದಲಾವಣೆ ಮಾಡಲು ಅವಕಾಶವಿರುವುದಿಲ್ಲವೆಂಬ ಅಂಶವನ್ನು ಸಭೆಯ ಗಮನಕ್ಕೆ ತರುತ್ತಾ, ತಮ್ಮ ಆಕ್ಷೇಪಣೆಯೇನಾದರೂ ಇದ್ದಲ್ಲಿ ತಿಳಿಸಿ, ಪದೋನ್ನತಿಗೆ ಸಂಬಂಧಿಸಿದ ವಿಷಯವನ್ನು ಇತರೆ ವಿಷಯಗಳಲ್ಲೇ ಮಂಡಿಸಲಾಗುವುದು, ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ನಾನು ನಿಯಮಗಳನ್ನು ಪ್ರಶ್ನೆ ಮಾಡುತ್ತಿಲ್ಲಾ, ಆದರೆ ಪ್ರಾಧ್ಯಾಪಕರುಗಳಿಗೆ ನೀಡಿರುವ ಪದೋನ್ನತಿಯ ಕ್ರಮವು ನಿಯಮಾವಳಿಗಳ ಪ್ರಕಾರ ನಡೆದಿದೆಯೇ ಎಂದು ಪ್ರಶ್ನಿಸುತ್ತಿದ್ದೇನೆ ಎಂದು ತಿಳಿಸುತ್ತಾ, ಪದೋನ್ನತಿ ನೀಡಿರುವುದರ ಬಗ್ಗೆ ನನ್ನಲ್ಲಿ ಮಾಹಿತಿಯಿರುವುದರಿಂದ, ಜೊತೆಗೆ ಒಂದೆರಡು ಪ್ರಶ್ನೆಗಳನ್ನು ಕೇಳಲು ಹಕ್ಕಿರುವುದರಿಂದ ಪ್ರಶ್ನಿಸುತ್ತಿದ್ದೇನೆ ಎಂದು ತಿಳಿಸಿದರು.

ಡಾ. ಸಿ. ಬಸವರಾಜು ಅವರು ಮಾತನಾಡಿ, ಪ್ರಾಧ್ಯಾಪಕರುಗಳಿಗೆ ನೀಡಿರುವಂತಹ ಪದೋನ್ನತಿಯು ನಿಯಮಬಾಹಿರವಾಗಿ ಆಗಿದೆಯೇ ಎಂಬುದರ ಬಗ್ಗೆ ನೀವು ಪ್ರಶ್ನಿಸುತ್ತಿದ್ದೀರಾ ಎಂದು ಕೇಳಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಗೌರವಾನ್ವಿತ ಕುಲಪತಿಗಳಲ್ಲಿ ನಾಲ್ಕೇ ನಾಲ್ಕು ಪ್ರಶ್ನೆಗಳನ್ನು ಕೇಳುವುದಾಗಿ, ಅದಕ್ಕೆ ಮಾನ್ಯ ಕುಲಪತಿಗಳು ಉತ್ತರ ನೀಡಿದಲ್ಲಿ ಅನುಮೋದನೆ ನೀಡಲಾಗುವುದು ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಸಭೆಯಲ್ಲಿ ಉತ್ತರಿಸಲಾಗುವುದಿಲ್ಲ, ತಾವು ಲಿಖಿತ ರೂಪದಲ್ಲಿ ನೀಡಿದರೆ ಉತ್ತರ ನೀಡಲಾಗುವುದು ಎಂದು ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ತಾವು ವಿಷಯವನ್ನು ಸಭೆಯಲ್ಲಿ ಮಂಡಿಸಿದ ನಂತರ ಸದಸ್ಯರುಗಳು ಕೇಳಿದ ಪ್ರಶ್ನೆಗಳಿಗೆ ಉತ್ತರ ನೀಡಲಾಗುವುದಿಲ್ಲ, ದಾಖಲಿಸಲಾಗುವುದಿಲ್ಲವೆಂದು endorsement ನೀಡಿ, ಸಭೆಯಲ್ಲಿ ಸಿಂಡಿಕೇಟ್ ಸದಸ್ಯರುಗಳು ಹೇಳಿದಂತಹ ಹೇಳಿಕೆಗಳನ್ನು ನಡಾವಳಿಗಳಲ್ಲಿ ದಾಖಲಿಸಲಾಗುವುದಿಲ್ಲವೆಂದು ಹಾಗೂ ಸಿಂಡಿಕೇಟ್ ಸಭೆಯ ವಿಷಯಗಳನ್ನು ಸಭೆಯಲ್ಲಿ ಮಂಡಿಸಲಾಗುವುದು ಉತ್ತರವನ್ನು ಸಿಂಡಿಕೇಟ್ ಸದಸ್ಯರುಗಳು ಲಿಖಿತ ಮೂಲಕವೇ ನೀಡಬೇಕೆಂದು ಒಂದು proceedings ಮಾಡುವಂತೆ ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಈ ಹಿಂದೆ ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯಲ್ಲಿ ಈಗಾಗಲೇ 7 ಮಂದಿ ಪ್ರಾಧ್ಯಾಪಕರುಗಳಿಗೆ ಹಿರಿಯ ಪ್ರಾಧ್ಯಾಪಕರು(Senior Professor)ಗಳಾಗಿ ಪದೋನ್ನತಿಯನ್ನು ನೀಡಲಾಗಿದೆ. ಇದು ಅದರ ಮುಂದುವರಿದ ಭಾಗವಾಗಿದೆ ಎಂದು ತಿಳಿಸುತ್ತಾ, ಹಾಗಾದರೆ ಅವರಿಗೆ ನೀಡಿರುವಂತಹ ಪದೋನ್ನತಿಯು ತಪ್ಪಾಗುತ್ತದೆ, ಆದ್ದರಿಂದ ಪ್ರಸ್ತುತ ವಿಷಯವನ್ನು ಸಿಂಡಿಕೇಟ್ ಸಭೆಗೆ ಮಂಡಿಸಿರುವುದರಿಂದ ಅನುಮೋದನೆ ಕೋರಲಾಗಿದೆ ಎಂದು ತಿಳಿಸಿದರು.

ಡಾ. ಶಿಲ್ಪ ಜೆ. ಅವರು ಮಾತನಾಡಿ ಹಿಂದೆ ಪದೋನ್ನತಿ ನೀಡಿರುವಂತಹ ಸಂದರ್ಭದಲ್ಲಿ ಅವರಿಗೆ ಯಾವುದೇ ಗೊಂದಲವಿರಲಿಲ್ಲ ಹಾಗೂ ಅನುಮೋದನೆಯನ್ನು ನೀಡಲಾಗಿದೆ. ಪ್ರಸ್ತುತಪಡಿಸಿರುವ ಪದೋನ್ನತಿಯಲ್ಲಿ ಅವರಿಗೆ ಕೆಲವೊಂದು ಪ್ರಶ್ನೆಗಳು ಮೂಡಿರಬಹುದು ಎಂದು ಸಭೆಯಲ್ಲಿ ತಿಳಿಸಿದರು.

ಡಾ. ಸಿ. ಬಸವರಾಜು ಅವರು ಮಾತನಾಡಿ, ಪದೋನ್ನತಿ ನೀಡುವಾಗ ನಿಯಮಾವಳಿಗಳ ಒಂದೇ ಆಗಿರುತ್ತದೆ. ಆದ್ದರಿಂದ ಮಾನ್ಯ ಅಧ್ಯಕ್ಷರು ನಿಯಮಾವಳಿಗಳ ಪ್ರಕಾರ ಡಾ. ಟಿ.ಆರ್. ಚಂದ್ರಶೇಖರ್ ಅವರು ಕೇಳುವ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿದರೆ ಸದರಿ ವಿಷಯವನ್ನು ಮುಗಿಸಬಹುದು ಎಂದು ತಿಳಿಸಿದರು.

ನಂತರ ಪ್ರಸ್ತುತ ವಿಷಯವನ್ನು ಸಭಾ ಕಾರ್ಯಸೂಚಿಯಲ್ಲಿರುವಂತೆ ವಿಷಯವು ಪ್ರಸ್ತಾಪಿತವಾದಾಗ ತೀರ್ಮಾನ ಕೈಗೊಳ್ಳಬಹುದೆಂದು ಸಭೆಯ ಸದಸ್ಯರುಗಳು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

ಡಾ. ಶಿಲ್ಪ ಜೆ. ಅವರು ಮಾತನಾಡಿ ದಿನಾಂಕ : 30.07.2024ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಸಿಂಡಿಕೇಟ್ ಸಭೆಯನ್ನು YouTube ಮುಖಾಂತರ Liveನಲ್ಲಿ ಪ್ರಸಾರ ಮಾಡುವಂತೆ ತಿಳಿಸಿದ್ದೆವು ಎಂದು ವಿಷಯವನ್ನು ಪ್ರಸ್ತಾಪಿಸಿದರು. ಸಿಂಡಿಕೇಟ್ ಸಭೆಗಳಲ್ಲಿ ಕೆಲವು ಗೌಪ್ಯವಾದ ವಿಷಯಗಳ ಬಗ್ಗೆ ತೀರ್ಮಾನಗಳನ್ನು ಕೈಗೊಳ್ಳಬೇಕಾಗಿರುವುದರಿಂದ ನೇರ ಪ್ರಸಾರ ಮಾಡುವುದರ ಬಗ್ಗೆ ಮುಂದೆ ನಿರ್ಧಾರ ಕೈಗೊಳ್ಳುವುದಾಗಿ ತಿಳಿಸಿದ್ದೀರಿ. ಸಿಂಡಿಕೇಟ್ ಸಭೆಯನ್ನು ನೇರ ಪ್ರಸಾರ ಮಾಡುವುದರ ಬಗ್ಗೆ ಯಾವ ರೀತಿಯ ಕ್ರಮ ಕೈಗೊಂಡಿದ್ದೀರಿ ಎಂದು ಕೇಳುತ್ತಾ, ಯಾವ ಕಾರಣಕ್ಕಾಗಿ Liveನಲ್ಲಿ ಪ್ರಸಾರ ಮಾಡಬಾರದು ಎಂಬುದರ ಬಗ್ಗೆ ಒಂದು endorsementಅನ್ನು ನೀಡುವಂತೆ ಸಭೆಯಲ್ಲಿ ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ ಸಿಂಡಿಕೇಟ್ ಸಭೆಯನ್ನು Liveನಲ್ಲಿ ಪ್ರಸಾರ ಮಾಡುವುದರ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆ ನಡೆಸಲಾಗಿದ್ದು, ಯಾವ ಕಾರಣಕ್ಕಾಗಿ ನೇರ ಪ್ರಸಾರ ಮಾಡಲು ಸಾಧ್ಯವಿಲ್ಲವೆಂಬುದರ ಬಗ್ಗೆ ತಿಳಿಸಲಾಗಿದೆ. ಆದ್ದರಿಂದ ಸಿಂಡಿಕೇಟ್ ಸಭೆಯನ್ನು ನೇರ ಪ್ರಸಾರ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಸಿಂಡಿಕೇಟ್ ಸದಸ್ಯರುಗಳಾದ ತಾವುಗಳ ಸರ್ಕಾರಕ್ಕೆ ಪತ್ರವನ್ನು ಬರೆಯಬಹುದು ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಹಾಗೂ ಇತರ ಸದಸ್ಯರುಗಳು ಯಾವ ಕಾರಣಕ್ಕಾಗಿ ಸಿಂಡಿಕೇಟ್ ಸಭೆಯನ್ನು Liveನಲ್ಲಿ ಪ್ರಸಾರ ಮಾಡಲಾಗುವುದಿಲ್ಲ ಎಂಬುದರ ಬಗ್ಗೆ ಒಂದು endorsementಅನ್ನು ನೀಡುವಂತೆ ಸಭೆಯಲ್ಲಿ ಕೇಳಿದರು.

ಡಾ. ಹೆಚ್.ಎಸ್. ನಟರಾಜ್ ಅವರು ಮಾತನಾಡಿ ನಡಾವಳಿಯು ಪದೇ ಪದೇ ತಪ್ಪಾಗುತ್ತಿರುವುದರಿಂದ ಸಿಂಡಿಕೇಟ್ ಸಭೆಯನ್ನು Liveನಲ್ಲಿ ಪ್ರಸಾರ ಮಾಡಬೇಕಾಗುತ್ತದೆ ಎಂದು ತಮ್ಮ ಅಭಿಪ್ರಾಯವನ್ನು

ವ್ಯಕ್ತಪಡಿಸಿದರು. ಇದಕ್ಕೆ ಸಿಂಡಿಕೇಟ್ ಸದಸ್ಯರುಗಳೆಲ್ಲರೂ ದನಿಗೂಡಿಸಿ ಸುದೀರ್ಘ ಚರ್ಚೆಯನ್ನು ನಡೆಸಿ ಸಿಂಡಿಕೇಟ್ ಸಭೆಯನ್ನು Liveನಲ್ಲಿ ಪ್ರಸಾರ ಮಾಡಬೇಕೆಂದು ತಮ್ಮ ಹಕ್ಕೊತ್ತಾಯವನ್ನು ಮಂಡಿಸಿದರು.

ಜೊತೆಗೆ ಸಿಂಡಿಕೇಟ್ ಸದಸ್ಯರುಗಳು ನಾವು ನೀಡಿರುವಂತಹ ವಿಷಯಗಳು ಸಿಂಡಿಕೇಟ್‌ನ ಕಾರ್ಯಸೂಚಿಯಲ್ಲಿ ಬಂದಿರುವುದಿಲ್ಲವೆಂದು ಆಕ್ಷೇಪವನ್ನು ವ್ಯಕ್ತಪಡಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಸಿಂಡಿಕೇಟ್ ಸದಸ್ಯರುಗಳಾದ ತಾವುಗಳು ಹಿಂದೆ ನಡೆದಂತಹ ಮೂರು ಸಿಂಡಿಕೇಟ್ ಸಭೆಗಳ ಕಾರ್ಯಸೂಚಿಯ ನಡಾವಳಿಯನ್ನು ಪರಿಶೀಲಿಸಿ, ಅದರಲ್ಲಿ ಎಷ್ಟು ವಿಷಯಗಳು ಅನುಮೋದನೆಗೊಂಡಿವೆ ಎಂಬುದನ್ನು. ಹಾಗೂ ಸಿಂಡಿಕೇಟ್‌ನ ಸದಸ್ಯರುಗಳಾದ ತಮ್ಮಿಂದ ವಿಶ್ವವಿದ್ಯಾನಿಲಯದ ಹಿತಾಸಕ್ತಿಯ ವಿಷಯದ ಬಗ್ಗೆ ಚರ್ಚಿಸಲಾಗುತ್ತಿದೆಯೇ ಎಂಬುದನ್ನು ಸಭೆಯ ಗಮನಕ್ಕೆ ತಂದರು.

ಶ್ರೀ ಮಹದೇಶು ಅವರು ಮಾತನಾಡಿ, ವಿಶ್ವವಿದ್ಯಾನಿಲಯದ ಹಿತಾಸಕ್ತಿಯಿಂದಲೇ ನಾವು Gem Portalಗೆ ಸಂಬಂಧಿಸಿದ ರೂ. 70.00 ಲಕ್ಷಗಳ ವಿಷಯವನ್ನು ಪ್ರಸ್ತಾಪಿಸಿರುವುದು, ವಿಶ್ವವಿದ್ಯಾನಿಲಯದ ಹಿತಾಸಕ್ತಿ ನಮ್ಮಲ್ಲಿ ಇಲ್ಲವೆಂದಾದಲ್ಲಿ ರೂ.70.00 ಲಕ್ಷಗಳ ವಿಷಯವನ್ನು ಪ್ರಸ್ತಾಪಿಸಲಾಗುತ್ತಿತ್ತೆ? ಎಂದು ಸಭೆಯಲ್ಲಿ ಪ್ರಶ್ನಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಆ ರೀತಿಯ ವಿಷಯಗಳೇನಾದರೂ ಇದ್ದಲ್ಲಿ ದೂರನ್ನು ನೀಡಿ ಎಂದು ತಿಳಿಸಿದರು.

ಶ್ರೀ ಮಹದೇಶು ಅವರು ಮಾತನಾಡಿ, ನಾವು ಸಿಂಡಿಕೇಟ್ ಸಭೆಗಳಲ್ಲಿ ವಿಶ್ವವಿದ್ಯಾನಿಲಯದ ಹಿತಾಸಕ್ತಿಗೆ ಸಂಬಂಧಿಸಿದಂತಹ ವಿಷಯಗಳನ್ನೇ ಪ್ರಸ್ತಾಪಿಸುತ್ತಿರುವುದು. ಜೊತೆಗೆ ನಿಮಗೆ ಬೇಕಾದಂತಹ ವಿಷಯಗಳನ್ನು ಮಾತ್ರ ಸಭೆಯಲ್ಲಿ ಮಂಡಿಸುತ್ತಿದ್ದೀರಿ, ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದ ವಿಷಯಗಳನ್ನು ಸಭೆಯಲ್ಲಿ ಪ್ರಸ್ತಾಪಿಸುತ್ತಿಲ್ಲ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಸದಸ್ಯರುಗಳು ಸಭೆಗೆ ಬಂದ ನಂತರ ಕಾರ್ಯಸೂಚಿಯಲ್ಲಿ ಯಾವ ವಿಷಯಗಳಿವೆ ಎಂಬುದರ ಬಗ್ಗೆ ಗಮನಹರಿಸಬೇಕು. ಅದನ್ನು ಬಿಟ್ಟು ಈಗಾಗಲೇ ಚರ್ಚಿಸಿರುವಂತಹ ವಿಷಯಗಳನ್ನೇ ಪ್ರಸ್ತಾಪಿಸುತ್ತಿದ್ದೀರಾ ಎಂದು ಹೇಳಿದರು.

ಶ್ರೀ ಮಹದೇಶು ಅವರು ಮಾತನಾಡಿ, ನಾವು ಯಾವುದೇ ವಿಷಯವನ್ನು ಕಣ್ಣುಮುಚ್ಚಿಕೊಂಡು ಮಾತನಾಡುತ್ತಿಲ್ಲ, ಎಲ್ಲದಕ್ಕೂ ಆಧಾರವಿದೆ. Gem Portalಗೆ ಮಾಡಿರುವಂತಹ ಪ್ರಕ್ರಿಯೆಗಳು Fraud ಆಗಿದೆ. ನಾವು ವಿಶ್ವವಿದ್ಯಾನಿಲಯದ ಹಿತಾಸಕ್ತಿಯಿಂದಲೇ ಸದರಿ ವಿಷಯವನ್ನು ಪ್ರಸ್ತಾಪಿಸುತ್ತಿರುವುದು. ಆದ್ದರಿಂದ ಈ ವಿಷಯವನ್ನು ಮಿಡಿಯಾ ಮುಂದೆ, ಗೌರವಾನ್ವಿತ ಕುಲಾಧಿಪತಿಗಳಿಗೆ ಹಾಗೂ ಸರ್ಕಾರಕ್ಕೂ ಪತ್ರ ಬರೆಯುವುದಾಗಿ ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ಕುಲಸಚಿವರು ಟೆಂಡರ್ ಅನ್ನು ಕರೆಯುವುದರಿಂದ ಅವರು ಉತ್ತರ ನೀಡಲಿ, ತದನಂತರ ಇದರ ಬಗ್ಗೆ ಯಾವ ಕ್ರಮತೆಗೆದುಕೊಳ್ಳಬೇಕು ಎಂಬುದರ ಬಗ್ಗೆ ತೀರ್ಮಾನಿಸಲಾಗುವುದು ಎಂದರು.

ಮಾನ್ಯ ಕುಲಪತಿಗಳು ಮಾತನಾಡಿ, ಮೂರು ತಿಂಗಳಿಂದ ಇದೇ ವಿಷಯವನ್ನು ಪ್ರಸ್ತಾಪಿಸುತ್ತಿದ್ದೀರಾ, ನಿಮ್ಮಗಳಿಗೆ ಶೈಕ್ಷಣಿಕ ವಿಚಾರಗಳು ಬೇಡವಾಗಿವೆ. ಆದ್ದರಿಂದ ಸಿಂಡಿಕೇಟ್ ಸಭೆಯನ್ನೇ ರದ್ದುಗೊಳಿಸೋಣ ಎಂದು ಸಭೆಯಲ್ಲಿ ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಎರಡು ಸಭೆಗಳಿಂದಲೂ ನಮಗೆ ಕಾರ್ಯಸೂಚಿಯನ್ನು ತಡವಾಗಿ, ಕೊನೆಗಳಿಗೆಯಲ್ಲಿ ಕಳುಹಿಸುತ್ತಿದ್ದೀರಾ ಎಂದು ತಿಳಿಸಿದರು.

ಶ್ರೀ ಮಹದೇಶು ಅವರು ಮಾತನಾಡಿ ಸಿಂಡಿಕೇಟ್‌ನ ಅವಶ್ಯಕತೆಯಿಲ್ಲವೆಂದು ಸರ್ಕಾರಕ್ಕೆ ಪತ್ರ ಬರೆಯಿರಿ ಎಂದು ತಿಳಿಸುತ್ತಾ, ಎಲ್ಲರಿಗೂ ಸರ್ಕಾರ ಯಾವ ರೀತಿಯ ಕ್ರಮವನ್ನು ತೆಗೆದುಕೊಳ್ಳುತ್ತದೋ ಅದೇ ನಮಗೂ ಅನ್ವಯಿಸುತ್ತದೆ ಎಂದು ತಿಳಿಸಿದರು.

ಡಾ. ವಿಜಯಲಕ್ಷ್ಮಿ ಅವರು ಮಾತನಾಡಿ, ಸಭೆಯಲ್ಲಿ ಕಾರ್ಯಸೂಚಿಯನ್ನು ತೆಗೆದುಕೊಂಡು ಸಭೆಯನ್ನು ಮುಂದುವರಿಸಬಹುದು ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಹಾಗೂ ಡಾ. ಶಿಲ್ಪ ಜೆ. ಅವರು ಮಾತನಾಡಿ ಸಿಂಡಿಕೇಟ್ ಸಭೆಯನ್ನು YouTube ಮುಖಾಂತರ Liveನಲ್ಲಿ ಪ್ರಸಾರ ಮಾಡುವ ಬಗ್ಗೆ endorsementಅನ್ನು ನೀಡುವಂತೆ ಮತ್ತೊಮ್ಮೆ ಸಭೆಯಲ್ಲಿ ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಸಭೆಯ ಕಾರ್ಯಸೂಚಿಯನ್ನು ತೆಗೆದುಕೊಳ್ಳಲು ಅವಕಾಶ ನೀಡದಿದ್ದಲ್ಲಿ, ಈ ಸಭೆಯನ್ನು ರದ್ದುಗೊಳಿಸುವುದೇ ಉಚಿತವೆಂದು ತಿಳಿಸುತ್ತಾ, ಸಭಾಸೂಚಿಯಲ್ಲಿರುವ ಕ್ರಮದಲ್ಲಿ ವಿಷಯವನ್ನು ಪ್ರಸ್ತಾಪಿಸಬೇಕೆಂದು ತಿಳಿಸುತ್ತಾ, ನೂರು ವರ್ಷದ ಇತಿಹಾಸವುಳ್ಳ ವಿಶ್ವವಿದ್ಯಾನಿಲಯದಲ್ಲಿ ಇಲ್ಲಿಯವರೆಗೂ ಯಾವುದೇ ವಿಷಯಗಳು ಪದೇ ಪದೇ ಮಂಡಿಸಲಾಗಿರುವುದಿಲ್ಲಾ, ಮತ್ತು ನೀವು ಕೇಳಿರುವಂತಹ ಮಾಹಿತಿಗಳಿಗೆ ನಾವು ಉತ್ತರವನ್ನು ನೀಡಲು ಕಾಲಾವಕಾಶವಿದೆ, ಜೊತೆಗೆ ನಾನಾಗಲಿ, ಕುಲಸಚಿವರಾಗಲಿ, ಹಣಕಾಸು ಅಧಿಕಾರಿಗಳಾಗಲಿ ವಿಶ್ವವಿದ್ಯಾನಿಲಯದಲ್ಲೇ ಇರುತ್ತೇವೆ. ಈಗಾಗಲೇ ವಿಶ್ವವಿದ್ಯಾನಿಲಯದಲ್ಲಿ ರೂ. 55 ಕೋಟಿಗಳ ಹಗರಣದ ವಿಚಾರಣೆ ನಡೆಯುತ್ತಿದೆ, ಅದರ ಬಗ್ಗೆ ತಾವುಗಳು ಯೋಚನೆ ಮಾಡಿದ್ದೀರಾ? ಆದ್ದರಿಂದ ಸಭಾ ಸೂಚಿಯಲ್ಲಿ ಏನು ವಿಷಯಗಳಿವೆ ಅದರ ಬಗ್ಗೆ ಮೊದಲು ಚರ್ಚೆ, ಅನುಮೋದನೆ ಆಗಲಿ ಎಂದು ಸಭೆಯಲ್ಲಿ ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ಸಿಂಡಿಕೇಟ್ ಸಭೆಯನ್ನು YouTube ಮುಖಾಂತರ Liveನಲ್ಲಿ ಪ್ರಸಾರ ಮಾಡುವ ಬಗ್ಗೆ ಸಿಂಡಿಕೇಟ್ ಸದಸ್ಯರುಗಳಾದ ನಾವುಗಳು ಪತ್ರವನ್ನು, ಮಿಂಚಂಚೆ ಮುಖಾಂತರ ಸಾಕಷ್ಟು ಬಾರಿ ನೀಡಿದ್ದೇವೆ. ಸದರಿ ವಿಷಯವನ್ನು ನಡಾವಳಿಯಲ್ಲಿ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಯನ್ನು YouTube ಮುಖಾಂತರ Liveನಲ್ಲಿ ಪ್ರಸಾರ ಮಾಡಲಾಗುವುದಿಲ್ಲವೆಂದು ಸೇರ್ಪಡೆಗೊಳಿಸಿ, ತದನಂತರ ನಾವು ನಡಾವಳಿಯನ್ನಿಟ್ಟುಕೊಂಡು ಮುಂದಿನ ಸಭೆಯಲ್ಲಿ ನಾವು ಪ್ರಸ್ತಾಪಿಸುತ್ತೇವೆ. ಜೊತೆಗೆ ಮಾನ್ಯ ಕುಲಪತಿಗಳು ಮೌಖಿಕವಾಗಿ ಸಿಂಡಿಕೇಟ್ ಸಭೆಯನ್ನು YouTube ಮುಖಾಂತರ Liveನಲ್ಲಿ ಪ್ರಸಾರ ಮಾಡದಿರಲು ಸರ್ಕಾರದಿಂದ ತಿಳಿಸಿರುತ್ತಾರೆ ಎಂದು ತಿಳಿಸಿರುತ್ತೀರಿ. ಜೊತೆಗೆ ನಾವು ಕುಲಸಚಿವರಿಗೆ GeM Portal ಅನ್ನು STOP ಮಾಡುವಂತೆ ಈಗಾಗಲೇ ಪತ್ರವನ್ನು ನೀಡಿದ್ದೇವೆ. ಆ ಪತ್ರಕ್ಕೆ 1 1/2 ತಿಂಗಳಾದ ನಂತರ ಉತ್ತರವನ್ನು ತಪ್ಪು ತಪ್ಪಾಗಿ ನೀಡಿರುತ್ತಾರೆ. ಆದ್ದರಿಂದ ನಾವು ಎಲ್ಲಾ ವಿಷಯಗಳನ್ನು ಸಿಂಡಿಕೇಟ್ ಸಭೆಯಲ್ಲಿ ಪ್ರಸ್ತಾಪಿಸಬೇಕಾಗಿರುತ್ತದೆ ಎಂದು, ನಾವು ದಿನಾಂಕ: 30.07.2024ರಲ್ಲಿ YouTube ಮುಖಾಂತರ Liveನಲ್ಲಿ ಪ್ರಸಾರ ಮಾಡುವ ಬಗ್ಗೆ ಕೇಳಿದ್ದೆವು. ಆದರೆ ದಿನಾಂಕ: 20.09.2024 ಆಗಿದೆ. ಆದರೆ ಇಲ್ಲಿಯವರೆಗೂ ನೇರ ಪ್ರಸಾರ ಮಾಡುವ ಬಗ್ಗೆ ಯಾವುದೇ ಉತ್ತರವನ್ನು ನಿಖರವಾಗಿ ನೀಡಿರುವುದಿಲ್ಲವೆಂದು ಸಭೆಗೆ ತಿಳಿಸಿದರು.

ಡಾ. ಮುಜೀದಾ ಬಾನು ಅವರು ಮಾತನಾಡಿ, ಮೊದಲು ಸಿಂಡಿಕೇಟ್ ಸಭೆಯ ಸಭಾಸೂಚಿಯನ್ನು ತೆಗೆದುಕೊಂಡು ತದನಂತರ ಸಿಂಡಿಕೇಟ್ ಸದಸ್ಯರುಗಳ ಆರೋಪಗಳು, ಪ್ರಶ್ನೆಗಳು, ವಿಷಯಗಳನ್ನು ಪ್ರಸ್ತಾಪಿಸಲು ಕಾಲಾವಕಾಶವನ್ನು ನೀಡಬಹುದೇ ಎಂದು ಮಾನ್ಯ ಕುಲಪತಿಯವರನ್ನು ಕೋರಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಮೂರು ಸಿಂಡಿಕೇಟ್ ಸಭೆಗಳಲ್ಲೂ ಸಭಾ ಸೂಚಿಯನ್ನು ಸಂಪೂರ್ಣವಾಗಿ ಮುಗಿಸಲು ಅವಕಾಶವನ್ನೇ ನೀಡದಿದ್ದಲ್ಲಿ, ಸಿಂಡಿಕೇಟ್ ಸಭೆಯನ್ನು ಯಾವ ಕಾರಣಕ್ಕಾಗಿ ನಡೆಸಬೇಕು, ಈಗಾಗಲೇ ಸಭೆ ಪ್ರಾರಂಭವಾಗಿ 20 ನಿಮಿಷಗಳಾಗಿವೆ ಇನ್ನೂ ವಿಷಯಕ್ಕೆ ಬಂದಿಲ್ಲ. ಕಳೆದ ಸಭೆಯ

ನಡಾವಳಿಯನ್ನು ನೋಡಿ ನಿಮ್ಮಗಳಿಗೆ ಅರ್ಥವಾಗುತ್ತದೆ. ಮೊದಲು ನಾನು ಮಾತಾಡಬೇಕಾದರೆ ತಾವುಗಳು ಮಧ್ಯದಲ್ಲಿ ಮಾತನಾಡುತ್ತಲೇ ಇದ್ದರೆ ವಿಷಯಗಳು/ಸಮಸ್ಯೆಗಳು ಬಗೆಹರಿಯುವುದು ಯಾವಾಗ ಎಂದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಪ್ರತಿ ಸಾರಿಯೂ ನಾನು ಪ್ರಸ್ತಾವನೆಗಳನ್ನು ಸಲ್ಲಿಸುತ್ತಿದ್ದರೂ, ಯಾಕೆ ಕಾರ್ಯದರ್ಶಿಗಳು ನನ್ನ ಪ್ರಸ್ತಾವನೆಯನ್ನು ಕಾರ್ಯಸೂಚಿಯಲ್ಲಿ ಸೇರಿಸುತ್ತಿಲ್ಲ ಎಂದು ಕೇಳಿದರು.

ಡಾ. ವಿಜಯಲಕ್ಷ್ಮಿಯವರು ಮಾತನಾಡಿ, ಮೊದಲು ಸಭಾ ಸೂಚಿಯಲ್ಲಿರುವಂತಹ ವಿಷಯವನ್ನು ಮಂಡಿಸಿದ ನಂತರ, ನೇರ ಪ್ರಸಾರದ ಬಗ್ಗೆ ಹಾಗೂ ಇನ್ನಿತರ ವಿಷಯಗಳ ಬಗ್ಗೆ ಚರ್ಚಿಸಬಹುದು ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಸಿಂಡಿಕೇಟ್ ಸಭೆಯನ್ನು ನೇರವಾಗಿ ಪ್ರಸಾರ ಮಾಡಿದರೆ ಪಾರದರ್ಶಕತೆ ಇರುತ್ತದೆ. ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಯ ನೇರ ಪ್ರಸಾರವು ರಾಜ್ಯ ಹಾಗೂ ದೇಶಕ್ಕೆ ತಿಳಿಯಲಿ ಎಂಬುದಷ್ಟೆ ನಮ್ಮ ವಾದವಾಗಿದೆ ಎಂದು ತಿಳಿಸುತ್ತಾ, ಇದರಲ್ಲಿ ಯಾವ ಗುಪ್ತ ಸಮಾಲೋಚನೆಯಿದೆ? ನೇರ ಪ್ರಸಾರ ಮಾಡಲು ಸರ್ಕಾರದ ಆದೇಶವಿರುವುದರಿಂದ, ಯಾವ ಕಾರಣಕ್ಕಾಗಿ ಆದೇಶದ ಉಲ್ಲಂಘನೆ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಸಭೆಯನ್ನು ಮುಂದುವರೆಸಬೇಕೇ ಬೇಡವೇ? ಈಗಾಗಲೇ ಸಾಕಷ್ಟು ಸಮಯವನ್ನು ಕಳೆದಿದ್ದೇವೆ. ಆದ್ದರಿಂದ ಸದರಿ ವಿಷಯವನ್ನು ಸರ್ಕಾರದ ಗಮನಕ್ಕೆ ತರಲಾಗುವುದು ಎಂದು ಸಭೆಯಲ್ಲಿ ತಿಳಿಸಿದರು.

ಡಾ. ಸಿ. ಬಸವರಾಜು ಅವರು ಮಾತನಾಡಿ, ಸಿಂಡಿಕೇಟ್ ಸಭೆಯನ್ನು ನೇರ ಪ್ರಸಾರ ಮಾಡದಿರಲು ಕಾರಣವೇನು ಎಂದು ಪ್ರಶ್ನಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಸಿಂಡಿಕೇಟ್ ಸಭೆಯನ್ನು ನೇರ ಪ್ರಸಾರ ಮಾಡಿದರೆ ಅದರಿಂದ ಆಗುವ ಅನುಕೂಲ ಹಾಗೂ ಅನಾನುಕೂಲಗಳೇನು ಎಂದು ಸಭೆಯಲ್ಲಿ ಪ್ರಶ್ನಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ನಾವು ಸಭೆಗೆ ಬಂದು ಉಪಾಹಾರಗಳನ್ನು ಸೇವಿಸಿ ಹೋಗುವುದಷ್ಟೆ ಅಲ್ಲ, ನಾವು ಏನು ಕೆಲಸ ಮಾಡುತ್ತಿದ್ದೀವಿ ಎಂಬುದರ ಬಗ್ಗೆ ಸಾರ್ವಜನಿಕರಿಗೆ ಹಾಗೂ ನಮ್ಮನ್ನು ನೇಮಕ ಮಾಡಿದವರಿಗೆ ಗೊತ್ತಾಗಬೇಕು. ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ನಡಾವಳಿಯನ್ನು ಹಾಕುವುದರಿಂದ, ಎಷ್ಟು ಜನಕ್ಕೆ ಸಿಂಡಿಕೇಟ್ ಸಭೆಯಲ್ಲಿ ಏನಾಗಿದೆ ಎಂದು ಗೊತ್ತಾಗುವುದಿಲ್ಲ. ಪ್ರಸ್ತುತ ಕಾಲಮಾನದಲ್ಲಿ ಸೋಷಿಯಲ್ ಮಿಡಿಯಾ ಎಷ್ಟು strong ಆಗಿದೆ ಎಂಬುದು ಗೊತ್ತಾಗಬೇಕಾಗುತ್ತದೆ. ಸರ್ಕಾರದ ಆದೇಶವನ್ನು, ನಿಯಮಗಳನ್ನು ಉಲ್ಲಂಘನೆ ಮಾಡಲು ನಿಮಗೂ ಅವಕಾಶವಿಲ್ಲ, ನಮಗೂ ಅವಕಾಶವಿಲ್ಲವೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಸರ್ಕಾರಕ್ಕೆ ಸಿಂಡಿಕೇಟ್ ಸಭೆಯನ್ನು ನೇರ ಪ್ರಸಾರ ಮಾಡುವ ಬಗ್ಗೆ ಪತ್ರ ಬರೆದು, ಸರ್ಕಾರದಿಂದ ಪತ್ರ ದೊರಕಿದ ನಂತರ ನೇರ ಪ್ರಸಾರ ಮಾಡಬೇಕೇ ಬೇಡವೇ ಎಂಬುದರ ಬಗ್ಗೆ ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಡಾ. ಸಿ. ಬಸವರಾಜು ಅವರು ಮಾತನಾಡಿ, ಕಾರ್ಯದರ್ಶಿಗಳಾದ ಕುಲಸಚಿವರಿಗೆ ಸರ್ಕಾರದಿಂದ ಸಿಂಡಿಕೇಟ್ ಸಭೆಯನ್ನು ನೇರ ಪ್ರಸಾರ ಮಾಡಲು ಆದೇಶವಿದೆಯೇ ಎಂದು ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಹಿಂದೆ ಇದ್ದ ಸರ್ಕಾರವಿದ್ದಾಗ ಆದೇಶವಿತ್ತು, ಪ್ರಸ್ತುತ ಸರ್ಕಾರದಿಂದ ಯಾವುದೇ ಆದೇಶ ಬಂದಿರುವುದಿಲ್ಲವೆಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಸರ್ಕಾರದ ಬದಲಾವಣೆಯಾದರೆ ಕಾನೂನು ಬದಲಾವಣೆಯಾಗುವುದೇ ಎಂದು ಕೇಳಿದರು.

ತದನಂತರ ಕುಲಸಚಿವರು, ದಿನಾಂಕ: 30.07.2024 ಹಾಗೂ 14.08.2024ರಂದು ನಡೆದ ಸಿಂಡಿಕೇಟ್‌ನ ನಾಲ್ಕನೇ ಮತ್ತು ಐದನೇ ಸಾಮಾನ್ಯ ಸಭೆಗಳ ನಡಾವಳಿಯ ದೃಢೀಕರಣದ ಬಗ್ಗೆ ವಿಷಯವನ್ನು ಮಂಡಿಸುತ್ತಾ, ಸಿಂಡಿಕೇಟ್ ಸದಸ್ಯರುಗಳು ನಡಾವಳಿಯ ಬಗ್ಗೆ ಏನಾದರೂ ಆಕ್ಷೇಪಣೆಗಳನ್ನು ತಿಳಿಸಿದರೆ ತಿದ್ದುಪಡಿ ಮಾಡಿಕೊಳ್ಳುವುದಾಗಿ ತಿಳಿಸಿದರು.

ಶ್ರೀ ಸಿ. ನಾಗರಾಜುರವರು ಮಾತನಾಡಿ, ದಿನಾಂಕ : 14.08.2024 ರಂದು ನಡೆದ ಸಾಮಾನ್ಯ ಸಭೆಯ ನಡಾವಳಿಯಲ್ಲಿನ 5.1ರ ವಿಷಯಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯದ ತಾಂತ್ರಿಕ ಶಾಲೆಯ ಮೂಲಭೂತ ಸೌಲಭ್ಯಗಳು ಹಾಗೂ ಅತಿಥಿ ಉಪನ್ಯಾಸಕರುಗಳ ಆಯ್ಕೆಗೆ ಸಂಬಂಧಿಸಿದಂತೆ ಕಳೆದ ಸಿಂಡಿಕೇಟ್ ಸಭೆಯಲ್ಲಿ ಪ್ರಸ್ತಾಪಿಸಲಾಯಿತು. ಇದಕ್ಕೆ ಸಂಬಂಧಿಸಿದಂತೆ ಮಾನ್ಯ ಅಧ್ಯಕ್ಷರು ಕೈಗೊಂಡಿರುವ ಕ್ರಮದ ಬಗ್ಗೆ ತಿಳಿಸಬೇಕೆಂದು ಕೋರಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಅತಿಥಿ ಉಪನ್ಯಾಸಕರ ಸಂದರ್ಶನ ನಡೆಸಲಾಗಿದ್ದು, ಟೇಬಲ್ ಹಾಗೂ ಕುರ್ಚಿಗಳನ್ನು ಖರೀದಿಸುವ ಸಂಬಂಧ ಟೆಂಡರ್ ಆಹ್ವಾನಿಸಲಾಗಿದೆ. ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಓರಿಯೆಂಟೇಷನ್ ಪ್ರೋಗ್ರಾಂ ನಡೆಸಲಾಗಿದೆ. ರೊಬೊಟಿಕ್ಸ್ ಮತ್ತು ಕಂಪ್ಯೂಟರ್ ಸೈನ್ಸ್ ವಿಷಯದಲ್ಲಿ ಪ್ರಾಯೋಗಾಲಯಗಳ ಕೊರತೆಯನ್ನು ಸರಿದೂಗಿಸಬೇಕು. ವಿದ್ಯಾರ್ಥಿಗಳ ಪ್ರವೇಶಾತಿ ಸಂಖ್ಯೆ ಹೆಚ್ಚುವರಿಯಾಗಿರುವ ಹಿನ್ನೆಲೆಯಲ್ಲಿ ಕ್ಯಾಂಟಿನ್ ಪ್ರಾರಂಭಿಸುವ ಆಲೋಚನೆಯಿದೆ. ಪ್ರಸ್ತುತ ಸ್ಕೂಲ್ ಆಫ್ ಆರ್ಕಿಟೆಕ್ಚರ್ ಹಾಗೂ ಪ್ಲಾನಿಂಗ್‌ನಲ್ಲಿ ಕ್ಯಾಂಟಿನ್ ಇದ್ದು, ಅದನ್ನು ನವೀಕರಿಸಬಹುದೇ ಅಥವಾ ಬೇರೆ ಕ್ಯಾಂಟಿನ್ ಪ್ರಾರಂಭಿಸುವುದೇ ಎಂಬುದರ ಬಗ್ಗೆ ಸದ್ಯದಲ್ಲೇ ನಿರ್ಣಯಿಸಲಾಗುವುದು. ಸಾವಿರಾರು ವಿದ್ಯಾರ್ಥಿಗಳು ಕಾನೂನು ಶಾಲೆ ಹಾಗೂ ಸ್ಕೂಲ್ ಆಫ್ ಪ್ಲಾನಿಂಗ್‌ನಲ್ಲಿ ವ್ಯಾಸಂಗ ಮಾಡುತ್ತಿದ್ದು, ತಮ್ಮ ಅಧಿಕಾರವಧಿಯಲ್ಲಿ ಇಂಜಿನಿಯರಿಂಗ್ ಕಾಲೇಜನ್ನು ಮಾದರಿ ಕಾಲೇಜಾಗಿ ಮಾಡಬೇಕೆಂದು ನಿರ್ಧರಿಸುವುದಾಗಿ ತಿಳಿಸಿದರು. 30 ವರ್ಷಗಳ ನಂತರ ಇಂಜಿನಿಯರಿಂಗ್ ಕಾಲೇಜನ್ನು ವಿಶ್ವವಿದ್ಯಾನಿಲಯದಲ್ಲಿ ಪ್ರಾರಂಭಿಸಲಾಗಿದ್ದು, ಪ್ರಸ್ತುತ ಮೈಸೂರು ವಿಶ್ವವಿದ್ಯಾನಿಲಯದ ಸ್ಕೂಲ್ ಆಫ್ ಇಂಜಿನಿಯರಿಂಗ್ ಕಾಲೇಜು ನಾಲ್ಕನೇ ವರ್ಷಕ್ಕೆ ಪಾದಾರ್ಪಣೆ ಮಾಡಿ, ಈ ಶೈಕ್ಷಣಿಕ ಸಾಲಿನಲ್ಲಿ ಇಂಜಿನಿಯರಿಂಗ್ ಕೋರ್ಸ್ ಪೂರ್ಣಗೊಳಿಸುವ ವಿದ್ಯಾರ್ಥಿಗಳಿಗೆ ಹಾಗೂ ಹೊಸದಾಗಿ ಸೇರ್ಪಡೆಗೊಳ್ಳುವ ವಿದ್ಯಾರ್ಥಿಗಳಿಗೆ ಅವರ ವ್ಯಾಸಂಗದೊಂದಿಗೆ Skill Development Programme ಗಳನ್ನು ಆಯೋಜಿಸಿದಲ್ಲಿ ಅನುಕೂಲವಾಗುತ್ತದೆ. ಇಂಜಿನಿಯರಿಂಗ್ ವ್ಯಾಸಂಗ ಪೂರ್ಣ ಗೊಳಿಸುವ ವಿದ್ಯಾರ್ಥಿಗಳಲ್ಲಿ ಶೇಕಡ 60 ರಷ್ಟು ವಿದ್ಯಾರ್ಥಿಗಳಿಗೆ campus selection ಮೂಲಕ ಉದ್ಯೋಗ ಒದಗಿಸಬೇಕೆಂಬ ಆಶಯವಿದೆಯೆಂದು ತಿಳಿಸಿದರು.

ಶ್ರೀ ಮಹದೇಶುರವರು ಮಾತನಾಡಿ, ಇಂಜಿನಿಯರಿಂಗ್ ಪೂರ್ಣಗೊಳಿಸಿದ ವಿದ್ಯಾರ್ಥಿಗಳಿಗೆ ಉದ್ಯೋಗ ಒದಗಿಸುವ ನಿಟ್ಟಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಯಾವ ರೀತಿ ತಯಾರಿ ನಡೆಸಿದೆ ಎಂದು ಕೇಳಿದರು.

ಕುಲಸಚಿವ (ಪರೀಕ್ಷಾಂಗ) ರವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಈಗಾಗಲೇ Career Hub ಕೇಂದ್ರವಿದೆ. ಆ ಕೇಂದ್ರದ ಮೂಲಕ ಹಲವಾರು ವಿದ್ಯಾರ್ಥಿಗಳಿಗೆ ಉದ್ಯೋಗ ಸಂಬಂಧ ತರಬೇತಿ ನೀಡುಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಕಾರ್ಪೊರೇಟ್ ವಲಯದಿಂದ ತರಬೇತುದಾರರನ್ನು ಆಹ್ವಾನಿಸಲಾಗುತ್ತಿದ್ದು, ಮುಂದಿನ ತಿಂಗಳು ಹೊಸ ಬ್ಯಾಚ್ ಪ್ರಾರಂಭವಾಗುತ್ತಿದೆಯೆಂದು ಸಭೆಯ ಗಮನಕ್ಕೆ ತಂದರು.

ಮಾನ್ಯ ಕುಲಪತಿಗಳು ಮಾತನಾಡಿ, ಕರ್ನಾಟಕ ಸರ್ಕಾರವು ಹಿಂದಿನ database ಅನ್ನು ಪಡೆದುಕೊಂಡಿದ್ದು, Employment Skill ಗಾಗಿ 50 ಲಕ್ಷ ಅನುದಾನ ನೀಡಿರುವುದಾಗಿ ತಿಳಿಸಿದರು. ಪ್ರಸ್ತುತ ಆದ್ಯತೆಯ ಮೇರೆಗೆ ಇಂಜಿನಿಯರಿಂಗ್, ಎಂ.ಸಿ.ಎ ಹಾಗೂ ಎಂ.ಬಿ.ಎ ಪದವಿಗಳನ್ನು ಪೂರೈಸಿರುವ ಅಭ್ಯರ್ಥಿಗಳನ್ನು ಕೇಂದ್ರಿಕರಿಸಿ,

ಈ ಮೂರು ಪ್ರೋಗ್ರಾಂಗಳಿಗೆ ಕಂಪನಿಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು ಕ್ಯಾಂಪಸ್ ಸೆಲೆಕ್ಷನ್ ನಡೆಸಲಾಗುವುದು. ಕ್ಯಾಂಪಸ್ ಪ್ಲೇಸ್‌ಮೆಂಟ್ ಆಫೀಸರ್ ಇಂಜಿನಿಯರಿಂಗ್ ಕಾಲೇಜಿಗೆ ಬೇಕು. ಇಂಜಿನಿಯರಿಂಗ್ ಕಾಲೇಜು ಸ್ವಯಂ ಹಣಕಾಸು ಯೋಜನೆಯಡಿಯಲ್ಲಿ ನಡೆಯುತ್ತಿದ್ದು, ಇಂಜಿನಿಯರಿಂಗ್ ಪೂರ್ಣಗೊಳಿಸಿದ ವಿದ್ಯಾರ್ಥಿಗಳಿಗೆ ಉದ್ಯೋಗ ಕಲ್ಪಿಸಲು ಪ್ರಯತ್ನ ನಡೆಸಬೇಕು. ಇಲ್ಲದಿದಲ್ಲಿ, ಪ್ರವೇಶಾತಿ ಪ್ರಮಾಣವು ಇಳಿಮುಖವಾಗುತ್ತದೆ. ಈ ನಿಟ್ಟಿನಲ್ಲಿ ಪ್ಲೇಸ್‌ಮೆಂಟ್ ಆಫೀಸರ್ ರವರನ್ನು ನೇಮಕಾತಿ ಮಾಡಬೇಕು. ಇದಕ್ಕೆ ಸಂಬಂಧಿಸಿದಂತೆ ಈಗಾಗಲೇ ನೀಲಿ ನಕ್ಷೆ ಸಿದ್ಧಪಡಿಸಲಾಗಿದ್ದು 5-6 ಕಂಪನಿಗಳೊಂದಿಗೆ ಚರ್ಚಿಸಲಾಗಿದೆಯೆಂದು ಸಭೆಯ ಗಮನಕ್ಕೆ ತಂದರು.

ಶ್ರೀಮತಿ ವಿಜಯಲಕ್ಷ್ಮಿರವರು ಮಾತನಾಡಿ, ನಾನು ಬಂದಿರುವ ಕಾಲೇಜಿನಲ್ಲಿ ಪ್ಲೇಸ್‌ಮೆಂಟ್ ಆಫೀಸರ್ ಇದ್ದು, ಕ್ಯಾಂಪಸ್ ಇಂಟರ್‌ವ್ಯೂಗೆ ಕಂಪನಿಗಳನ್ನು ಆಹ್ವಾನಿಸಲಾಗುತ್ತಿದೆ ಎಂದು ತಿಳಿಸಿದರು.

ಶ್ರೀ ಯಜ್ಞಮೂರ್ತಿರವರು ಮಾತನಾಡಿ, ನಮ್ಮ ಕಾಲೇಜಿನಲ್ಲಿ ಕ್ಯಾಂಪಸ್ ಪ್ಲೇಸ್‌ಮೇಂಟ್ ಆಫೀಸರ್‌ರವರು ಇದ್ದು, ವಿದ್ಯಾರ್ಥಿಗಳು ಕ್ಯಾಂಪಸ್ ಸೆಲೆಕ್ಷನ್ ಮೂಲಕ ಉದ್ಯೋಗ ಪಡೆಯಲು ಈ ಅಧಿಕಾರಿಗಳು ನಿರಂತರವಾಗಿ ಸಹಕಾರ ನೀಡುತ್ತಿದ್ದಾರೆ. ಇದರೊಂದಿಗೆ ನಮ್ಮ ಕಾಲೇಜಿನಲ್ಲಿ ಇನ್‌ಪೋಸಿಸ್ ಸಂಸ್ಥೆಯ ವತಿಯಿಂದ ವಿದ್ಯಾರ್ಥಿಗಳಿಗೆ ತರಬೇತಿಗಳನ್ನು ಸಹ ಆಯೋಜಿಸಲಾಗುತ್ತಿದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, AICTE ಪ್ರಕಾರ ಕಾಲೇಜು ಪ್ರಾರಂಭವಾದ ನಂತರ 21 ದಿನಗಳು ಓರಿಯೆಂಟೇಷನ್ ಪ್ರೋಗ್ರಾಂ ಆಯೋಜಿಸಬೇಕು. ಇನ್‌ಫೋಸಿಸ್ ಸಂಸ್ಥೆಯಲ್ಲಿರುವ ಸಂಪನ್ಮೂಲ ವ್ಯಕ್ತಿಗಳನ್ನು ವಿಶ್ವವಿದ್ಯಾನಿಲಯಕ್ಕೆ ಆಹ್ವಾನಿಸಿ, ವಿದ್ಯಾರ್ಥಿಗಳಿಗೆ ಬೋಧನೆ ಹಾಗೂ ತರಬೇತಿ ನೀಡಲು ಕ್ರಮವಹಿಸಲಾಗುವುದೆಂದು ತಿಳಿಸಿದರು.

ಡಾ. ಬಸವರಾಜು ಸಿ. ರವರು ಮಾತನಾಡಿ, ಇಂಜಿನಿಯರಿಗ್ ಕಾಲೇಜಿಗೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವೇಶಾತಿ ಹೊಂದುತ್ತಿರುವುದು ಮೈಸೂರು ವಿಶ್ವವಿದ್ಯಾನಿಲಯದ ಅದೃಷ್ಟವೇ ಸರಿಯೆಂದು ಹೇಳಿದರು. ಇಂಜಿನಿಯರಿಂಗ್ ಮುಗಿಸಿದ ವಿದ್ಯಾರ್ಥಿಗಳಿಗೆ ಉದ್ಯೋಗವಕಾಶವನ್ನು ಕಲ್ಪಿಸಿದ್ದಲ್ಲಿ ಇಂಜಿನಿಯರಿಂಗ್ ಕಾಲೇಜಿನ ಭವಿಷ್ಯ ಅಡಗಿದೆಯೆಂದು ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಇಂಜಿನಿಯರಿಂಗ್ ಕಾಲೇಜಿನಲ್ಲಿರುವ ಕೆಲವು ಅತಿಥಿ ಉಪನ್ಯಾಸಕರುಗಳಿಗೆ ಕಳೆದ ಬಾರಿ ರೂ.50,000/- ವೇತನ ನೀಡಿದ್ದು, ಸದರಿ ವೇತನವನ್ನು ಹೆಚ್ಚುವರಿ ಮಾಡುವ ಕಾಲಘಟ್ಟದಲ್ಲಿದ್ದು, ವೇತನವನ್ನು ಕಡಿತಗೊಳಿಸಲಾಗಿದೆ ಎಂದು ಮೌಖಿಕವಾಗಿ ತಿಳಿಸಿರುತ್ತಾರೆ. ಇಂಜಿನಿಯರಿಂಗ್ ವ್ಯಾಸಂಗ ಮಾಡಿ, ಪಿಎಚ್.ಡಿ ಪದವಿ ಪಡೆದಿರುವ ಉಪನ್ಯಾಸಕರಿಗೆ ವಿದ್ಯಾರ್ಥಿಗಳಿಗೆ ಬೋಧನೆ ಮಾಡುವವರು ಕೌಶಲ್ಯ ಪೂರ್ಣವಾಗಿರುತ್ತಾರೆ ಅಂತಹವರು ರೂ.35,000/-ಕ್ಕೆ ಕರ್ತವ್ಯ ನಿರ್ವಹಿಸುತ್ತಾರೆಯೇ ಹಾಗೂ ಗುಣಮಟ್ಟವಿರುತ್ತದೆಯೇ ಎಂದು ಕೇಳಿದರು. ಮುಂದುವರೆದು, ನನಗಿರುವ ಮಾಹಿತಿ ಪ್ರಕಾರ ಕಡಿಮೆ ವೇತನವಾಗಿರುವುದರಿಂದ ಕೆಲವು ಉಪನ್ಯಾಸಕರು ಸಂದರ್ಶನಕ್ಕೆ ಬಂದಿರುವುದಿಲ್ಲವೆಂದು ತಿಳಿದು ಬಂದಿದೆ. ಇಂಜಿನಿಯರಿಂಗ್ ಕಾಲೇಜು ಸ್ವಯಂ ಹಣಕಾಸು ಯೋಜನೆಯಲ್ಲಿ ಸಾಕಷ್ಟು ಹಣ ಕ್ರೋಢಿಕರಣವಾಗುತ್ತಿರುವುದರಿಂದ, ಅಲ್ಲಿನ ಬೋಧಕ ವರ್ಗದವರಿಗೆ ಹೆಚ್ಚಿನ ವೇತನವನ್ನು ನೀಡಿ, ಬೋಧನಾ ಗುಣಮಟ್ಟವನ್ನು ಹೆಚ್ಚಿಸಬೇಕೆಂದು ಸಲಹೆ ನೀಡಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಬೋಧಕ ವರ್ಗದವರಿಗೆ ರೂ.35,000/-ಗಳ ವೇತನವನ್ನು ನೀಡುವಂತೆ ಸರ್ಕಾರದ ಆದೇಶವಿರುವುದಾಗಿ ತಿಳಿಸಿದರು. ಹಿಂದಿನ ಕುಲಪತಿಯವರು ಓರ್ವ ಉಪನ್ಯಾಸಕರಿಗೆ ರೂ.50,000/-ಗಳ ವೇತನವನ್ನು ನಿಗದಿಪಡಿಸಿದ್ದು, ಸರ್ಕಾರಿ ಲೆಕ್ಕ ಪರಿಶೋಧಕರ ಆಕ್ಷೇಪಣೆಯನ್ವಯ ವೇತನವನ್ನು ರೂ.50,000/- ದಿಂದ ರೂ.35,000/-ಗಳಿಗೆ ಕಡಿತಗೊಳಿಸ ಲಾಯಿತು. ಇಂಜಿನಿಯರಿಂಗ್ ಕಾಲೇಜಿನ ಬೋಧಕರಿಗೆ ಹೆಚ್ಚುವರಿಯಾಗಿ ವೇತನ ಪಾವತಿಸಬೇಕು. ಆದರೆ, ವಿಶ್ವವಿದ್ಯಾನಿಲಯವು ಸರ್ಕಾರದ

ಅಂಗಸಂಸ್ಥೆಯಾಗಿರುವುದರಿಂದ ಸರ್ಕಾರಕ್ಕೆ ಪತ್ರ ಬರೆಯುವುದಾಗಿ ತಿಳಿಸಿದರು. ಕಂಪ್ಯೂಟರ್ ಸೈನ್ಸ್‌ಗೆ ಅರ್ಹ ಶಿಕ್ಷಕರು ಸಿಗುತ್ತಿಲ್ಲ. ಹೆಚ್ಚುವರಿಯಾಗಿ ವೇತನವನ್ನು ನೀಡಲು ಸಾಧ್ಯವಾಗುವುದಿಲ್ಲ. ಏನೇ ಬದಲಾವಣೆ ಮಾಡಬೇಕಾದರೂ ಸರ್ಕಾರದಿಂದ ಅನುಮತಿ ಪಡೆಯಬೇಕು ಈ ಹಿನ್ನೆಲೆಯಲ್ಲಿ ಸರ್ಕಾರಕ್ಕೆ ಪತ್ರ ಬರೆದು ಅನುಮತಿ ಪಡೆಯಲಾಗುವುದೆಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್‌ರವರು ಮಾತನಾಡಿ, ಬೋಧಕ ಸಿಬ್ಬಂದಿಯವರ ಕೊರತೆಯಿದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಪ್ರಸ್ತುತ ಅತಿಥಿ ಉಪನ್ಯಾಸಕರ ಆಯ್ಕೆ ಸಂಬಂಧ ಸಂದರ್ಶನ ನಡೆಸಲಾಗಿದೆ. ಬೋಧಕರ ಕೊರತೆಯನ್ನು ನೀಗಿಸಲು CIST ಹಾಗೂ ಕಂಪ್ಯೂಟರ್ ಸೈನ್ಸ್ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕರನ್ನೆ ಇಂಜಿನಿಯರಿಂಗ್ ಕಾಲೇಜಿಗೆ ನಿಯೋಜಿಸಲಾಗಿದೆ. ಇಂಜಿನಿಯರಿಂಗ್, ಎಂಬಿಎ ಮತ್ತು ಬಿಸಿಎ ಪ್ರೋಗ್ರಾಂಗಳಿಗೆ ಅರ್ಹ ಶಿಕ್ಷಕರುಗಳ ಕೊರತೆಯಿರುವುದರಿಂದ ಇಂಜಿನಿಯರಿಂಗ್ ಕಾಲೇಜಿಗೆ ಅರ್ಹ ಶಿಕ್ಷಕರು ದೊರಕಿದಲ್ಲಿ, ನೇರ ಸಂದರ್ಶನದ ಮೂಲಕ ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳಲಾಗುವುದು.

ಶ್ರೀ ಗೋಕುಲ್ ಗೋವರ್ಧನ್ ರವರು ಮಾತನಾಡಿ, CISTನ ಬೋಧಕರನ್ನು ಇಂಜಿನಿಯರಿಂಗ್ ಕಾಲೇಜಿಗೆ ನಿಯೋಜಿಸುವ ರೀತಿಯಲ್ಲಿ ಬೋಧಕೇತರ ಸಿಬ್ಬಂದಿಗಳನ್ನು ಇಂಜಿನಿಯರಿಂಗ್ ಕಾಲೇಜಿನಲ್ಲಿ ಕರ್ತವ್ಯ ನಿರ್ವಹಿಸಲು ಅವಕಾಶ ಮಾಡಿಕೊಡಬೇಕೆಂದು ತಿಳಿಸಿದರು.

ಶ್ರೀ ಮಹದೇಶುರವರು ಮಾತನಾಡಿ, CIST ಅನ್ನು ಮುಚ್ಚಲಾಗುತ್ತದೆಯೇ ಎಂದು ಕೇಳಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಬಿಸಿಎ ಪದವಿ ಪ್ರೋಗ್ರಾಂ ಪ್ರಾರಂಭಿಸಿರುವುದರಿಂದ CISTನಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಇಳಿಮುಖವಾಗಿದೆಯೆಂದು ತಿಳಿಸಿದರು.

ಡಾ. ಬಸವರಾಜು ಸಿ ರವರು ಮಾತನಾಡಿ, ಸ್ನಾತಕೋತ್ತರ ಪದವಿ ಪೂರ್ಣಗೊಳಿಸಿ ಪಿಎಚ್.ಡಿ.ಗೆ ಸೇರ್ಪಡೆಗೊಳ್ಳುವ ಹಂತದಲ್ಲಿ ವಿದ್ಯಾರ್ಥಿಗಳು CISTಗೆ ಸೇರ್ಪಡೆಗೊಂಡು ಮೂರು/ಆರು ತಿಂಗಳ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಪೂರ್ಣಗೊಳಿಸುತ್ತಿದ್ದರು ಹಾಗೂ ಸದರಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯದ ಪ್ರವೇಶಾತಿ ಹಾಗೂ ವಿದ್ಯಾರ್ಥಿವೇತನವನ್ನು ಪಡೆದುಕೊಳ್ಳುತ್ತಿದ್ದರು ಎಂದು ತಿಳಿಸಿದರು.

ಶ್ರೀ ಸಿ.ನಾಗರಾಜು ರವರು ಮಾತನಾಡಿ, ಈ ಹಿಂದೆ ಕರ್ತವ್ಯ ನಿರ್ವಹಿಸುತ್ತಿದ್ದ ನಿರ್ದೇಶಕರ ಅವಧಿ ಪೂರ್ಣಗೊಂಡಿದ್ದು, ಇಂಜಿನಿಯರಿಂಗ್ ವಿಭಾಗದಲ್ಲಿ ಅನುಭವವಿರುವ ನಿರ್ದೇಶಕರನ್ನು ನೇಮಕ ಮಾಡಿ ಎಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಇಂಜಿನಿಯರಿಂಗ್ ಕಾಲೇಜಿನ ನಿರ್ದೇಶಕರ ಅವಧಿಯು ಅಂತ್ಯಗೊಂಡಿದ್ದ ಹಿನ್ನೆಲೆಯಲ್ಲಿ, ಸದರಿಯವರನ್ನು ಸೇವೆಯಿಂದ ಬಿಡುಗಡೆಗೊಳಿಸಲಾಗಿದೆ. ಪ್ರಸ್ತುತ ಹೊಸದಾಗಿ ನಿರ್ದೇಶಕರ ಆಯ್ಕೆ ಸಂಬಂಧ ಸಂದರ್ಶನವನ್ನು ಸದ್ಯದಲ್ಲಿಯೇ ನಡೆಸಿ ಸಮರ್ಥ ಅಭ್ಯರ್ಥಿಯನ್ನು ಆಯ್ಕೆ ಮಾಡಿಕೊಳ್ಳಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಶ್ರೀ ಸಿ.ನಾಗರಾಜು ರವರು ಮಾತನಾಡಿ, 1086 ವಿದ್ಯಾರ್ಥಿಗಳಿಗೆ 50 ಲೀಟರ್ ಸಾಮರ್ಥ್ಯದ ಕುಡಿಯುವ ನೀರಿನ ಘಟಕವಿದೆ. ಸಂಪ್‌ಗಳನ್ನು ಸ್ವಚ್ಛಗೊಳಿಸಿಲ್ಲ ಹಾಗೂ ಶೌಚಾಲಯಗಳಲ್ಲಿ ಕಿಟಕಿ ಬಾಗಿಲುಗಳು ಇರುವುದಿಲ್ಲ ಎಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಈಗಾಗಲೇ ಕುಡಿಯುವ ನೀರಿಗೆ ಹೆಚ್ಚಿನ ಆದ್ಯತೆ ನೀಡಿ ವಿದ್ಯಾರ್ಥಿಗಳ ಅಗತ್ಯಕ್ಕೆ ತಕ್ಕಂತೆ ನೀರಿನ ವ್ಯವಸ್ಥೆ ಕಲ್ಪಿಸಲಾಗಿದೆ ಹಾಗೂ ವಿದ್ಯಾರ್ಥಿನಿಲಯಗಳು/ಅಧ್ಯಯನ ವಿಭಾಗಗಳು ಹಾಗೂ ಇತರೆ ಕಛೇರಿಗಳಲ್ಲಿರುವ ಎಲ್ಲಾ ಸಂಪ್‌ಗಳನ್ನು ಸ್ವಚ್ಛಗೊಳಿಸಲಾಗಿದೆಯೆಂದು ತಿಳಿಸಿದರು.

ಶ್ರೀ ಮಹದೇಶುರವರು ಮಾತನಾಡಿ, ಕೆಲವು ಚೇರ್ ಹಾಗೂ ಡೆಸ್ಕ್‌ಗಳನ್ನು ನಮ್ಮ ವಿಶ್ವವಿದ್ಯಾನಿಲಯ ಜೆಮ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಿ ಖರೀದಿ ಮಾಡಲಾಗಿದೆ. ಇಂಜಿನಿಯರಿಂಗ್ ವಿಭಾಗದವರು ನಿಯಮವನ್ನು ಉಲ್ಲಂಘಿಸಿದ್ದಾರೆ. ಇದಕ್ಕೆ ಸೂಕ್ತ ದಾಖಲಾತಿಗಳನ್ನು ಒದಗಿಸಲಾಗುವುದೆಂದು ತಿಳಿಸಿದರು. 15ನೇ ತಾರೀಖು ಕುಲಸಚಿವರು ಪತ್ರವನ್ನು ಇಂಜಿನಿಯರಿಂಗ್ ವಿಭಾಗದವರಿಗೆ ಬರೆಯುತ್ತಾರೆ. ಇಂಜಿನಿಯರಿಂಗ್ ವಿಭಾಗದವರು 15ನೇ ತಾರೀಖಿನಂದೇ ಪತ್ರವನ್ನು ಸ್ವೀಕರಿಸಿರುತ್ತಾರೆ. ಈ ಸಂಬಂಧ ನನ್ನ ಬಳಿ ದಾಖಲೆಗಳಿವೆ ಹಾಗೂ ಜೆಮ್ ಪೋರ್ಟಲ್‌ನಲ್ಲಿ ಟೆಂಡರ್ ಸಂಬಂಧಿತ ಮಾಹಿತಿಗಳನ್ನು 14ನೇ ತಾರೀಖಿನಂದೇ ಅಪ್‌ಲೋಡ್ ಮಾಡಿರುತ್ತಾರೆ. ಕುಲಸಚಿವರ ಪತ್ರಕ್ಕೂ ಜೆಮ್ ಪೋರ್ಟಲ್‌ನಲ್ಲಿ ಮಾಹಿತಿ ಅಪ್‌ಲೋಡ್ ಮಾಡಿರುವುದಕ್ಕೂ ತಾಳೆಯಾಗುತ್ತಿರುವುದಿಲ್ಲ ಎಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಸಿಂಡಿಕೇಟ್ ತೀರ್ಮಾನ ಬಂದ ನಂತರ ಇಂಜಿನಿಯರಿಂಗ್ ವಿಭಾಗದವರು ಕ್ರಮಕೈಗೊಂಡಿರುತ್ತಾರೆ. ವಿಶ್ವವಿದ್ಯಾನಿಲಯದ ಮೂಲಭೂತ ಸೌಕರ್ಯಗಳಿಗೆ ಟೆಂಡರ್ ಆಹ್ವಾನಿಸುವ ಸಂದರ್ಭದಲ್ಲಿ ಸಿಂಡಿಕೇಟ್ ಸಭೆಯ ಗಮನಕ್ಕೆ ತರುವುದಾಗಿ ತಿಳಿಸಿದರು.

ಶ್ರೀ ಮಹದೇಶುರವರು ಮಾತನಾಡಿ, ಜೆಮ್ ಪೋರ್ಟಲ್‌ನಲ್ಲಿ ಟೆಂಡರ್ ಆಹ್ವಾನಿಸಿರುವ ವಿಷಯವನ್ನು ಸಿಂಡಿಕೇಟ್ ಸಭೆಯ ಗಮನಕ್ಕೆ ತಂದಿರುವುದಿಲ್ಲ. ಬದಲಾಗಿ ದಿನಾಂಕ: 15-03-2024 ರಂದು ಕಾರ್ಯಪಾಲಕ ಅಭಿಯಂತರರ ಕಛೇರಿಯಲ್ಲಿ ಪತ್ರವು ಸ್ವೀಕೃತವಾಗಿದ್ದು, ಸ್ವೀಕೃತವಾಗುವ ಮುನ್ನವೇ ಅಂದರೆ ದಿನಾಂಕ: 14-03-2024 ರಂದೇ ಜೆಮ್ ಪೋರ್ಟಲ್ ಟೆಂಡರ್ ಆಹ್ವಾನಿಸಲು ಹೇಗೆ ಸಾಧ್ಯವೆಂದು ತಿಳಿಸುತ್ತಾ ಇದು ನಿಯಮ ಉಲ್ಲಂಘನೆಯಲ್ಲವೇ, ಯಾರಿಗೋ ಒಬ್ಬ ವ್ಯಕ್ತಿಗೆ ಟೆಂಡರ್ ನೀಡುವುದಕ್ಕೆ ಇವರು ಮಾಡಿರುವ ತಂತ್ರ ಅಥವಾ ಷಡ್ಯಂತ್ರನಾ ಎಂದು ಕೇಳಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಜೆಮ್ ಪೋರ್ಟಲ್‌ನಲ್ಲಿ ಭಾರತದಾದ್ಯಂತ ಯಾರು ಬೇಕಾದರೂ ಟೆಂಡರ್‌ನಲ್ಲಿ ಭಾಗವಹಿಸಬಹುದು ಎಂದರು.

ಶ್ರೀ ಮಹದೇಶುರವರು ಮಾತನಾಡಿ, ಜೆಮ್ ಪೋರ್ಟಲ್‌ನಲ್ಲಿ ಐದು ಜನ ಮಾತ್ರ ಇರುತ್ತಾರೆ. ಇಂಜಿನಿಯರಿಂಗ್ ವಿಭಾಗದವರು ಅತ್ಯಂತ ಜಾಣತನದಿಂದ ಟೆಂಡರ್ ಆಹ್ವಾನಿಸುತ್ತಾರೆ. Department name ಅನ್ನು Higher Education Department of Karnataka ಎಂದು ನಮೂದಿಸಿರುತ್ತಾರೆ. ಮೈಸೂರು ವಿಶ್ವವಿದ್ಯಾನಿಲಯದ ಹೆಸರನ್ನು ಎಲ್ಲಿಯೂ ನಮೂದಿಸಿರುವುದಿಲ್ಲ. ಒಂದು ದಿನದ ಮುಂಚೆ ಹೇಗೆ ಅಪ್‌ಲೋಡ್ ಮಾಡಲಾಗುತ್ತದೆ ಎಂದು ಪ್ರಸ್ತಾಪಿಸಿದರು.

ಡಾ. ಬಸವರಾಜು ಸಿ ರವರು ಮಾತನಾಡಿ, ಆದೇಶ ನೀಡುವ ಮೊದಲೇ ಹೇಗೆ ಅಪ್‌ಲೋಡ್ ಮಾಡಲಾಗಿದೆ. ಆ ಉದ್ಯೋಗಿಯನ್ನು ಅಮಾನತ್ತುಗೊಳಿಸಿ ಎಂದು ತಿಳಿಸಿದರು.

ಶ್ರೀ ಮಹದೇಶುರವರು ಮಾತನಾಡಿ, ಶ್ರೀ ಅಶ್ವತ್ಥ್ ಪ್ರಸಾದ್, ಕಾರ್ಯಪಾಲಕ ಅಭಿಯಂತರರನ್ನು ಅಮಾನತ್ತುಗೊಳಿಸಿ ಎಂದು ತಿಳಿಸಿದರು. 14ನೇ ತಾರೀಖು ಅಪ್‌ಲೋಡ್ ಮಾಡುತ್ತಾರೆ. 15ನೇ ತಾರೀಖು ಪತ್ರ ಸ್ವೀಕರಿಸಿರುತ್ತಾರೆ. ಇದು ನಿಯಮ ಉಲ್ಲಂಘನೆಯಲ್ಲವೇ? (procedural lapse) ಎಂದು ಕೇಳಿದರು. ತಾವು ದಿನಾಂಕ 04-07-2024ರಂದು ಮಾನ್ಯ ಕುಲಸಚಿವರಿಗೆ ಪತ್ರ ಬರೆದಿರುವುದಾಗಿ ಹಾಗೂ ಸಂಪೂರ್ಣ ಮಾಹಿತಿ ನೀಡುವಂತೆ ಕೋರಿದ್ದು, ದಿನಾಂಕ 20-8-2024ರಂದು ಪತ್ರ ಮುಖೇನ ಮಾಹಿತಿ ದೊರೆತ್ತಿರುತ್ತದೆ. ತಾವು ಇಂಜಿನಿಯರಿಂಗ್ ವಿಭಾಗದವರಿಗೆ ಕೋರಿರುವ ಮಾಹಿತಿ ಟೆಂಡರ್ ನಂ.4780885 ರೂ.2,16,00,000/-ಗಳಾಗಿದ್ದು, ಅವರು ನೀಡಿರುವ ಮಾಹಿತಿಯೇ ಬೇರೆ ಹಾಗೂ ಟೆಂಡರ್ ನಂಬರ್ ಹೊಂದಾಣಿಕೆಯಾಗುತ್ತಿಲ್ಲ. ಅವರು FIRE WALLಗೆ ಸಂಬಂಧಿಸಿದಂತೆ ಇಂಜಿನಿಯರಿಂಗ್ ವಿಭಾಗದವರಿಂದ ಟೆಂಡರ್ ಆಹ್ವಾನಿಸಿರುವುದರ ಮಾಹಿತಿ ನೀಡಿರುತ್ತಾರೆ. ಆದರೆ ತಾವು ಜೆಮ್ ಪೋರ್ಟಲ್‌ಗೆ ಸಂಬಂಧಿಸಿದಂತೆ

ಮಾಹಿತಿಯನ್ನು ಕೋರಿರುವುದಾಗಿ ತಿಳಿಸಿದರು. ಇದು ಅವರ ಬೇಜವಾಬ್ದಾರಿ ಹಾಗೂ ವಂಚನೆಯನ್ನು ನಿರೂಪಿಸುತ್ತದೆ. ಈ ಕುರಿತು ಶ್ರೀ ಅಶ್ವತ್ಥ್ ಪ್ರಸಾದ್ ರವರು ಸಭೆಗೆ ಬಂದಿರುವುದರಿಂದ ಅವರು ಉತ್ತರಿಸಬೇಕು. ಇವರು ಮಾಡಿರುವ ತಪ್ಪುಗಳಿಂದ ನಮ್ಮ ವಿಶ್ವವಿದ್ಯಾನಿಲಯಕ್ಕೆ ರೂ.೮೦.೦೦ ಲಕ್ಷಗಳು ನಷ್ಟವಾಗಿದೆಯೆಂದು ಆರೋಪಿಸಿದರು. ಒಂದು ದಿನ ಮುಂಚೆ ಹೇಗೆ ಅಪ್‌ಲೋಡ್ ಮಾಡಿದರು? ಹಾಗೂ ನಾನು ಕೇಳಿರುವ ಪ್ರಶ್ನೆನೇ ಬೇರೆ ಅವರು ನೀಡಿರುವ ಉತ್ತರವೇ ಬೇರೆ, ಆದ್ದರಿಂದ ಸರಿಯಾದ ಉತ್ತರವನ್ನು ನೀಡಬೇಕೆಂದು ಕೋರಿದರು.

ಶ್ರೀ ಅಶ್ವತ್ಥ್ ಪ್ರಸಾದ್, ಕಾರ್ಯಪಾಲಕ ಅಭಿಯಂತರರು ಮಾತನಾಡಿ, ನಾವು ಮಾಹಿತಿಯನ್ನು ಬೇಗ ನೀಡಿದ್ದೇವೆ ವಿಳಂಬ ಮಾಡಿಲ್ಲವೆಂದು ತಿಳಿಸಿದರು.

ಶ್ರೀ ಮಹದೇಶುರವರು ಮಾತನಾಡಿ, ಅಂಚೆ ಕಛೇರಿಯಿಂದ ಬಂದಿರುವ ಪತ್ರಕ್ಕೆ ಸೀಲ್ ಹಾಗೂ ದಿನಾಂಕವಿದೆ ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಶ್ರೀ ಮಹದೇಶುರವರು ನೀಡಿದ ಪತ್ರವನ್ನು ಸಂಬಂಧಪಟ್ಟ ಶಾಖೆಯಲ್ಲಿ ಕಾರ್ಯನಿರ್ವಹಿಸುವವರಿಗೆ ತಲುಪಿಸಲಾಯಿತು, ಅವರಿಂದ ಬಂದ ಮಾಹಿತಿಯನ್ನು ನಮ್ಮ ಕಾರ್ಯನಿರ್ವಾಹಕರು process ಮಾಡಲು ಇಟುಕೊಂಡಿದ್ದರು. ಆದರೆ ಅವರಿಗೆ ಅಪಘಾತವಾಯಿತು. ಕಾರ್ಯನಿರ್ವಾಹಕರು ಲಾಕ್ ಮಾಡಿ ಕೀಯನ್ನು ತೆಗೆದುಕೊಂಡು ಹೋಗಿದ್ದರು. ಕಳೆದ ಸಿಂಡಿಕೇಟ್ ಸಭೆಯಲ್ಲಿ ಸದರಿ ವಿಷಯವನ್ನು ಪ್ರಸ್ತಾಪಿಸಿದ ಹಿನ್ನೆಲೆಯಲ್ಲಿ ಸಭೆ ಮುಗಿದ ನಂತರ ಕಡತವನ್ನು ಹುಡುಕಿಸಿದಾಗ ಕಾರ್ಯನಿರ್ವಾಹಕರು ಲಾಕ್ ಮಾಡಿರುವ ವಿಷಯ ತಿಳಿಯಿತು. ಇಂಜಿನಿಯರಿಂಗ್ ವಿಭಾಗದವರು ನೀಡಿರುವ ವರದಿಯನ್ನು ಯಥಾವತ್ತಾಗಿ ಸಿಂಡಿಕೇಟ್ ಸದಸ್ಯರಿಗೆ ತಲುಪಿಸುವ ವ್ಯವಸ್ಥೆ ಮಾಡಬೇಕೆಂದು ತಿಳಿಸಲಾಗಿತ್ತು. ಆದರೆ, ಕಾರ್ಯನಿರ್ವಾಹಕರಿಗೆ ಅಪಘಾತವಾಗಿದ್ದರಿಂದ ವಿಳಂಬವಾಗಿದೆ ಎಂದು ಸಭೆಯ ಗಮನಕ್ಕೆ ತಂದರು.

ಶ್ರೀ ಮಹದೇಶುರವರು ಮಾತನಾಡಿ ಒಂದೂವರೆ ತಿಂಗಳ ನಂತರ ನಾನು ಕೇಳಿರುವ ಪ್ರಶ್ನೆನೆ ಬೇರೆ ಇವರು ನೀಡಿರುವ ಉತ್ತರವೇ ಬೇರೆ ಹಾಗೂ ನಾನು ಕೇಳಿರುವ ಟೆಂಡರ್ ಸಂಬಂಧಿತ ಮಾಹಿತಿಯೇ ಬೇರೆ. ಇವರು ನೀಡಿರುವ ಮಾಹಿತಿಯೇ ಬೇರೆದಾಗಿರುತ್ತದೆ ಎಂದರು.

ಶ್ರೀ ಗೋಕುಲ್ ಗೋವರ್ಧನ್ ರವರು ಮಾತನಾಡಿ ಯಾರ ಡಿಜಿಟಲ್ ಕೀ ಮೂಲಕ ಟೆಂಡರ್ ಸಂಬಂಧಿತ ಮಾಹಿತಿಯನ್ನು ಅಪ್‌ಲೋಡ್ ಮಾಡಲಾಗುತ್ತದೆ. ಅದು ಅಧ್ಯಕ್ಷರ ಡಿಜಿಟಲ್ ಕೀ ಯೇ ಅಥವಾ ಸದಸ್ಯ ಕಾರ್ಯದರ್ಶಿಯವರ ಡಿಜಿಟಲ್ ಕೀ ಯೇ ಎಂದು ಕೇಳಿದರು.

ಶ್ರೀ ಮಹದೇಶುರವರು ಮಾತನಾಡಿ ತಮ್ಮ ಬಳಿ ಪೋರ್ಟಲ್‌ನಲ್ಲಿ ಅಪ್‌ಲೋಡ್ ಆಗಿರುವುದಕ್ಕೆ ದಾಖಲೆಯಿದೆ ಎಂದು ತಿಳಿಸಿದರು.

ಶ್ರೀ ಅಶ್ವತ್ಥ್ ಪ್ರಸಾದ್‌ರವರು ಮಾತನಾಡಿ, 14ನೇ ತಾರೀಖಿನಂದೇ ಅಪ್‌ಲೋಡ್ ಮಾಡಲಾಗಿದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಕುಲಸಚಿವರು ಟೆಂಡರ್ ಆಹ್ವಾನಿಸುವ ಆದೇಶ ಪತ್ರಕ್ಕೆ 13-03-2024ರಂದೇ ಸಹಿ ಮಾಡಿರುತ್ತಾರೆ. ಈ ಹಿನ್ನೆಲೆಯಲ್ಲಿ ದಿನಾಂಕ: 14-03-2024ರಂದು ಟೆಂಡರ್ ಸಂಬಂಧಿತ ಮಾಹಿತಿಗಳನ್ನು ಕಾರ್ಯಪಾಲಕ ಅಭಿಯಂತರರು, ವಿ.ವಿ.ಇಂಜಿನಿಯರಿಂಗ್ ವಿಭಾಗದವರು GeM Portal ಮೂಲಕ ಟೆಂಡರ್ ಸಂಬಂಧಿತ ಮಾಹಿತಿಗಳನ್ನು ಅಪ್‌ಲೋಡ್ ಮಾಡಲಾಗಿರುತ್ತದೆ. ಎಷ್ಟೋ ಬಾರಿ ಟಪಾಲಿನಲ್ಲಿ ಪತ್ರಗಳನ್ನು ಕಳುಹಿಸಲು ವಿಳಂಬವಾಗುವುದರಿಂದ ಪತ್ರಗಳನ್ನು/ಆದೇಶಗಳನ್ನು ವಾಟ್ಸಫ್ ಮೂಲಕ ಸಹ ಕಳುಹಿಸಿ ಕ್ರಮವಹಿಸಲಾಗಿರುತ್ತದೆ. ಹಾಗೂ ಒಂದೇ Campus ಆಗಿರುವುದರಿಂದ ಮುದ್ದಾಂ ಪಡೆದಿರುತ್ತಾರೆಂದು ತಿಳಿಸಿದರು.

ಶ್ರೀ ಮಹದೇಶುರವರು ಮಾತನಾಡಿ 14ನೇ ತಾರೀಖಿನಂದು ಪತ್ರವನ್ನು ಸ್ವೀಕರಿಸಿರುತ್ತಾರೆ. ಕಛೇರಿ ಆದೇಶ ಬಂದ ನಂತರ ಕ್ರಮಕೈಗೊಳ್ಳುತ್ತಾರಲ್ಲವೇ? ಎಂದು ಕೇಳಿದರು. ಒಂದು ದಿನ ವಿಳಂಬವಾದರೂ ಏನು ಆಗುತ್ತಿರಲಿಲ್ಲ ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ರವರು ಮಾತನಾಡಿ, ಮೌಖಿಕವಾಗಿ ಹೇಳಿದರೆ ಎಲ್ಲಾ ಕೆಲಸಗಳು ವಿಶ್ವವಿದ್ಯಾನಿಲಯದಲ್ಲಿ ಕಾರ್ಯಗತವಾಗುತ್ತದೆಯೇ ಎಂದು ಕೇಳಿದರು.

ಶ್ರೀ ಮಹದೇಶುರವರು ಮಾತನಾಡಿ ಇಂಜಿನಿಯರಿಂಗ್ ವಿಭಾಗದವರಿಂದ ವಂಚನೆಯಾಗಿದೆ (fraud) ಎಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಪದಗಳನ್ನು ಸರಿಯಾಗಿ ಉಪಯೋಗಿಸಿ fraud ಎಂಬ ತೀರ್ಮಾನಕ್ಕೆ ಬರಬೇಡಿ ಎಂದು ತಿಳಿಸಿದರು.

ಡಾ. ಶಿಲ್ಪರವರು ಮಾತನಾಡಿ, 14ನೇ ತಾರೀಖಿನಂದು ಸ್ವೀಕರಿಸಿರುವುದಕ್ಕೆ ತಮ್ಮ ಬಳಿ ದಾಖಲೆ ಇದೆಯೇ? ಎಂದು ಕೇಳಿದರು.

ಶ್ರೀ ಮಹದೇಶುರವರು ಮಾತನಾಡಿ, ರೂ.2.25 ಕೋಟಿ ರೂಪಾಯಿಯ ಟೆಂಡರ್ ಅನ್ನು ಮೌಖಿಕವಾಗಿ ಹೇಳಿದ್ದಲ್ಲಿ ಕ್ರಮವಹಿಸಲಾಗುತ್ತದೆಯೇ? ಅದಕ್ಕೆ ವಿಶ್ವವಿದ್ಯಾನಿಲಯದಲ್ಲಿ ಅವಕಾಶವಿಯೇ ಎಂದು ಕೇಳಿದರು.

ಡಾ. ಶಿಲ್ಪರವರು ಮಾತನಾಡಿ, ಕಾರ್ಯನಿರ್ವಾಹಕರು ಕರ್ತವ್ಯಕ್ಕೆ ರಜೆ ಹಾಕಿದ ಸಂದರ್ಭದಲ್ಲಿ ಕೀಯನ್ನು ಕೊಟ್ಟು ಹೋಗುವುದಿಲ್ಲವೇ ಎಂದು ಕೇಳಿದರು.

ಕುಲಸಚಿವರು ಮಾತನಾಡಿ, ಕಾರ್ಯನಿರ್ವಾಹಕರು ಕರ್ತವ್ಯಕ್ಕೆ ರಜೆ ಹಾಕಿದ ಸಂದರ್ಭದಲ್ಲಿ ಅವರು ಬೇರೆಯವರಿಗೆ ಕೀಯನ್ನು ಕೊಡುವುದಿಲ್ಲವೆಂದು ತಿಳಿಸಿದರು.

ಡಾ. ಬಸವರಾಜು ಸಿ ರವರು ಮಾತನಾಡಿ, ಮಾನ್ಯ ಕುಲಪತಿಯವರ ಸೂಚನೆ ಮೇರೆಗೆ ದಿನಾಂಕ: 13-03-2024 ರಂದು ಟೆಂಡರ್ ಆಹ್ವಾನಿಸಲು ಕಾರ್ಯಪಾಲಕ ಅಭಿಯಂತರರಿಗೆ ಆದೇಶವನ್ನು ನೀಡಿರುತ್ತೀರಿ, ಆದರೆ, ತಮ್ಮ ಕಛೇರಿಯಲ್ಲಿ ಸದರಿ ಪತ್ರವು ದಿನಾಂಕ:15-03-2024 ರಂದು ಪತ್ರವನ್ನು ಸ್ವೀಕರಿಸಿರುತ್ತೀರಿ, ಆದರೆ, ನೀವು ಯಾವ ದಿನಾಂಕದಂದು ಟೆಂಡರ್ ಅಪ್‌ಲೋಡ್ ಮಾಡಿರುತ್ತೀರಿ ಎಂದು ಕೇಳಿದರು.

ಶ್ರೀ ಅಶ್ವತ್ಥ್ ಪ್ರಸಾದ್‌ರವರು ಮಾತನಾಡಿ, ದಿನಾಂಕ 13-03-2024ರಂದು ಆದೇಶವಾಗಿರುವುದು ತಿಳಿದು ಬಂದ ಹಿನ್ನೆಲೆಯಲ್ಲಿ ದಿನಾಂಕ 14-03-2024ರಂದೇ ಟೆಂಡರ್ ಸಂಬಂಧಿತ ಮಾಹಿತಿಗಳನ್ನು ಅಪ್‌ಲೋಡ್ ಮಾಡಲಾಯಿತು ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ, 13ನೇ ತಾರೀಖಿನಂದೇ ಪತ್ರಕ್ಕೆ ಸಹಿ ಮಾಡಲಾಗಿದೆ ಎಂದು ತಿಳಿಸಿದರು.

ಡಾ. ಬಸವರಾಜು ಸಿ. ರವರು ಮಾತನಾಡಿ, ಕುಲಸಚಿವರು 13ನೇ ತಾರೀಖಿನಂದೇ ಸಹಿ ಮಾಡಿರುವುದು ಸರಿ, ಅದೇ ದಿನ ಇಂಜಿನಿಯರಿಂಗ್ ವಿಭಾಗಕ್ಕೆ ಕಾರ್ಯನಿರ್ವಾಹಕರು ತಲುಪಿಸಿ ತಕ್ಷಣವೇ ಆಪ್‌ಲೋಡ್ ಆಯಿತೆ ಎಂದು ಕೇಳಿದರು.

ಶ್ರೀ ಗೋಕುಲ್ ಗೋವರ್ಧನ್‌ರವರು ಮಾತನಾಡಿ, ರೂ. 2.25 ಕೋಟಿ ಟೆಂಡರ್‌ಗೆ ಆದೇಶ ಬರುವ ಮೊದಲೇ ಹೇಗೆ ಆಪ್‌ಲೋಡ್ ಮಾಡುತ್ತಾರೆ? ಎಂದು ಕೇಳಿದರು. ನಾವು ಕೋರುವ ಮಾಹಿತಿಗಳಿಗೆ ಅಪೂರ್ಣವಾದ ಮಾಹಿತಿಯನ್ನು ನೀಡುತ್ತಾರೆ ಎಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಕಡತದ ಪ್ರಕ್ರಿಯೆಗಳನ್ನು ಕಾರ್ಯಪಾಲಕ ಅಭಿಯಂತರರು ವಿವರಿಸಬೇಕೆಂದು ತಿಳಿಸಿದರು.

ಶ್ರೀ ಮಹದೇಶುರವರು ಮಾತನಾಡಿ, ದೂರವಾಣಿ ಮುಖಾಂತರ ಮಾನ್ಯ ಕುಲಪತಿ /ಕುಲಸಚಿವ/ಹಣಕಾಸು ಅಧಿಕಾರಿರವರು ರೂ.2.25 ಕೋಟಿ ಟೆಂಡರ್ ಮಾಡಿ ಎಂದರೆ ಮಾಡುತ್ತೀರಾ, ಆ ಕ್ಷಣದಲ್ಲೇ ಶೀಘ್ರವಾಗಿ ಮಾಡುತ್ತೀರಾ, ಟೆಂಡರ್ ಸಂಬಂಧಿತ ಎಷ್ಟೋ ವಿಷಯಗಳನ್ನು ಅಪ್‌ಲೋಡ್ ಮಾಡಬೇಕು. ಇಷ್ಟೊಂದು ವಿಷಯಗಳನ್ನು ಅರ್ಧ ಗಂಟೆಯಲ್ಲಿ/ಅರ್ಧ ದಿನದಲ್ಲಿ ಅಪ್‌ಲೋಡ್ ಮಾಡಲು ಸಾಧ್ಯವೇ ಎಂದು ಕೇಳಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಯಾವುದಾದರೂ ಟೆಂಡರ್ ಪ್ರಕ್ರಿಯೆ ಪ್ರಾರಂಭವಾಗುವ ಮೊದಲು ಸಮಿತಿಯನ್ನು ರಚಿಸಲಾಗುವುದು, ಕುಲಸಚಿವ ಹಾಗೂ ಕುಲಪತಿಯವರಿಂದ ಅನುಮೋದನೆ ಪಡೆದ ನಂತರ ಟೆಂಡರ್ ಪೋರ್ಟಲ್‌ನಲ್ಲಿ ಆಪ್‌ಲೋಡ್ ಮಾಡಲಾಗುತ್ತದೆ ಎಂದು ತಿಳಿಸಿದರು.

ಶ್ರೀ ಮಹದೇಶುರವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ ಹೆಸರಿನ ಬದಲು Higher Education of Karnataka ಎಂದು ನಮೂದಾಗಿದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ನಾನು ಯಾವ ಟೆಂಡರ್ ಆಹ್ವಾನಿಸಿಲ್ಲ. GEM Portal ಹೇಗಿದೆಯೆಂದು ತಿಳಿದಿಲ್ಲ. Higher Education of Karnataka ಬದಲು University of Mysore ಎಂದು ನಮೂದಿಸುವ ಬಗ್ಗೆ ಕಾರ್ಯಪಾಲಕ ಅಭಿಯಂತರರೇ ತಿಳಿಸಬೇಕೆಂದರು.

ಡಾ. ಬಸವರಾಜು ಸಿ ರವರು ಮಾತನಾಡಿ, ಇದರ ಬಗ್ಗೆ ಸೂಕ್ತ ಮಾಹಿತಿಯನ್ನು ನೀಡುವವರು ಯಾರು ಎಂದು ಕೇಳಿದರು.

ಕಾರ್ಯಪಾಲಕ ಅಭಿಯಂತರರು ಮಾತನಾಡಿ, Higher Education of Karnataka ಎಂದೇ ಪೋರ್ಟಲ್‌ನಲ್ಲಿ ಬರುತ್ತದೆ ಎಂದು ತಿಳಿಸಿದರು.

ಶ್ರೀ ಮಹದೇಶುರವರು ಮಾತನಾಡಿ, ಟೆಂಡರ್ ಅರ್ಜಿದಾರರಿಗೆ University of Mysore ಎಂದು ಹೇಗೆ ತಿಳಿಯುತ್ತದೆ? Organization Name ನಲ್ಲಿ Not applicable ಎಂದು ಬರೆದಿದ್ದೀರಿ ಎಂದು ತಿಳಿಸಿದರು. ಅಲ್ಲಿ University of Mysore ಹೆಸರನ್ನು ನಮೂದಿಸಬೇಕಾಗಿತ್ತು ಎಂದು ತಿಳಿಸಿದರು.

ಡಾ. ಬಸವರಾಜು ಸಿ ರವರು ಮಾತನಾಡಿ, ಕುಲಸಚಿವರು ಇದರ ಬಗ್ಗೆ ಪರಿಶೀಲನೆ ನಡೆಸಿ ಎಂದು ಸಲಹೆ ನೀಡಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಅಪ್‌ಲೋಡ್ ಮಾಡಿರುವವರು ಬೇರೆ ಎಂದು ತಿಳಿಸಿದರು.

ಶ್ರೀ ಮಹದೇಶುರವರು ಮಾತನಾಡಿ, ಶ್ರೀ ಅಕ್ಷಯ್ ಎಂಬ ತಾತ್ಕಾಲಿಕ ಉದ್ಯೋಗಿಯವರಿಂದ ಅಪ್‌ಲೋಡ್ ಮಾಡಿಸಿರುತ್ತಾರೆ. ಶ್ರೀ ಅಕ್ಷಯ್‌ರವರ contact number ನಮೂದಿಸಲಾಗಿದೆ. ಅವರು ಖಾಯಂ ಉದ್ಯೋಗಿಯಲ್ಲ. For further information ಕಾರ್ಯಪಾಲಕ ಅಭಿಯಂತರರ ದೂರವಾಣಿ ಸಂಖ್ಯೆಯಾಗಲೀ ಅಥವಾ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಶ್ರೀ ಉಮೇಶ್‌ರವರ ದೂರವಾಣಿ ಸಂಖ್ಯೆಯಾಗಲೀ ನೀಡಲಿ ಎಂದು ಸಲಹೆ ನೀಡಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಅಧಿಕಾರಿಗಳ ಸಭೆ ನಡೆಸಿ, ತಾಂತ್ರಿಕ ಸಮಿತಿಯವರಿಂದ ದಾಖಲೆಗಳ ಸಮೇತ GEM Portal ನಲ್ಲಿ ಅರ್ಜಿ ಸಲ್ಲಿಸಿರುವವರ ಬಗ್ಗೆ ಮಾಹಿತಿಯನ್ನು ಪಡೆಯಲಾಗುವುದೆಂದು ತಿಳಿಸಿದರು.

ಶ್ರೀ ಮಹದೇಶುರವರು ಮಾತನಾಡಿ, ವಿಶ್ವವಿದ್ಯಾನಿಲಯ ಟೆಂಡರ್ ಆಹ್ವಾನಿಸಿ, ಪೀಠೋಪಕರಣಗಳನ್ನು ಸರಬರಾಜು ಮಾಡಲು ಕಾರ್ಯಾದೇಶ ಹೊರಡಿಸಿ, ಸದರಿ ಸರಬರಾಜುದಾರರು ಪೀಠೋಪಕರಣಗಳನ್ನು ಸರಬರಾಜು ಮಾಡುತ್ತಿರುವುದಾಗಿ ಮಾನ್ಯ ಕುಲಪತಿಯವರು ತಿಳಿಸಿರುತ್ತಾರೆ ಎಂದು ಹೇಳಿದರು.

ಮಾನ್ಯ ಕುಲಪತಿಯವರು ಮಾತನಾಡಿ, GEM Portalನಲ್ಲಿ ಏನಾದರೂ ತಪ್ಪಾಗಿದ್ದರೆ ಮುಟ್ಟುಗೋಲು ಹಾಕಿಕೊಳ್ಳಬಹುದು ಎಂಬ ನಿಬಂಧನೆಯಿದೆ ಎಂದು ತಿಳಿಸಿದರು. ಟೆಂಡರ್‌ದಾರನಿಂದ ಡೆಪಾಸಿಟ್ ಹಣವನ್ನು ಕಟ್ಟಿಸಿಕೊಂಡಿರುತ್ತೇವೆ ಇದನ್ನು ವಂಚನೆ ಎಂದು ಹೇಳುವುದು ಸರಿಯಲ್ಲ ಎಂದು ತಿಳಿಸಿದರು.

ಶ್ರೀ ಮಹದೇಶುರವರು ಮಾತನಾಡಿ, ಕಳೆದ ಸಭೆಯಲ್ಲಿ ನಾನು ಹೇಳಿದ್ದೇನೆ ಹಾಗೂ ಹಲವಾರು ಬಾರಿ ಕುಲಸಚಿವ (ಪರೀಕ್ಷಾಂಗ) ದವರಿಗೂ ತಿಳಿಸಿದ್ದೇನೆ ಸದರಿ ಟೆಂಡರ್‌ನಿಂದ ವಿಶ್ವವಿದ್ಯಾನಿಲಯಕ್ಕೆ ರೂ.75 ರಿಂದ 80 ಲಕ್ಷ ನಷ್ಟವಾಗುತ್ತಿದೆ ಎಂದು ಹೇಳಿರುತ್ತೇನೆ. ಆದ್ದರಿಂದ ಮರು ಟೆಂಡರ್ ಮಾಡಿ ಎಂದು ತಿಳಿಸಿದರು. ರೂ. 2.25 ಕೋಟಿ ಹಣ ವಿಶ್ವವಿದ್ಯಾನಿಲಯಕ್ಕೆ ವಿದ್ಯಾರ್ಥಿಗಳು ಭರಿಸಿದ ಶುಲ್ಕದ ಹಣವಾಗಿರುತ್ತದೆ ಎಂದು ಹೇಳಿದರು.

ಮಾನ್ಯ ಕುಲಪತಿಯವರು ಮಾತನಾಡಿ ವಂಚನೆ ಏನಾದರೂ ಸಾಬೀತಾದಲ್ಲಿ ನಾವು ಸೂಕ್ತ ಕ್ರಮಕೈಗೊಳ್ಳುತ್ತೇವೆಂದು ತಿಳಿಸಿದರು.

ಶ್ರೀ ಮಹದೇಶುರವರು ಮಾತನಾಡಿ, ನೀವು ಕ್ರಮ ತೆಗೆದುಕೊಳ್ಳುವವರೆಗೆ ರೂ.75-80 ಲಕ್ಷ ವಿಶ್ವವಿದ್ಯಾನಿಲಯಕ್ಕೆ ನಷ್ಟವಾಗುತ್ತದೆ ಎಂದು ಹೇಳಿದರು.

ಮಾನ್ಯ ಕುಲಪತಿಯವರು ಮಾತನಾಡಿ ಸರಬರಾಜುದಾರನು security deposit ಇರಿಸಿರುತ್ತಾರೆ. ನಾವು ಹುಂಡಿಯನ್ನು ಪಾವತಿಸಿರುವುದಿಲ್ಲ. ಅಧಿಕಾರಿಗಳ ಸಭೆ ನಡೆಸಿ ಏನಾದರೂ ಸಮಸ್ಯೆ ಕಂಡುಬಂದಲ್ಲಿ ಸರಬರಾಜನ್ನು ಸ್ಥಗಿತಗೊಳಿಸಲಾಗುವುದು ಎಂದು ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್ ರವರು ಮಾತನಾಡಿ, ಶ್ರೀ ಮಹದೇಶುರವರು ಕೋರಿರುವ ಮಾಹಿತಿಗಳಿಗೆ ಸಂಬಂಧಿಸಿದಂತೆ ಅಧಿಕಾರಿಗಳ ಸಭೆಯನ್ನು ನಡೆಸಿ ಎಂದು ತಿಳಿಸಿದರು.

ಶ್ರೀ ಮಹದೇಶುರವರು ಮಾತನಾಡಿ, ಮೌಖಿಕವಾಗಿ ಮಾನ್ಯ ಕುಲಪತಿಯವರಿಗೆ ಹಲವಾರು ಬಾರಿ ಟೆಂಡರ್ ಬಗ್ಗೆ ತಿಳಿಸಿರುತ್ತೇನೆ. ಎಲ್-1 ಯಾರು ಅರ್ಹರಿರುತ್ತಾರೋ ಅವರಿಗೆ ಟೆಂಡರ್ ನೀಡಿ ಇದರಿಂದ ವಿಶ್ವವಿದ್ಯಾನಿಲಯಕ್ಕೆ ರೂ.70-80 ಲಕ್ಷ ನಷ್ಟವಾಗುವುದನ್ನು ತಡೆಯಬಹುದೆಂದು ಮನವಿಯನ್ನು ಮಾಡಿಕೊಂಡಿರುತ್ತೇನೆ ಹಾಗೂ ಪತ್ರದ ಮೂಲಕ ಸಹ ಕೋರಲಾಗಿದೆ. ಕುಲಸಚಿವ (ಪರೀಕ್ಷಾಂಗ) ರವರಿಗೆ ಸಹ ತಿಳಿಸಿರುತ್ತೇನೆ. ಒಂದು ಕಡೆ ಬಜೆಟ್‌ನಲ್ಲಿ ರೂ.80 ಕೋಟಿ ವ್ಯತ್ಯಾಸ ತೋರಿಸುತ್ತೇವೆ ಒಂದು ಕಡೆ ರೂ.70-80 ಲಕ್ಷ ನಷ್ಟವಾಗುತ್ತದೆ ಎಂದು ತಿಳಿಸಿದರು. ಗರಿಷ್ಠ ಮೊತ್ತಕ್ಕೆ ಟೆಂಡರ್ ನೀಡುವುದು ನಷ್ಟವಲ್ಲವೇ ಎಂದು ಕೇಳಿದರು.

ಕುಲಸಚಿವ (ಪರೀಕ್ಷಾಂಗ) ರವರು ಮಾತನಾಡಿ, ಕಾರ್ಯಪಾಲಕ ಅಭಿಯಂತರರಿಗೆ ತಾಂತ್ರಿಕವಾಗಿ ಟೆಂಡರ್ ಬಗ್ಗೆ ತಿಳಿದಿಲ್ಲವೆಂದು ಹೇಳಿದರು.

ಶ್ರೀ ಯಜ್ಞಮೂರ್ತಿರವರು ಮಾತನಾಡಿ, my observation is that there are two things one is procedural lapse another one is misappropriation. Every procedural lapse is not a misappropriation. We need to see what exactly is the issue ಎಂದರು.

ಕುಲಸಚಿವ (ಪರೀಕ್ಷಾಂಗ) ರವರು ಮಾತನಾಡಿ, ನಮ್ಮಲ್ಲಿ ಪ್ರೊ. ಉಮಕಾಂತ್ ಎಂಬ ಪ್ರಾಧ್ಯಾಪಕರು ಐಸಿಡಿ ಘಟಕದಲ್ಲಿ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಸದರಿ ನಿರ್ದೇಶಕರು ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದ ಎಲ್ಲಾ ಟೆಂಡರ್ ಪ್ರಕ್ರಿಯೆಗಳನ್ನು coordinate ಮಾಡುತ್ತಾರೆ. ಸದರಿ ವಿಭಾಗದಲ್ಲಿಯೇ ಒಬ್ಬರು

ಗಿರೀಶ್ ಎಂಬ ನಿರ್ವಾಹಕರು ಕರ್ತವ್ಯ ನಿರ್ವಹಿಸುತ್ತಿದ್ದು, ಗಿರೀಶ್‌ರವರೇ ನಮ್ಮ ಸಮ್ಮುಖದಲ್ಲಿಯೇ ಟೆಂಡರ್ ಸಂಬಂಧಿಸಿದ ಪ್ರಕ್ರಿಯೆಗಳನ್ನು ನಿರ್ವಹಿಸುತ್ತಾರೆ. ಬಿಡ್‌ದಾರರು ಸ್ಯಾಂಪಲ್ಸ್‌ಗಳನ್ನು ಒದಗಿಸಬೇಕೆಂಬ ಅಂಶವನ್ನು ಟೆಂಡರ್‌ನಲ್ಲಿ ದಾಖಲಿಸಲಾಗಿರುತ್ತದೆ. ಸದರಿ ಟೆಂಡರ್‌ನಲ್ಲಿ ಐದು ಬಿಡ್‌ದಾರರು ಭಾಗವಹಿಸಿದ್ದು, ತಾಂತ್ರಿಕ ವಿಶೇಷತೆಗಳನ್ನುಳ್ಳ ಬಿಡ್‌ದಾರರಲ್ಲಿ ಎಲ್-1 ಬಿಡ್‌ದಾರರು ಸ್ಯಾಂಪಲ್ಸ್‌ಗಳನ್ನು ಒದಗಿಸಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಎಲ್-1 ಬಿಡ್‌ದಾರರು ಅನರ್ಹಗೊಂಡಿರುತ್ತಾರೆಂದು ಸಭೆಯ ಗಮನಕ್ಕೆ ತಂದರು.

ಶ್ರೀ ಮಹದೇಶುರವರು ಮಾತನಾಡಿ, GeM Portal guidelines 14ರಲ್ಲಿ "The tenderer who is a manufacturer or authorized dealer/agent should submit the sample/drawings" ಎಂದು ಉಲ್ಲೇಖಿಸಲಾಗಿದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ನಾನು, ಕುಲಸಚಿವರು, ಕುಲಸಚಿವ (ಪರೀಕ್ಷಾಂಗ) ಹಾಗೂ ಹಣಕಾಸು ಅಧಿಕಾರಿಗಳೊಂದಿಗೆ ಚರ್ಚಿಸಿ ಸಮಗ್ರ ಮಾಹಿತಿಗಳನ್ನು ನೀಡುತ್ತೇವೆಂದು ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್‌ರವರು ಮತ್ತು ಶ್ರೀ ಮಹದೇಶುರವರು ಮಾತನಾಡಿ, ಎಲ್-1 ಬಿಡ್‌ದಾರರು ತಾವು ಸಲ್ಲಿಸಿರುವ ಟೆಂಡರ್‌ಗೆ ಸಂಬಂಧಿಸಿದಂತೆ drawings ಗಳನ್ನು ಕಾರ್ಯಪಾಲಕ ಅಭಿಯಂತರರು, ಇಂಜಿನಿಯರಿಂಗ್ ವಿಭಾಗ ಇವರಿಗೆ ಸಲ್ಲಿಸಿ ಸದರಿಯವರಿಂದ ಸಹಿಯನ್ನು ತೆಗೆದುಕೊಂಡಿರುತ್ತಾರೆ ಎಂದು ತಿಳಿಸಿದರು.

ಪ್ರೊ. ಸೈಯದ್ ಮೊಹಮ್ಮದ್ ಮುಸ್ತಫಾರವರು ಮಾತನಾಡಿ, ಅಧಿಕಾರಿಗಳ ಸಭೆಯನ್ನು ನಡೆಸಿ ಚರ್ಚೆ ಆಧಾರದ ಮೇಲೆ ಮಾಹಿತಿಯನ್ನು ನೀಡುವುದಾಗಿ ತಿಳಿಸುತ್ತಿದ್ದೀರಿ ಆದರೆ ಇದು ಅಧಿಕ ಮೊತ್ತದ ಟೆಂಡರ್ ಪ್ರಕ್ರಿಯೆಗೆ ಸಂಬಂಧಿಸಿದ ವಿಷಯವಾಗಿದ್ದು ಈ ಹಿನ್ನೆಲೆಯಲ್ಲಿ ಸದರಿ ಸಭೆಯಲ್ಲಿ ಸಿಂಡಿಕೇಟ್ ಸದಸ್ಯರನ್ನು ಒಳಗೊಂಡಂತೆ ಸಭೆಯನ್ನು ನಡೆಸಬಹುದೇ ಎಂದು ಕೇಳಿದರು.

ಮಾನ್ಯ ಕುಲಪತಿಯವರು ಮಾತನಾಡಿ, ತಾವುಗಳು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಸಂಪೂರ್ಣ ಮಾಹಿತಿ ನನ್ನ ಬಳಿ ಇರುವುದಿಲ್ಲ ಈ ಹಿನ್ನೆಲೆಯಲ್ಲಿ ಮೊದಲು ನಾನು ಅಧಿಕಾರಿಗಳೊಂದಿಗೆ ಚರ್ಚಿಸಿ ನಂತರ ವಿಷಯವನ್ನು ಸಿಂಡಿಕೇಟ್‌ಗೆ ಸಭೆಯ ಗಮನಕ್ಕೆ ತರುವುದಾಗಿ ತಿಳಿಸಿದರು.

ಡಾ. ಬಸವರಾಜು ಸಿ. ರವರು ಮಾತನಾಡಿ, ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳೊಂದಿಗೆ ಚರ್ಚಿಸಿ ಅಗತ್ಯ ಮಾಹಿತಿಗಳೊಂದಿಗೆ ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಸದರಿ ವಿಷಯವನ್ನು ಮಂಡಿಸಿ ಎಂದು ತಿಳಿಸಿದರು.

ಶ್ರೀ ಮಹದೇಶುರವರು ಮಾತನಾಡಿ, ಟೆಂಡರ್‌ದಾರರಿಗೆ ಈಗಾಗಲೇ ಕಾರ್ಯಾದೇಶವನ್ನು ನೀಡಿರುತ್ತೀರಿ, ಟೆಂಡರ್‌ದಾರರು ಟೆಂಡರ್ ಸಂಬಂಧಿತ ಸಾಮಾಗ್ರಿಗಳನ್ನು ಈಗಾಗಲೇ ಸರಬರಾಜು ಮಾಡುತ್ತಿರುವುದಾಗಿ ಸಭೆಯ ಗಮನಕ್ಕೆ ತಂದರು ಹಾಗೂ ಎಲ್-1 ಬಿಡ್‌ದಾರರು ಟೆಂಡರ್ ಸಂಬಂಧಿತ drawings ಅನ್ನು ಕಾರ್ಯಪಾಲಕ ಅಭಿಯಂತರರಿಗೆ ನೀಡಿ ಸಹಿಯನ್ನು ಸಹ ಪಡೆದಿರುತ್ತಾರೆ ಈ ಕುರಿತು ಏನು ಕ್ರಮವನ್ನು ತೆಗೆದುಕೊಂಡಿರುತ್ತೀರಿ ಎಂದು ಕೇಳಿದರು.

ಕುಲಸಚಿವ (ಪರೀಕ್ಷಾಂಗ)ರವರು ಮಾತನಾಡಿ, ಎಲ್-1 ಬಿಡ್‌ದಾರರು ಟೆಂಡರ್ ಸಂಬಂಧಿತ drawings ಅನ್ನು ಕಾರ್ಯಪಾಲಕ ಅಭಿಯಂತರರಿಗೆ ನೀಡಿರುವುದಾಗಿ ತಿಳಿಸಿರುತ್ತೀರಿ ಈ ವಿಷಯದ ಕುರಿತು ಪರಿಶೀಲಿಸುವುದಾಗಿ ತಿಳಿಸಿದರು.

ಶ್ರೀ ನಾಗರಾಜುರವರು ಮಾತನಾಡಿ, ಪ್ರಸ್ತುತ ನೀಡಿರುವ ಕಾರ್ಯಾದೇಶವನ್ನು ರದ್ದುಗೊಳಿಸಿ ಎಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, GeM portal ಮೂಲಕ ಟೆಂಡರ್ ಆಹ್ವಾನಿಸಿ ಟೆಂಡರ್ ಪ್ರಕ್ರಿಯೆಯನ್ನು ಕೈಗೊಂಡು ನೀಡಿರುವ ಕಾರ್ಯಾದೇಶವನ್ನು ಏಕಾಏಕಿ ರದ್ದುಗೊಳಿಸಲು ಸಾಧ್ಯವಿರುವುದಿಲ್ಲವೆಂದು ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್‌ರವರು ಮಾತನಾಡಿ, GeM portal ಮೂಲಕ ಟೆಂಡರ್ ಆಹ್ವಾನಿಸಿ ಕೈಗೊಂಡಿರುವ ಎಲ್ಲಾ ಪ್ರಕ್ರಿಯೆಗಳು ತಪ್ಪಾಗಿದೆ ಎಂಬುವುದು ಎಲ್ಲಾ ಸಿಂಡಿಕೇಟ್ ಸದಸ್ಯರ ಆಕ್ಷೇಪಣೆ ಎಂದು ತಿಳಿಸುತ್ತಾ, ಪ್ರಸ್ತುತ ಈ ಸಿಂಡಿಕೇಟ್‌ನಲ್ಲಿಯೇ ರದ್ದುಗೊಳಿಸಲು ತೀರ್ಮಾನ ಕೈಗೊಳ್ಳಿ ಎಂದು ತಿಳಿಸಿದರು.

ಶ್ರೀ ನಾಗರಾಜುರವರು ಮಾತನಾಡಿ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯಿದೆ 2000 ಪ್ರಕರಣ 29 (a) ರಲ್ಲಿ ಈ ಕೆಳಕಂಡಂತೆ ತಿಳಿಸಿದೆ.

"ವಿಶ್ವವಿದ್ಯಾನಿಲಯದ ಹಣಕಾಸು ಮತ್ತು ಎಲ್ಲಾ ಇತರೆ ಆಡಳಿತಾತ್ಮಕ ವ್ಯವಹಾರವನ್ನು ನಿರ್ವಹಿಸುವುದು ಮತ್ತು ನಿಯಂತ್ರಿಸುವುದು ಮತ್ತು ಆ ಉದ್ದೇಶಕ್ಕಾಗಿ ತಾನು ಅವಶ್ಯಕ ಹಾಗೂ ಸೂಕ್ತವೆಂದು ಭಾವಿಸಬಹುದಾದ ಅಂತಹ ಏಜೆಂಟರನ್ನು ನೇಮಕ ಮಾಡುವುದು".

ಮಾನ್ಯ ಕುಲಪತಿಯವರು procedural lapse ಆದಾಗ ಮಾತ್ರ ರದ್ದುಪಡಿಸಲು ಅವಕಾಶವಿರುತ್ತದೆ ಎಂದು ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಹತ್ತು ದಿನದೊಳಗೆ ಈ ವಿಷಯದ ಕುರಿತು ಅಧಿಕಾರಿಗಳೊಂದಿಗೆ ಚರ್ಚಿಸಿ ವರದಿಯನ್ನು ಸಲ್ಲಿಸಿ ಎಂದು ತಿಳಿಸಿದರು. ಮುಂದುವರೆದು, ಆರು ಜನ ಸಿಂಡಿಕೇಟ್ ಸದಸ್ಯರು ಮಾನ್ಯ ಕುಲಸಚಿವರಿಗೆ ದಿನಾಂಕ: 04-07-2024ರಂದು ಪತ್ರ ಬರೆದು ಮಾಹಿತಿಯನ್ನು ಕೋರಿರುತ್ತೇವೆ. ಆದರೆ ಈ ಸಂಬಂಧ ಕುಲಸಚಿವರು ಇಂಜಿನಿಯರಿಂಗ್ ವಿಭಾಗಕ್ಕೆ ಪತ್ರ ಕಳುಹಿಸಿರುವುದಾಗಿ ತಿಳಿಸುತ್ತಾ, ಇದರ ಬಗ್ಗೆ ಸೂಕ್ತ ಸ್ಪಷ್ಟೀಕರಣವನ್ನು ನೀಡಿರುವುದಿಲ್ಲ ಬದಲಾಗಿ 20-08-2024ರಂದು ಅಪೂರ್ಣ ಮಾಹಿತಿಯನ್ನು ನೀಡಿರುತ್ತಾರೆ. ಮುಂದುವರೆದು, ಇಲ್ಲಿ ನಡೆಯುತ್ತಿರುವ ಪ್ರಕ್ರಿಯೆಯಲ್ಲಿ ಲೋಪದೋಷಗಳಿವೆ ಎಂದು ತಿಳಿಸಿದ್ದರೂ ಸಹ ಅದಕ್ಕೆ ಯಾವುದೇ ಮನ್ನಣೆ ನೀಡದೆ ಟೆಂಡರ್ ಆಹ್ವಾನಿಸಿ ಕಾರ್ಯಾದೇಶವನ್ನು ನೀಡಿರುವುದಕ್ಕೆ ಆಕ್ಷೇಪಿಸಿ ನಾವುಗಳು ನೀಡಿರುವ ಪತ್ರಕ್ಕೆ ಏನು ಮನ್ನಣೆ ನೀಡಿದಂತಾಗುತ್ತದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, GeM portal ಕುರಿತು ನನಗೆ ಪೂರ್ಣ ಮಾಹಿತಿ ಇಲ್ಲದೆ ಇರುವುದರಿಂದ ಅದರ ನಿಬಂಧನೆಗಳನ್ನು ಅರ್ಥೈಸಿಕೊಂಡು ಅಧಿಕಾರಿಗಳೊಂದಿಗೆ ಸಮಾಲೋಚಿಸಿ ಈ ವಿಷಯದ ಕುರಿತು ಅದಷ್ಟು ಶೀಘ್ರವಾಗಿ ತಮಗೆ ಮಾಹಿತಿ ಒದಗಿಸಲಾಗುವುದು ಎಂದು ತಿಳಿಸಿದರು. ಮುಂದುವರೆದು ಟೆಂಡರ್‌ದಾರನಿಗೆ ನಾವು ಹಾಲಿ ಯಾವುದೇ ತರಹದ ಬಿಲ್‌ನ ಹಣ ಪಾವತಿ ಮಾಡದೆ ಇರುವುದರಿಂದ ಟೆಂಡರ್‌ದಾರರಲ್ಲಿ ಯಾವುದೇ ಲೋಪದೋಷಗಳು ಕಂಡುಬಂದಲ್ಲಿ ಟೆಂಡರ್ ಅನುಮೋದಿತ ದಿನಾಂಕದಿಂದ ಒಂದು ವರ್ಷದೊಳಗೆ ಅದನ್ನು ರದ್ದುಗೊಳಿಸಬಹುದೆಂದು ತಿಳಿಸಿದರು.

ಶ್ರೀ ಮಹದೇಶುರವರು ಮಾತನಾಡಿ, ಟೆಂಡರ್‌ದಾರನಿಗೆ ಈಗಾಗಲೇ ಕಾರ್ಯಾದೇಶ ನೀಡಿರುವುದರಿಂದ ಹಾಗೂ ಟೆಂಡರ್ ಸಂಬಂಧಿತ ಪೀಠೋಪಕರಣಗಳನ್ನು ಸರಬರಾಜು ಮಾಡಿರುವುದರಿಂದ, ಆ ಟೆಂಡರ್‌ದಾರರಿಗೆ ಹಣ ಪಾವತಿ ಮಾಡದೇ ಇದ್ದಲ್ಲಿ ಅವರು ನ್ಯಾಯಾಲಯದ ಮೊರೆ ಹೋಗುವ ಸಂಭವವಿರುತ್ತದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಈ ಸಂಬಂಧ ಅಧಿಕಾರಿಗಳ ಸಭೆಯಲ್ಲಿ ಚರ್ಚಿಸಿ ನಾವು ನೀಡುವ ಮಾಹಿತಿಯಲ್ಲಿ ಲೋಪ ಕಂಡುಬಂದಲ್ಲಿ ತಾವು ಸರ್ಕಾರಕ್ಕೆ ಪತ್ರ ಬರೆಯಬಹುದೆಂದು ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಸಂಪೂರ್ಣ GeM portal key ಹಾಗೂ ಎಲ್ಲಾ ಟೆಂಡರ್ ಕೀಗಳು ಕುಲಸಚಿವರ ಬಳ ಇಲ್ಲವೇ ಎಂದು ಕೇಳಿದರು.

ಕುಲಸಚಿವರು ಮಾತನಾಡಿ, ಹಾಲಿ ಚರ್ಚಿಸುತ್ತಿರುವ GeM ಬಿಡ್‌ಅನ್ನು ವಿಶ್ವವಿದ್ಯಾನಿಲಯದ ಪ್ರಭಾರ ಕಾರ್ಯಪಾಲಕ ಅಭಿಯಂತರರವರ DSC (Key) ಬಳಸಿ ಕರೆಯಲಾಗಿದೆ ಎಂದು ತಿಳಿಸಿದರು.

ಶ್ರೀ ಮಹದೇಶುರವರು ಮಾತನಾಡಿ ಎಲ್ಲಾ ಟೆಂಡರ್‌ನಲ್ಲಿ ಖರೀದಿದಾರರು ಕುಲಸಚಿವರು ಎಂದು ನಮೂದಾಗಿರುತ್ತದೆ ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ ಎಲ್ಲಾ ಟೆಂಡರ್‌ಗೆ custodian ಕುಲಸಚಿವರಾಗಿರುತ್ತಾರೆಂದು ತಿಳಿಸಿದರು. ಮಾನ್ಯ ಕುಲಪತಿಗಳ ಅನುಮೋದನೆ ಪಡೆದು ಎಲ್ಲಾ ಟೆಂಡರ್‌ಗಳಿಗೆ ಆಡಳಿತಾತ್ಮಕ ಆದೇಶ ಹೊರಡಿಸಲಾಗಿರುತ್ತದೆ. ಕೆಲವೊಂದು ಟೆಂಡರ್‌ಗಳಿಗೆ ಸಂಬಂಧಿಸಿದಂತೆ ಮಾತ್ರ ನಮ್ಮ ಕಛೇರಿ ವತಿಯಿಂದ ನಿರ್ವಹಿಸಲಾಗುತ್ತದೆ. ಉಳಿದಂತೆ ಇಂಜಿನಿಯರಿಂಗ್ ವಿಭಾಗದವರು ಕಾರ್ಯನಿರ್ವಹಿಸುತ್ತಾರೆಂದು ತಿಳಿಸಿದರು.

ಶ್ರೀ ನಾಗರಾಜುರವರು ಮಾತನಾಡಿ, ನಾವು ಅರು ಜನ ಸಿಂಡಿಕೇಟ್ ಸದಸ್ಯರು ಇಂಜಿನಿಯರಿಂಗ್ ವಿಭಾಗಕ್ಕೆ ಭೇಟಿ ನೀಡಿ ರೂ. 16 ಕೋಟಿ ರೂಪಾಯಿಗಳ ಕಾಮಗಾರಿ ನಡೆದು ಗುತ್ತಿಗೆದಾರನಿಗೆ ಹಣ ಸಂದಾಯವಾಗಿರುವುದರ ಕುರಿತು ಮಾಹಿತಿ ಕೋರಿದ್ದು, ಈ ಕಾಮಗಾರಿಗಳು ಎಲ್ಲೆಲ್ಲಿ ಕೈಗೊಳ್ಳಲಾಗಿದೆ ಸದರಿ ಸ್ಥಳಗಳನ್ನು ತೋರಿಸುವಂತೆ ವಿವರ ಕೇಳಿದಾಗ, ಇದರ ಮಾಹಿತಿ ನನಗೆ ತಿಳಿದಿರುವುದಿಲ್ಲವೆಂದು ತಿಳಿಸಿರುತ್ತೀರಿ. ಮೇಲ್ಪಟ್ಟ ಅಧಿಕಾರಿಗಳು ಕಾಮಗಾರಿ ನಡೆದಿರುವ ಸ್ಥಳಗಳನ್ನು ತೋರಿಸುವಂತೆ ಪ್ರಶ್ನಿಸಿದಲ್ಲಿ ನೀವು ಯಾವ ಕ್ರಮ ವಹಿಸುತ್ತೀರೆಂದು ಕೇಳಿದಾಗ ಅಧಿಕಾರಿಗಳು ಮಾಹಿತಿ ಕೋರಿದಲ್ಲಿ ಅವರಿಗೆ ಸದರಿ ಸ್ಥಳಗಳನ್ನು ತೋರಿಸುವುದಾಗಿ ಹಾಗೂ ನಿಮಗೆ ತೋರಿಸುವುದಿಲ್ಲವೆಂದು ನಾವು ಭೇಟಿ ನೀಡಿದ ದಿನ ನಮಗೆ ತಿಳಿಸಿರುತ್ತೀರೆಂದು ಕಾರ್ಯಪಾಲಕ ಅಭಿಯಂತರರಿಗೆ ಕೇಳಿದರು.

ಕಾರ್ಯಪಾಲಕ ಅಭಿಯಂತರರು ಮಾತನಾಡಿ, ನಾನು ವಿಶ್ವವಿದ್ಯಾನಿಲಯಕ್ಕೆ ಬರುವ ಮೊದಲು ಕರ್ತವ್ಯ ನಿರ್ವಹಿಸುತ್ತಿದ್ದ ಕಾರ್ಯಪಾಲಕ ಅಭಿಯಂತರರ ಅವಧಿಯಲ್ಲಿದಂತಹ ಹುಂಡಿಗಳಾಗಿದ್ದು, ಸದರಿ ಹಳೆ ಕಾಮಗಾರಿಗಳ ಹುಂಡಿಯ ಮೊತ್ತವಾದ ರೂ.9.00 ಕೋಟಿಗಳನ್ನು ಗುತ್ತಿಗೆದಾರರಿಗೆ ಪಾವತಿಸಲಾಗಿದೆ ಎಂದು ತಿಳಿಸಿದರು.

ಡಾ. ಬಸವರಾಜುರವರು ಮಾತನಾಡಿ, ಸದರಿ ಹುಂಡಿಯಲ್ಲಿ ನಿಮ್ಮ ಸಹಿ ಇದೆಯಲ್ಲವೇ ಎಂದು ಕೇಳಿದರು.

ಕಾರ್ಯಪಾಲಕ ಅಭಿಯಂತರರು ಮಾತನಾಡಿ, ಈ ಎಲ್ಲಾ ಹಳೆಯ ಕಾಮಗಾರಿಗಳ ಹುಂಡಿಯನ್ನು ಹಿಂದಿನ ಕಾರ್ಯಪಾಲಕ ಅಭಿಯಂತರರೇ ದೃಢೀಕರಿಸಿರುತ್ತಾರೆ. ಪರಿಷ್ಕೃತ ಮಂಜೂರಾತಿ ಬಂದ ನಂತರ ಸದರಿ ಹುಂಡಿಯ ಮುಖಪುಟಕ್ಕೆ ಮಾತ್ರ ನಾನು ಸಹಿ ಮಾಡಿರುತ್ತೇನೆ ಹೊರತು ಹುಂಡಿಯಲ್ಲಿ ನನ್ನ ಸಹಿ ಇರುವುದಿಲ್ಲವೆಂದು ತಿಳಿಸಿದರು.

ಡಾ. ಬಸವರಾಜು ಸಿ ರವರು ಮಾತನಾಡಿ, ರೂ.9.00 ಕೋಟಿ ದೊಡ್ಡಮಟ್ಟದ ಕಾಮಗಾರಿ ಹಾಗೂ ರೂ.6.00 ಕೋಟಿಗೂ ಅಧಿಕವಾದ ಸಣ್ಣ ಕಾಮಗಾರಿ ಮೊತ್ತವೆಂದು ತಿಳಿಸಿದರು.

ಕಾರ್ಯಪಾಲಕ ಅಭಿಯಂತರರು ಮಾತನಾಡಿ, 2023-24ನೇ ಸಾಲಿನಲ್ಲಿ ಒಟ್ಟು ರೂ.9.00 ಕೋಟಿ ರೂಪಾಯಿಗಳನ್ನು ಗುತ್ತಿಗೆದಾರರಿಗೆ ಪಾವತಿಸಿದ್ದು, ಅದರಲ್ಲಿ ದೊಡ್ಡ ಮಟ್ಟದ ಕಾಮಗಾರಿ ರೂ.7.00 ಕೋಟಿ ಮೊತ್ತದ್ದು ಅದರಲ್ಲಿ (ಐಡಿಎಫ್ ಶೀರ್ಷಿಕೆ) ರೂ.89.00 ಲಕ್ಷ (ಸಣ್ಣ ಮಟ್ಟದ ಕಾಮಗಾರಿ) ಹಿಂದಿನ ಕಾರ್ಯಪಾಲಕ ಅಭಿಯಂತರರ ಅವಧಿಯಲ್ಲಿ ಕ್ರಮವಹಿಸಲಾಗಿರುವುದು. ಕಾಮಗಾರಿ ಕೈಗೊಂಡಿರುವುದರಲ್ಲಿ ರೂ.5.00 ಕೋಟಿ ಉಳಿಕೆ ಮೊತ್ತವನ್ನು ಗುತ್ತಿಗೆದಾರನಿಗೆ ಪಾವತಿಸಬೇಕಾಗಿರುತ್ತದೆ ಎಂದರು.

ಡಾ. ಬಸವರಾಜು ಸಿ. ರವರು ಮಾತನಾಡಿ, ಹಿಂದಿನ ಕಾರ್ಯಪಾಲಕ ಅಭಿಯಂತರರ ಅವಧಿಯಲ್ಲಿಯೇ ಕಾಮಗಾರಿಗಳನ್ನು ನಿರ್ವಹಿಸಿರಬಹುದು ಹಾಗೂ ಸದರಿ ಕಾಮಗಾರಿಗಳಿಗೆ ನಿಮ್ಮ ಅವಧಿಯಲ್ಲಿ ಗುತ್ತಿಗೆದಾರರಿಗೆ ಹಣ ಸಂದಾಯವಾಗಿರುವ ಕುರಿತು ನಾವು ತಮ್ಮ ಕಛೇರಿಗೆ ಬಂದು ಕೆಲಸಗಳನ್ನು ನಿರ್ವಹಿಸಿರುವ ಸ್ಥಳಗಳನ್ನು ತೋರಿಸುವಂತೆ ಮಾಹಿತಿಯನ್ನು ಕೋರಿದ ಸಂದರ್ಭದಲ್ಲಿ ಈ ಮಾಹಿತಿಗಳನ್ನು ನೀಡಬಹುದಾಗಿತ್ತಲ್ಲವೇ ಬದಲಾಗಿ ಇದನ್ನು ನೀಡಲು ಸಾಧ್ಯವಿಲ್ಲವೆಂದು ಏಕೆ ಹೇಳಿದ್ದೀರಿ ಎಂದು ಕೇಳಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಯಾವ ಗುತ್ತಿಗೆದಾರರು ಯಾವ ಯಾವ ಸ್ಥಳದಲ್ಲಿ ಕಾಮಗಾರಿಗಳನ್ನು ನಿರ್ವಹಿಸಿದ್ದಾರೆ ಎಂಬುದಕ್ಕೆ ತಮ್ಮ ಬಳಿ ಮಾಹಿತಿ ಇದ್ದಲ್ಲಿ ಹಾಗೂ ಸದರಿ ಗುತ್ತಿಗೆದಾರರಿಗೆ ಈಗಾಗಲೇ ಹುಂಡಿಗಳನ್ನು ಪಾವತಿ ಮಾಡಿದ್ದರಿಂದ ಆ ಕಾಮಗಾರಿಗಳನ್ನು ನಿರ್ವಹಿಸಿರುವ ಸ್ಥಳಗಳನ್ನು ತೋರಿಸಬೇಕಲ್ಲವೇ ಎಂದು ಕಾರ್ಯಪಾಲಕ ಅಭಿಯಂತರರಿಗೆ ಕೇಳಿದರು.

ಕಾರ್ಯಪಾಲಕ ಅಭಿಯಂತರರು ಮಾತನಾಡಿ, ಕಾಮಗಾರಿಗಳು ನಡೆದಿರುವುದಕ್ಕೆ ಈಗಾಗಲೇ ಗುತ್ತಿಗೆದಾರರು ಕಟ್ಟಡಗಳನ್ನು ವಿಶ್ವವಿದ್ಯಾನಿಲಯಕ್ಕೆ ಹಸ್ತಾಂತರ ಮಾಡಿರುವುದು ಕಂಡುಬಂದಿದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಸದಸ್ಯರು ಕೋರಿರುವ ಮಾಹಿತಿಗಳನ್ನು ಒದಗಿಸುವುದರಲ್ಲಿ ಯಾವುದೇ ಮರೆಮಾಚುವ ಪ್ರಶ್ನೆಯಿರುವುದಿಲ್ಲ. ಎಲ್ಲಾ ಕಾಮಗಾರಿಗಳು ನಡೆದಿರುವುದು ಪಾರದರ್ಶಕವಾಗಿದ್ದಲ್ಲಿ ಸದರಿ ಕಾಮಗಾರಿಗಳು ನಡೆದಿರುವ ಸ್ಥಳಗಳಿಗೆ ಸದಸ್ಯರನ್ನು ಕರೆದೊಯ್ದು ತೋರಿಸುವ ಕರ್ತವ್ಯ ನಿಮ್ಮದಾಗಿರುತ್ತದೆಯೆಂದು ಕಾರ್ಯಪಾಲಕ ಅಭಿಯಂತರರಿಗೆ ಸೂಚಿಸಿದರು.

ಶ್ರೀ ಮಹದೇಶುರವರು ಮಾತನಾಡಿ, GeM Portalಗೆ ಸಂಬಂಧಿಸಿದಂತೆ ಯಾವ ಕ್ರಮವಹಿಸುವಿರೀ ಎಂದು ಮಾನ್ಯ ಕುಲಪತಿಯವರನ್ನು ಕೋರಿದರು.

ಶ್ರೀ ನಾಗರಾಜು .ಸಿ ರವರು ಮಾತನಾಡಿ, GeM Portal ಮೂಲಕ ವಹಿಸಿರುವ ಟೆಂಡರ್‌ನಲ್ಲಿ ರೂ. ೮೦.೦೦ ಲಕ್ಷ ಉಳಿತಾಯವಾಗುವುದಾಗಿ ಶ್ರೀ ಮಹದೇಶು, ಡಾ. ಟಿ.ಆರ್.ಚಂದ್ರಶೇಖರ್ ಮತ್ತು ಶ್ರೀ ಗೋಕುಲ್ ಗೋವರ್ಧನ್ ಇವರು ನನಗೆ ಮಾಹಿತಿ ನೀಡಿರುವುದಾಗಿ ತಿಳಿಸಿದರು ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯಕ್ಕೆ ರೂ. ೮೦.೦೦ ಲಕ್ಷ ಹಣ ಉಳಿತಾಯವಾಗುವುದಾದಲ್ಲಿ, ಸದರಿ ಟೆಂಡರ್ ಪ್ರಕ್ರಿಯೆಯನ್ನು ರದ್ದುಗೊಳಿಸುವಂತೆ ಕೋರಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಈ ವಿಷಯದ ಕುರಿತು ಸುದೀರ್ಘವಾಗಿ ಈಗಾಗಲೇ ಒಂದೂವರೆ ಗಂಟೆಗಳಿಗೂ ಹೆಚ್ಚಾಗಿ ಚರ್ಚಿಸಲಾಗಿದೆ ನಾನು ಮೊದಲೇ ಹೇಳಿದಂತೆ ಅಧಿಕಾರಿಗಳೊಂದಿಗೆ GeM Portal ಮುಖಾಂತರ ಕೈಗೊಂಡಿರುವ ಟೆಂಡರ್ ಸಂಬಂಧಿತ ವಿಷಯಗಳನ್ನು ಚರ್ಚಿಸಿ ಮುಂಬರುವ ಸಿಂಡಿಕೇಟ್ ಸಭೆಗೆ ವಿಷಯವನ್ನು ತಿಳಿಸುವುದಾಗಿ ಹೇಳಿದರು.

ಡಾ. ನಟರಾಜ್ ಹೆಚ್.ಎಸ್.ರವರು ಮಾತನಾಡಿ, ಯುವರಾಜ ಕಾಲೇಜಿಗೆ ಸಂಬಂಧಿಸಿದಂತೆ ಶ್ರೀ ಜೆ. ಶಿವಕುಮಾರ್ ರವರು ವಿದ್ಯಾರ್ಥಿಗಳಿಂದ ಸಂಗ್ರಹವಾಗಿರುವ ಶುಲ್ಕವನ್ನು ದುರುಪಯೋಗ ಪಡಿಸಿಕೊಂಡಿರುವ ಪ್ರಕರಣವನ್ನು ಒಂದು ತಿಂಗಳೊಳಗೆ ತನಿಖೆ ನಡೆಸಿ ವರದಿ ನೀಡುವುದಾಗಿ ತಿಳಿಸಿರುತ್ತೀರಿ. ಆದರೆ ಸದರಿ ಪ್ರಕರಣವು ಜರುಗಿ ೨ ತಿಂಗಳುಗಳಾದರೂ ಇದುವರೆಗೂ ಸೂಕ್ತ ತನಿಖೆ ಕೈಗೊಂಡಿರುವುದಿಲ್ಲ, ತನಿಖೆಯು ಯಾವ ಹಂತದಲ್ಲಿದೆ ಮಾಹಿತಿ ನೀಡುವಂತೆ ಕೋರಿದರು.

ಶ್ರೀ ನಾಗರಾಜು ಸಿ. ರವರು ಮಾತನಾಡಿ, ಯುವರಾಜ ಕಾಲೇಜಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರೊ. ದೇವರಾಜೇಗೌಡ, ಪ್ರಾಂಶುಪಾಲರು ಇವರು ನ್ಯಾಯಾಲಯದ ಮೊರೆ ಹೋಗಿದ್ದು, ಪ್ರಕರಣವು ನ್ಯಾಯಾಲಯದ ಹಂತದಲ್ಲಿರುವುದರಿಂದ ವಿಶ್ವವಿದ್ಯಾನಿಲಯದ ರಚಿಸಲಾಗಿರುವ ವಿಚಾರಣಾ ಸಮಿತಿಗೆ

ಏನಾದರೂ ತೊಡಕಿದೆಯೇ, ತೊಡಕಿದಲ್ಲಿ ಏನು ತೊಡಕಿದೆ ಎಂಬುವುದಕ್ಕೆ ಮಾಹಿತಿ ನೀಡುವಂತೆ ಸಭೆಯ ಗಮನಕ್ಕೆ ತಂದರು.

ಮಾನ್ಯ ಕುಲಪತಿಯವರು ಮಾತನಾಡಿ, ಸದರಿ ಪ್ರಕರಣವನ್ನು ನಿವೃತ್ತ ನ್ಯಾಯಾಧೀಶರಿಂದ ವಿಚಾರಣೆ ನಡೆಸಲು ವಿಚಾರಣಾ ಸಮಿತಿಯನ್ನು ರಚಿಸಲಾಗಿದೆ. ವಿಚಾರಣಾಧಿಕಾರಿಗಳು ದಿನಾಂಕ: 27-09-2024 ರಂದು ವಿಚಾರಣೆಯನ್ನು ನಡೆಸಲಿದ್ದು, ಅದಷ್ಟು ಶೀಘ್ರವಾಗಿ ವರದಿಯನ್ನು ಸಲ್ಲಿಸುವಂತೆ ವಿಚಾರಣಾಧಿಕಾರಿಗಳನ್ನು ಮತ್ತೊಮ್ಮೆ ಕೋರಲಾಗುವುದೆಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಸಿಂಡಿಕೇಟ್ ಸಭೆಯ ನಡಾವಳಿಯನ್ನು ಹಿಂದೆ ನೀಡಬೇಕಾದರೆ ಮಾನ್ಯ ಕುಲಪತಿಗಳ ಹಾಗೂ ಕುಲಸಚಿವರ ಸಹಿಯನ್ನೊಳಗೊಂಡ ಪ್ರತಿಯನ್ನು ಕಳುಹಿಸುತ್ತಿದ್ದೀರಿ, ಆದರೆ ದಿನಾಂಕ: 14.08.2024ರಂದು ನಡೆದ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಸಹಿ ಎಂದು ನಮೂದಿಸಿ ಕಳುಹಿಸಿದ್ದೀರಿ. ಆದ್ದರಿಂದ ಸಹಿಯಿರುವ ನಡಾವಳಿಯನ್ನು ಕಳುಹಿಸುವಂತೆ ಕೋರಿದರು.

ಕುಲಸಚಿವರು ಮಾತನಾಡಿ, ಪ್ರಾಧಿಕಾರ ವಿಭಾಗದ ಉಪಕುಲಸಚಿವರು ನಡಾವಳಿಯನ್ನು ಕಳುಹಿಸುವಂತಹದ್ದು, ಉಪಕುಲಸಚಿವರಿಗೆ ಸಹಿಯನ್ನೊಳಗೊಂಡಿರುವ ಸಿಂಡಿಕೇಟ್ ಸಭೆಯ ನಡಾವಳಿಗಳ ಪ್ರತಿಯನ್ನು ಕಳುಹಿಸುವಂತೆ ಸೂಚಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ದಿನಾಂಕ: 14.08.2024ರಂದು ನಡೆದ ನಡಾವಳಿಯಲ್ಲಿನ ವಿಷಯ ಸಂಖ್ಯೆ: 5.2ರ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮ ಆಕ್ಷೇಪವನ್ನು ವ್ಯಕ್ತಪಡಿಸುತ್ತಾ, ಮೂರು ತಿಂಗಳವರೆಗೆ ವಿಶ್ವವಿದ್ಯಾನಿಲಯದ ಉಪನ್ಯಾಸಕರುಗಳು ವಿದೇಶಕ್ಕೆ ಹೋಗಲು ಮಾನ್ಯ ಕುಲಪತಿಗಳ ವಿವೇಚನಾಧಿಕಾರಕ್ಕೆ ನೀಡುವ ವಿಷಯವನ್ನು ಮಂಡಿಸಲಾಗಿತ್ತು. ಆ ಸಂದರ್ಭದಲ್ಲಿ ನಾನು ಸರ್ಕಾರದ ಆಡಳಿತ ಸುಧಾರಣಾ ಆಯೋಗ ಮತ್ತು ಸರ್ಕಾರದ ಸುತ್ತೋಲೆ ಪ್ರಕಾರ 10 ದಿವಸಗಳು ಎಂದಿರುವುದರಿಂದ, ಆ 10 ದಿವಸಗಳಿಗೆ ಮಾತ್ರ ಮುಂದುವರಿಸೋಣವೆಂದು, ಜೊತೆಗೆ ಮೂರು ತಿಂಗಳವರೆಗೆ ಪ್ರಾಧ್ಯಾಪಕರುಗಳನ್ನು ಹೊರದೇಶಕ್ಕೆ ಕಳುಹಿಸಿದರೆ ವಿದ್ಯಾರ್ಥಿಗಳಿಗೆ ತೊಂದರೆಯಾಗಬಹುದೆಂದು ಆ ಕಾರಣಕ್ಕೆ ಪ್ರತಿ ತಿಂಗಳು ಅಥವಾ 20/25 ದಿನಗಳಿಗೆ ಸಿಂಡಿಕೇಟ್ ಸಭೆ ನಡೆಯುವುದರಿಂದ ಆ ಸಂದರ್ಭದಲ್ಲಿ ವಿಷಯವನ್ನು ಮಂಡಿಸಿ ತೀರ್ಮಾನ ಕೈಗೊಳ್ಳಬಹುದೆಂದು ತೀರ್ಮಾನಿಸಲಾಗಿತ್ತು. ಆದರೆ ನಡಾವಳಿಯಲ್ಲಿ ಮೂರು ತಿಂಗಳವರೆಗೆ ಪ್ರಾಧ್ಯಾಪಕರುಗಳು ವಿದೇಶಕ್ಕೆ ಹೋಗಿಬರಲು ಅನುಮತಿ ನೀಡುವ ವಿವೇಚನಾಧಿಕಾರವನ್ನು ಕುಲಪತಿಗಳಿಗೆ ನೀಡಲಾಗಿದೆ ಎಂಬ ತೀರ್ಮಾನವನ್ನು ನಮೂದಿಸಿದ್ದಾರೆ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ದಿನಾಂಕ: 14.08.2024ರಂದು ತೀರ್ಮಾನವಾದಂತೆ ನಡಾವಳಿಯಲ್ಲಿ ನಮೂದಿಸಲಾಗಿದೆ. ತಮ್ಮ ಆಕ್ಷೇಪಣೆ ಏನಾದರೂ ಇದಲ್ಲಿ ಲಿಖಿತ ಮೂಲಕ ಡಿಸೆಂಟ್ ನೋಟ್‌ಅನ್ನು ನೀಡಲು ತಿಳಿಸಿದರು. ಶೈಕ್ಷಣಿಕ ವಿಚಾರಕ್ಕೆ ಸಂಬಂಧಿಸಿದಂತೆ ಹೊರದೇಶಕ್ಕೆ ಹೋಗುವಾಗ ಅವರುಗಳ ಸ್ವಂತ ಖರ್ಚಿನಿಂದ ಹಾಗೂ ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊರೆಯಾಗದಂತೆ ಹೋಗಿ ಬರಲು ಅವಕಾಶ ನೀಡಲಾಗಿದೆ. ಜೊತೆಗೆ ಹಿಂದೆ ಇದ್ದಂತಹ ನಿಯಮವನ್ನೇ ಅನುಸರಿಸಲು ತೀರ್ಮಾನಿಸಿದ್ದರಿಂದ ಮೂರು ತಿಂಗಳವರೆಗೆ ವಿದೇಶಕ್ಕೆ ಹೋಗಿಬರಲು ಅನುಮತಿಯನ್ನು ನೀಡಲು ಕುಲಪತಿಗಳ ವಿವೇಚನುಸಾರ ಎಂದು ತೀರ್ಮಾನವಾಗಿದೆ ಎಂದು ತಿಳಿಸಿದರು. ಸರ್ಕಾರದಿಂದ 10 ದಿವಸಗಳ ಕಾಲಾವಕಾಸವಿದ್ದರೂ ಸಹ ವಿಶ್ವವಿದ್ಯಾನಿಲಯದ ಹಿತದೃಷ್ಟಿಯಿಂದ ಹಾಗೂ ಶೈಕ್ಷಣಿಕ ವಿಚಾರವಾಗಿರುವುದರಿಂದ ಕುಲಪತಿಗಳಿಗೆ ಮೂರು ತಿಂಗಳವರೆಗೆ ಅನುಮತಿ ನೀಡಲು ಅವಕಾಶವಿದೆ ಎಂದು ತಿಳಿಸಿದರು. ಆದ್ದರಿಂದ ಯಾರಿಗಾದರೂ ಇದರ ಬಗ್ಗೆ ಆಕ್ಷೇಪಣೆ ಇದ್ದಲ್ಲಿ ತಮ್ಮ ಡಿಸೆಂಟ್ ನೋಟ್ ನೀಡಬಹುದು ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಸರ್ಕಾರ ಸುತ್ತೋಲೆಯಂತೆ 10 ದಿವಸಗಳಿಗೆ ಎಂದು ಮಾತ್ರ ತೀರ್ಮಾನವಾಗಿರುವುದರಿಂದ 10 ದಿನಗಳವರೆಗೆ ಮಾತ್ರ ಹೋಗಿಬರಲು ಅವಕಾಶ ನೀಡಬಹುದೆಂದರು.

ಮಾನ್ಯ ಕುಲಪತಿಗಳು ಮಾತನಾಡಿ, ಶೈಕ್ಷಣಿಕ ವಿಚಾರವಾಗಿ ಅಧ್ಯಾಪಕರುಗಳು ವಿದೇಶಕ್ಕೆ ಹೋಗುವಂತಹ ಸಮಯವು ತುರ್ತಾಗಿ ಬಂದಾಗ ಕುಲಪತಿಯಾಗಿ ನಾನು ಶೈಕ್ಷಣಿಕ ವಿಚಾರಕ್ಕೆ ಸಂಬಂಧಿಸಿರುವುದರಿಂದ ಅನುಮತಿಯನ್ನು ನೀಡಬೇಕಾಗುತ್ತದೆ. ಜೊತೆಗೆ ಯಾವುದೇ ಚುನಾವಣೆಯೋ ಅಥವಾ ಸಮಸ್ಯೆಗಳುಂಟಾಗಿ ಸಿಂಡಿಕೇಟ್ ಸಭೆಯನ್ನು ಕರೆಯಲು ಕಾಲಾವಕಾಶ ದೊರಕದಿದ್ದಾಗ ಏನು ಮಾಡುವುದು? ಜೊತೆಗೆ ಅಧ್ಯಾಪಕರುಗಳು ವಿದೇಶಕ್ಕೆ ಹೋಗಿಬರಲು ವಿಶ್ವವಿದ್ಯಾನಿಲಯದಿಂದ ಆರ್ಥಿಕ ಸಹಾಯವನ್ನು ನೀಡುವುದಿಲ್ಲ, ಜೊತೆಗೆ ಶೈಕ್ಷಣಿಕ ವಿಚಾರವಾಗಿ ವಿದೇಶಕ್ಕೆ ಹೋಗಬೇಕೆಂದಾಗ ಅವಕಾಶವನ್ನು ನೀಡಬೇಕಾಗುತ್ತದೆ ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಮೂರು ತಿಂಗಳವರೆಗೆ ವಿದೇಶಕ್ಕೆ ಹೋಗಿ ಬರಲು ಅವಕಾಶ ನೀಡಲು ಸಿಂಡಿಕೇಟ್ ಸಭೆಗೆ ಏಕೆ ವಿಷಯವನ್ನು ಮಂಡಿಸಿದ್ದೀರಿ ಎಂದು ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಸಬಾಟಿಕಲ್ ರಜೆಯನ್ನು ತೆಗೆದುಕೊಳ್ಳಲು ಎಲ್ಲಾ ಅಧ್ಯಾಪಕರುಗಳಿಗೂ ಅವಕಾಶವಿದೆ. ಜೊತೆಗೆ ಸಬಾಟಿಕಲ್ ರಜೆಯನ್ನು ನೀಡಲು ಕುಲಪತಿಗಳಿಗೆ ಅಧಿಕಾರವಿರುವುದರಿಂದ ನೀಡಬಹುದು ಎಂದು ತಿಳಿಸಿದರು.

ಶ್ರೀ ನಾಗರಾಜು ಸಿ. ಅವರು ಮಾತನಾಡಿ, ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿದ ಸಂದರ್ಭದಲ್ಲಿ ಮಾನ್ಯ ಕುಲಪತಿಗಳಾದ ತಾವು 10 ದಿನಗಳು ಕೊಡುವುದಕ್ಕೆ ಆಗುವುದಿಲ್ಲ, ಪರಿಶೀಲನೆ ಮಾಡಲಾಗುವುದು ಎಂದು ತಿಳಿಸಿರುತ್ತೀರಾ ಎಂದು ಹೇಳಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಇಂತಹ ಪ್ರಸಂಗಗಳಿಂದಲೇ ನಾವು ಸಿಂಡಿಕೇಟ್ ಸಭೆಯನ್ನು ನೇರ ಪ್ರಸಾರ ಮಾಡುವಂತೆ ಆಗ್ರಹಿಸುತ್ತಿರುವುದು. ಅದರಲ್ಲಿ ನಾನು ಸರ್ಕಾರದ ಸುತ್ತೋಲೆಯಂತೆ 10 ದಿನಗಳವರೆಗೆ ವಿದೇಶಕ್ಕೆ ಹೋಗಿ ಬರಲು ಅವಕಾಶ ನೀಡಬಹುದು ಎಂದಾಗ, ತಾವು ಸನ್ನೆ ಮುಖಾಂತರ ಹೌದು ಎಂದು ತಿಳಿಸಿರುತ್ತೀರಿ ಎಂದು ತಿಳಿಸಿದರು.

ಡಾ. ಬಸವರಾಜು ಸಿ. ಅವರು ಮಾತನಾಡಿ, ಹಿಂದಿನಿಂದಲೂ ಅಧ್ಯಾಪಕರುಗಳಿಗೆ ವಿದೇಶಕ್ಕೆ ಹೋಗಿ ಬರಲು ಮೂರು ತಿಂಗಳವರೆಗೆ ಕಾಲಾವಕಾಶವನ್ನು ನೀಡಲಾಗಿದೆಯೇ ಎಂದು ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಶೈಕ್ಷಣಿಕ ವಿಚಾರವಾಗಿರುವುದರಿಂದ ಹಾಗೂ ಹಿಂದೆಯೂ ಅಧ್ಯಾಪಕರುಗಳಿಗೆ ವಿದೇಶಕ್ಕೆ ಹೋಗಿ ಬರಲು ಮೂರು ತಿಂಗಳವರೆಗೆ ಅವಕಾಶ ನೀಡಲಾಗಿದೆ ಎಂದು ತಿಳಿಸಿದರು. 2007ರಲ್ಲೇ ತೀರ್ಮಾನ ಆಗಿದೆ. ಮೊದಲು ನಡೆದಂತೆಯೇ ಎಲ್ಲಾವನ್ನು ಮಾಡುವುದಕ್ಕಾಗುವುದಿಲ್ಲ. ನಾವು ಬದಲಾವಣೆಯಾಗಬೇಕಾಗಿದೆ. ನಮ್ಮಲ್ಲಿ ಎಷ್ಟೋ ಅಧ್ಯಾಪಕರುಗಳು ಸಬಾಟಿಕಲ್ ಲೀವ್ ತೆಗೆದುಕೊಳ್ಳುತ್ತಾರೆ. ಸಬಾಟಿಕಲ್ ಲೀವ್‌ನಲ್ಲಿ ಅವರು ಶೈಕ್ಷಣಿಕವಾಗಿ ವಿದೇಶಕ್ಕೆ ಹೋಗಬೇಕು ಇಲ್ಲವಾದಲ್ಲಿ, ಒಂದು ಪುಸ್ತಕವನ್ನು ಪ್ರಕಟಣೆ ಮಾಡಬೇಕಾಗಿರುತ್ತದೆ. ಅಂತಹ ಸಂದರ್ಭಗಳಲ್ಲಿ 10 ದಿವಸಕ್ಕೆ ಮಾತ್ರ ನೀಡಲು ಹೇಗೆ ಸಾಧ್ಯ? ಆದ್ದರಿಂದ ಈ ವಿಷಯವನ್ನು ಸಿಂಡಿಕೇಟ್ ಸಭೆಗೆ ಮಂಡಿಸಲಾಗಿತ್ತು. ಕುಲಪತಿಗಳಿಗೆ ಶೈಕ್ಷಣಿಕವಾಗಿ ಅಧ್ಯಾಪಕರುಗಳು ವಿದೇಶಕ್ಕೆ ಹೋಗಿಬರಲು ಅನುಮತಿ ನೀಡಲು ಅಧಿಕಾರವಿದೆ. ಆರ್ಥಿಕ ಹೊಣೆಗಾರಿಕೆ ವಿಶ್ವವಿದ್ಯಾನಿಲಯದ್ದಾಗಿದ್ದಲ್ಲಿ ಮಾತ್ರ ನಾವು ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ನಾನೇ ಯಾರನ್ನಾದರೂ ವಿದೇಶಕ್ಕೆ ಕಳುಹಿಸಿ, ವಿಶ್ವವಿದ್ಯಾನಿಲಯದಿಂದ ಆರ್ಥಿಕವಾಗಿ ಹಣವನ್ನು ಸಂದಾಯ ಮಾಡಿದಾಗ ಮಾತ್ರ ಅದು ತಪ್ಪಾಗುತ್ತದೆ ಎಂದು ತಿಳಿಸಿದರು.

ನಂತರ ದಿನಾಂಕ: 14.08.2024 ರಂದು ನಡೆದ ಸಭೆಯ ತೀರ್ಮಾನದಂತೆ ಅಧ್ಯಾಪಕರುಗಳು ವಿದೇಶಕ್ಕೆ ಹೋಗಿಬರಲು ಅನುಮತಿಯನ್ನು ನೀಡುವ ಅಧಿಕಾರವನ್ನು ಮಾನ್ಯ ಕುಲಪತಿಗಳ ವಿವೇಚಾನುಸಾರ ನೀಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.

ಡಾ. ಹೆಚ್.ಎಸ್. ನಟರಾಜ್ ಅವರು ಮಾತನಾಡಿ, ದಿನಾಂಕ: 14.08.2024ರಂದು ನಡೆದ ಸಿಂಡಿಕೇಟ್ ಸಭೆಯ 5.3 ವಿಷಯಕ್ಕೆ ಸಂಬಂಧಿಸಿದಂತೆ ಟೆಂಡರ್ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಕೋರಲಾಗಿತ್ತು ಎಂದು ವಿಷಯವನ್ನು ಪ್ರಸ್ತಾಪಿಸುತ್ತಾ, ಹಿಂದಿನ ಸಭೆಯಲ್ಲಿ ಸರಿಯಾದ ಮಾಹಿತಿಯನ್ನು ನೀಡಿರಲಿಲ್ಲ, ಮುಂದಿನ ಸಿಂಡಿಕೇಟ್ ಸಭೆಯಲ್ಲಿ ನೀಡುವುದಾಗಿ ಹೇಳಿದ್ದಿರಿ. ಆದರೆ ಸದರಿ ಸಭೆಯಲ್ಲಿ ಆ ವಿಷಯಗಳೇ ಪ್ರಸ್ತಾಪವಾಗಿರುವುದಿಲ್ಲ ಎಂಬ ಅಂಶವನ್ನು ಸಭೆಯ ಗಮನಕ್ಕೆ ತಂದರು.

ಮಾನ್ಯ ಕುಲಪತಿಗಳು ಮಾತನಾಡಿ, ಕುಲಸಚಿವರಿಗೆ ಡಾ. ಹೆಚ್.ಎಸ್. ನಟರಾಜ್ ಅವರು ಕೋರಿರುವ ಮಾಹಿತಿ ಯಾವುದೆಂದು ಪರಿಶೀಲಿಸಲು ತಿಳಿಸಿದರು.

ಮುಂದುವರೆದು, ಮಾನ್ಯ ಕುಲಪತಿಗಳು ಮಾತನಾಡುತ್ತಾ, ಸದಸ್ಯರುಗಳು ಯಾವುದೇ ವಿಷಯಗಳ ಬಗೆಗಿನ ಮಾಹಿತಿಯನ್ನು ಕೇಳಬೇಕಾದಲ್ಲಿ ಒಂದೊಂದಾಗಿ ಹಾಗೂ ನಿಖರವಾದ ವಿಷಯದ ಬಗ್ಗೆ ಮಾಹಿತಿಯನ್ನು ಕೇಳಬೇಕೆಂದು, ಹಾಗೂ ಎಲ್ಲವನ್ನೂ ಒಟ್ಟೊಟ್ಟಿಗೆ ಕೇಳಿದಲ್ಲಿ ದಾಖಲಾತಿಯನ್ನು ನೀಡಲು ಕಷ್ಟಕರವಾಗುತ್ತದೆ. ಜೊತೆಗೆ ಮೂರು ವರ್ಷಗಳ ಮಾಹಿತಿಯನ್ನು ಒಟ್ಟಿಗೆ ಕೇಳಿದಾಗ ಸಮಯವೂ ಬೇಕಾಗುತ್ತದೆ. ನೀವು ಯಾವುದೇ ಮಾಹಿತಿಯನ್ನು ಕೇಳಿದರೂ ನೀಡಲಾಗುವುದು, ಜೊತೆಗೆ ನೀವು ಮಾಹಿತಿಯನ್ನು ಕೇಳುವುದು ತಪ್ಪೆಂದು ಹೇಳುತ್ತಿಲ್ಲ. ಆದ್ದರಿಂದ ನಿಖರವಾದ ಹಾಗೂ ವಿಷಯದ ಸ್ಪಷ್ಟತೆಯೊಂದಿಗೆ ಒಂದೊಂದೆ ಪ್ರಶ್ನೆಯನ್ನು ಕೇಳಿದರೆ ಮಾಹಿತಿಯನ್ನು ನೀಡಲು ಅನುಕೂಲವಾಗುತ್ತದೆ ಎಂದು ತಿಳಿಸಿದರು.

ಡಾ. ಹೆಚ್.ಎಸ್. ನಟರಾಜು ಅವರು ಮಾತನಾಡಿ, ಕಾರ್ಯದರ್ಶಿಗಳಿಗೆ ಮಾಹಿತಿಯನ್ನು ನೀಡಲು ತೊಂದರೆಯಾಗಬಾರದೆಂಬ ಕಾರಣಕ್ಕಾಗಿ point to point ನಲ್ಲಿ ಈಗ ನೀಡಿರುವ ಪತ್ರದಲ್ಲಿಯೂ ಸಹ ಕೋರಲಾಗಿದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಮುಂದಿನ ಸಿಂಡಿಕೇಟ್ ಸಭೆಗೆ detail ಆಗಿ ತರುತ್ತಾರೆ ಎಂದು ತಿಳಿಸಿದರು.

ಡಾ. ಹೆಚ್.ಎಸ್. ನಟರಾಜು ಅವರು ಮಾತನಾಡಿ, ಟೆಂಡರ್ ಪ್ರಕ್ರಿಯೆಗಳಿಗೆ ಸಂಬಂಧಿಸಿದ ಮಾಹಿತಿಯನ್ನು ತಾವು ಸರಿಯಾಗಿ ನೀಡದೆ ಇರುವ ಕಾರಣ, point to point ಟೆಂಡರ್ ಪ್ರಕ್ರಿಯೆ ಪ್ರಾರಂಭಿಸಿದ ದಿನಾಂಕ, ಬಿಡ್ಡುದಾರರಗಳ ವಿವರವನ್ನು ಹಾಗೂ ಟೆಂಡರ್‌ಗೆ ಸಂಬಂಧಿಸಿದ ಎಲ್ಲಾ ಮಾಹಿತಿಗಳನ್ನು ಸವಿವರವಾಗಿ ಕೇಳಲಾಗಿತ್ತು ಎಂದು ತಿಳಿಸುತ್ತಾ, ಇಂದಿನ ಸಭೆಗೆ ವಿಷಯವನ್ನು ಮಂಡಿಸಲಾಗುವುದು ಎಂದು ತಿಳಿಸಿದ್ದೀರಿ. ಆ ವಿಷಯವನ್ನು ಸಭೆಯಲ್ಲಿ ಸೇರಿಲ್ಲವೆಂಬುದು ನನ್ನ ಪ್ರಶ್ನೆ ಎಂದು ಕೇಳಿದರು.

ಮಾನ್ಯ ಕುಲಪತಿಗಳು ಮುಂದಿನ ಸಭೆಗೆ ಟೆಂಡರ್‌ಗೆ ಸಂಬಂಧಿಸಿದ ವಿಷಯವನ್ನು ವಿವರವಾಗಿ ಮಂಡಿಸಲು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ದಿನಾಂಕ: 14.08.2024 ರಂದು ನಡೆದ ವಿಷಯ ಸಂಖ್ಯೆ 5.9ನ Corpus Fundಗೆ ಸಂಬಂಧಿಸಿದಂತೆ, ಪಿಂಚಣಿದಾರರಿಗೆ ಪಿಂಚಣಿ ಪಾವತಿಗೆ ಕೊರತೆ ಇರುವುದರಿಂದ LICಯ Corpus Fundನಲ್ಲಿರುವ ರೂ.49.00 ಕೋಟಿಗಳನ್ನು ಬಳಸಿಕೊಳ್ಳುವುದಾಗಿ ತಿಳಿಸಿದ್ದೀರಿ. ಆದರೆ ನಾನು LICಯ Corpus Fundನ್ನು ಬಳಸಿಕೊಳ್ಳಲು ಕೊರತೆಯಿಲ್ಲದೆಯಿರುವುದರಿಂದ ಜೊತೆಗೆ ಖಾತೆಯಲ್ಲಿ ರೂ.79.46 ಕೋಟಿಯಿರುವುದರಿಂದ. ಜೊತೆಗೆ ನೀವು ನೀಡಿರುವಂತಹ ಬಜೆಟ್ ಪುಸ್ತಕದಲ್ಲಿ Opening Balance ಹಾಗೂ Closing Balanceನಲ್ಲೂ ಒಂದೇ ರೀತಿಯ ಅಂಕಿಯೂ ನಮೂದಾಗಿದೆ ಎಂದು ಹೇಳಿದ್ದಕ್ಕೆ, ಹಣಕಾಸು ಅಧಿಕಾರಿಗಳಾದ ತಾವು ತಪ್ಪಾಗಿದೆ ಆದ್ದರಿಂದ ಆಗಸ್ಟ್ 2024ರವರೆಗೆ 49.00 ಕೋಟಿ ಇತ್ತು. ಈಗ ಆ ಮೊತ್ತವೂ ಇಲ್ಲವೆಂದು ಅದನ್ನು ತಿದ್ದುಪಡಿ ಮಾಡಿ ಮರುಮಂಡಿಸಿ ಅನುಮೋದನೆ ಪಡೆಯಲಾಗುವುದು ಎಂದು ತಿಳಿಸಿದ್ದೀರಿ ಎಂದು ತಿಳಿಸಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ, ಬಜೆಟ್ ಪುಸ್ತಕದಲ್ಲಿ Opening Balance ಹಾಗೂ Closing Balanceನಲ್ಲೂ ಒಂದೇ ತೆರನಾದ ಅಂಕಿಯೂ ನಮೂದಾಗಿದೆ ಎಂದು ತಿಳಿಸಿದ್ದೀರಿ, ಅದು ಯಾವ ಕಾರಣಕ್ಕಾಗಿ ಒಂದೇ ತೆರನಾಗಿದೆ ಎಂದರೆ, ಪ್ರತಿ ವರ್ಷವೂ ಸರ್ಕಾರದಿಂದ ನಾವು ಕೋರಿರುವಂತೆ ಪೂರ್ಣ ಪ್ರಮಾಣದ ಅನುದಾನವನ್ನು ನಿರೀಕ್ಷೆ ಮಾಡುತ್ತಿರುತ್ತೇವೆ. ಅದೇ ರೀತಿ ಪೂರ್ಣ ಪ್ರಮಾಣದ ಪಿಂಚಣಿ ಅನುದಾನವು ದೊರಕುತ್ತದೆ ಎಂಬ ನಿರೀಕ್ಷೆ ಇದ್ದುದರಿಂದ ಹಾಗೂ ಪ್ರತಿ ವರ್ಷ LICಯ Corpus Fundನಿಂದ ಎಷ್ಟು ಮೊತ್ತವನ್ನು ಡ್ರಾ ಮಾಡುತ್ತೇವೆ ಎಂಬುದು ಗೊತ್ತಾಗದಿರುವುದರಿಂದ ಹಾಗೂ ಸರ್ಕಾರದಿಂದ ಪೂರ್ಣ ಪ್ರಮಾಣದ ಪಿಂಚಣಿ ಅನುದಾನವು ದೊರಕಬಹುದೆಂಬ ನಿರೀಕ್ಷೆಯಿಂದ Opening Balance ಹಾಗೂ Closing Balanceನಲ್ಲೂ ಒಂದೇ ತೆರನಾಗಿ ದಾಖಲಿಸಲಾಗಿದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ವಿಶ್ವವಿದ್ಯಾನಿಲಯವು LICಯ Corpus Fundನ ವಿಷಯಕ್ಕೆ ತೆಗೆದುಕೊಂಡ ಕ್ರಮದ ಬಗ್ಗೆ ಸಭೆಗೆ ತಿಳಿಸುತ್ತಾ, ಸದರಿ ವಿಷಯವನ್ನು ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಲು ಕ್ರಮಕ್ಕೈಗೊಂಡಿರುವುದಾಗಿ ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ದಿನಾಂಕ : 14.08.2024 ರಂದು ನಡೆದ ಸಭೆಯ ನಡಾವಳಿಯಲ್ಲಿರುವ ಇತರೆ ವಿಷಯಗಳಲ್ಲಿರುವ ಡಾ. ವಿಶ್ವನಾಥ, ನಿವೃತ್ತ ಪ್ರಾಧ್ಯಾಪಕರ ವಿಷಯಕ್ಕೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆಗೆ ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿತ್ತು ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಡಾ. ವಿಶ್ವನಾಥ ಇವರ ಪ್ರಕರಣಕ್ಕೆ ಸಂಬಂಧಿಸಿದಂತೆ ಸಮಿತಿಯು ನೀಡಿರುವ ವರದಿಯಲ್ಲಿ ಯಾವ ಕ್ರಮ ವಹಿಸಬೇಕು ಎಂಬುದರ ಬಗ್ಗೆ ಸ್ಪಷ್ಟವಾಗಿ ತಿಳಿಸಿರುವುದಿಲ್ಲ. ಜೊತೆಗೆ ನಿಮ್ಮ ಕಮಿಟಿ ವರದಿಯಲ್ಲಿ ಇಲಾಖಾವಾರು ಪತ್ತೆ ಮಾಡಿ ಎಂದಿದೆ. ಸದರಿ ಸಮಿತಿಯು ನೀಡಿರುವ ವರದಿಯನ್ನು ನಾವು ಒಪ್ಪಿಕೊಳ್ಳಲು ಹೇಗೆ ಸಾಧ್ಯ? ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಕಮಿಟಿಯ ತೀರ್ಮಾನದಂತೆ, ಸಿಂಡಿಕೇಟ್ ಸಭೆಯಲ್ಲಿ ಇಲಾಖಾ ವಿಚಾರಣೆಯನ್ನು ಮಾಡುವುದಾಗಿ ತೀರ್ಮಾನಿಸಲಾಗಿತ್ತು ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, Judicial Enquiry ಮಾಡಲಾಗುವುದಿಲ್ಲವೆಂದು ಹಾಗೂ ಇಲಾಖಾ ವಿಚಾರಣೆಗೆ ಅನುಮೋದನೆ ನೀಡಲಾಗಿದೆ ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಡಾ. ವಿಶ್ವನಾಥ ಅವರ ವಿಷಯಕ್ಕೆ ಸಂಬಂಧಿಸಿದಂತೆ 1994ರ ಕಾಯ್ದೆ ಪ್ರಕಾರ ಕಮಿಟಿಯು ಯಾವುದೇ ತೀರ್ಮಾನವನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲದೆ ಇರುವುದರಿಂದ, ಇಲಾಖಾ ವಿಚಾರಣೆಯನ್ನು ನಡೆಸಲು ಶಿಫಾರಸ್ಸು ಮಾಡಲಾಗಿತ್ತು ಎಂಬ ಅಂಶವನ್ನು ಸಭೆಯ ಗಮನಕ್ಕೆ ತರುತ್ತಾ, ನಿಖರವಾಗಿ ತೀರ್ಮಾನದಲ್ಲಿ ಸ್ಪಷ್ಟತೆಯಿಲ್ಲವೆಂದು ತಿಳಿಸುತ್ತಾ, ಕ್ರಮವಹಿಸಲಾಗುವುದು ಎಂಬುದರ ಬದಲು ಡಾ. ವಿಶ್ವನಾಥ್, ನಿವೃತ್ತ ಪ್ರಾಧ್ಯಾಪಕರು ಇವರ ಪ್ರಕರಣಕ್ಕೆ ಇಲಾಖಾ ವಿಚಾರಣೆಯನ್ನು ಹಾಗೂ ಮುಂದೆ ಈ ರೀತಿಯ ಯಾವುದಾದರೂ ಪ್ರಕರಣ ಜರುಗಿದಲ್ಲಿ ಅಂತಹ ಸಂದರ್ಭದಲ್ಲಿಯೂ ಇಲಾಖಾ ವಿಚಾರಣೆಯನ್ನು ನಡೆಸಲು ತೀರ್ಮಾನಿಸಲಾಗಿದೆ ಎಂದು ತೀರ್ಮಾನವಾಗಬೇಕೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಡಾ. ವಿಶ್ವನಾಥ್ ಅವರು ಜವಾಹರ್‌ಲಾಲ್ ನೆಹರು ವಿಶ್ವವಿದ್ಯಾನಿಲಯ, ದೆಹಲಿಯಲ್ಲಿ ವೇತನವನ್ನು ಪಡೆಯುತ್ತಿದ್ದರು. ಪ್ರಸ್ತುತ ಅವರು ನಿವೃತ್ತಿ ಹೊಂದಿದ್ದಾರೆ. ಆದ್ದರಿಂದ ಅವರಿಗೆ ಪಿಂಚಣಿಯನ್ನು ನೀಡಬೇಕಾಗುತ್ತದೆ. ಪಿಂಚಣಿ ನೀಡುವಾಗ ಎಷ್ಟು ಮೊತ್ತವನ್ನು ಕಡಿತಗೊಳಿಸಬೇಕಾಗುವುದೋ ಅದನ್ನು ತಡೆಹಿಡಿಯುತ್ತೇವೆ. ಆದರೆ, ಪ್ರಸ್ತುತ JNU ವಿಶ್ವವಿದ್ಯಾನಿಲಯದಲ್ಲಿ ಏನೇನಾಗಿದೆ ಎಂಬುದರ ಬಗ್ಗೆ ಮಾಹಿತಿಯನ್ನು ಪಡೆಯುತ್ತಿದ್ದೇವೆ. ಆದ್ದರಿಂದ JNU ವಿಶ್ವವಿದ್ಯಾನಿಲಯದಲ್ಲಿ ಬೇರೆ ರೀತಿಯ ವ್ಯವಹಾರಗಳು

ನಡೆದಿದೆಯೇ ಎಂಬುದರ ಬಗ್ಗೆ ಸಂಪೂರ್ಣ ಮಾಹಿತಿ ದೊರಕಿದ ನಂತರವೇ ನಾವು ಇಲಾಖಾ ವಿಚಾರಣೆಯನ್ನು ನಡೆಸಲು ಸಾಧ್ಯ ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಡಾ. ವಿಶ್ವನಾಥ್ ಅವರಿಗೆ ಸಂಬಂಧಿಸಿದ ವಿಷಯದ ಬಗ್ಗೆ ದಿನಾಂಕ : 20.06.2024 ರಂದು ನಡೆದ ಸಿಂಡಿಕೇಟ್ ಸಭೆಯ ತೀರ್ಮಾನವನ್ನು ರದ್ದು ಮಾಡುವಂತೆ ತಿಳಿಸಿದರು.

**ತೀರ್ಮಾನ : ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ, ಕುಲಸಚಿವರು ಮಾತನಾಡಿ, ಡಾ.ವಿಶ್ವನಾಥ, ನಿವೃತ್ತ ಪ್ರಾಧ್ಯಾಪಕರು, ಕನ್ನಡ ವಿಭಾಗ, ಮಹಾರಾಜ ಕಾಲೇಜು, ಮೈಸೂರು ಇವರು ಜವಾಹರ್‌ಲಾಲ್ ನೆಹರು ವಿಶ್ವವಿದ್ಯಾನಿಲಯ, ದೆಹಲಿ ಇಲ್ಲಿನ ಕನ್ನಡ ವಿಭಾಗದಲ್ಲಿ ನಿಯೋಜನೆ ಮೇರೆಗೆ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಲು ಇವರ ಹುದ್ದೆಯ ಮೇಲಿನ ಹಕ್ಕನ್ನು "ಲೀನ್" 2 ವರ್ಷಕ್ಕೆ ಅನುಮತಿ ಪಡೆದು ನಂತರ ಅನಧಿಕೃತವಾಗಿ ಗೈರುಹಾಜರಿಯಾಗಿರುವ ಸಂಬಂಧ ಮೂರನೇ ವರ್ಷದ ಅನಧಿಕೃತವಾಗಿ ಗೈರು ಹಾಜರಾಗಿರುವ ಅವಧಿಯನ್ನು ಕೆ.ಸಿ.ಎಸ್.ಆರ್. ನಿಮಯ 106(ಎ) ಅನ್ವಯ ವೇತನರಹಿತ ರಜೆಯೆಂದು ಪರಿಗಣಿಸಿ ರಜೆಯನ್ನು ನೀಡಲಾಗಿತ್ತು. ದಿನಾಂಕ 20.06.2024 ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿಯೂ ವೇತನ ರಹಿತ ರಜೆಯೆಂದು ಪರಿಗಣಿಸಿ ತೀರ್ಮಾನಿಸಲಾಗಿತ್ತು. ಪ್ರಸ್ತುತ ದಿನಾಂಕ: 20.09.2024ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಡಾ. ವಿಶ್ವನಾಥ್ ಅವರ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕ: 20.06.2024ರಂದು ತೆಗೆದುಕೊಂಡ ತೀರ್ಮಾನವನ್ನು ಮುಂದಿನ ಆದೇಶದವರೆಗೆ ಅಮಾನತ್ತಿನಲ್ಲಿಡಲು ತೀರ್ಮಾನಿಸಲಾಯಿತು.**

ಮುಂದುವರೆದು, ಕುಲಸಚಿವರು ಮಾತನಾಡಿ, ಡಾ. ವಿಶ್ವನಾಥ್ ಅವರು ಈಗಾಗಲೇ ಪೂರ್ಣ ವೇತನವನ್ನು ಪಡೆದಿದ್ದಾರೆ ಜೊತೆಗೆ ಸರ್ಕಾರದಿಂದ ಜವಾಹರ್‌ಲಾಲ್ ನೆಹರು ವಿಶ್ವವಿದ್ಯಾನಿಲಯ, ದೆಹಲಿ ಇಲ್ಲಿನ ಕನ್ನಡ ವಿಭಾಗಕ್ಕೆ ನಿಯೋಜನೆ ಮಾಡಲಾಗಿತ್ತು ಎಂದು ತಿಳಿಸಿದರು.

ಡಾ. ಬಸವರಾಜು ಸಿ. ಅವರು ಮಾತನಾಡಿ, ಕಮಿಟಿ ತೀರ್ಮಾನ ಹಾಗೂ ಅವರಿಗೆ ಸಂಬಂಧಪಟ್ಟ ಎಲ್ಲವನ್ನು ಮುಂದಿನ ಆದೇಶದವರೆಗೆ ಅಮಾನತ್ತಿನಲ್ಲಿಡಲಾಗುತ್ತಿದೆಯೇ ಎಂದು ಕೇಳಿದರು.

ಶ್ರೀ ಮಹದೇಶು ಅವರು ಮಾತನಾಡಿ, ಜವಾಹರ್‌ಲಾಲ್ ನೆಹರು ವಿಶ್ವವಿದ್ಯಾನಿಲಯ, ದೆಹಲಿ ಇಲ್ಲಿಂದ ಅವರು ರಿಲೀವಿಂಗ್ ಆರ್ಡರ್‌ಅನ್ನು ಪಡೆದಿರಲಿಲ್ಲವೇ ಎಂದು ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಡಾ. ವಿಶ್ವನಾಥ್ ಅವರಿಗೆ ರಿಲಿವಿಂಗ್ ಆರ್ಡರ್ ಪಡೆದು ಮೂಲ ಹುದ್ದೆಗೆ ಬರದೇ ಹೋದಲ್ಲಿ ಮುಂದೆ ನಿಮಗೆ ತೊಂದರೆಯಾಗುತ್ತದೆಂದು ಅವರಿಗೆ ತಿಳಿಸಿ, ಅವರನ್ನು ಕರೆಸಿಕೊಳ್ಳಲಾಯಿತು ಎಂದು ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ಡಾ. ವಿಶ್ವನಾಥ್ ಅವರಿಗೆ ಸಂಬಂಧಿಸಿದ ವಿಚಾರಣೆಯು ಪೂರ್ಣಗೊಳ್ಳುವ ತನಕ ಪಿಂಚಣಿ ಸೌಲಭ್ಯಗಳೆಲ್ಲವನ್ನು ತಡೆಹಿಡಿಯಬೇಕೆಂದು, ಪ್ರಾವಿಜನಲ್ ಪಿಂಚಣಿಯನ್ನು ಮಾತ್ರ ನೀಡಬಹುದೆಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ತೀರ್ಮಾನದಲ್ಲಿ ಪಿಂಚಣಿ ಸೌಲಭ್ಯಗಳನ್ನು ತಡೆಹಿಡಿದಿರುವ ಬಗ್ಗೆಯೂ ಸೇರಿಸುವಂತೆ ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಡಾ. ವಿಶ್ವನಾಥ್ ಅವರು ಜವಾಹರ್‌ಲಾಲ್ ನೆಹರು ವಿಶ್ವವಿದ್ಯಾನಿಲಯ, ದೆಹಲಿ ಇಲ್ಲಿ ಇದ್ದಂತಹ ಸಂದರ್ಭದಲ್ಲಿ ರಜೆಯನ್ನು ಹಾಕಿದ್ದಾರೋ ಅಥವಾ ಏನು ಮಾಡಿದ್ದಾರೋ ಎಂಬುದರ ಬಗ್ಗೆ ಮಾಹಿತಿ ಪಡೆಯಬೇಕಾಗುತ್ತದೆ ಎಂದು ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ಈ ಹಿಂದೆ ಈ ರೀತಿಯ ಪ್ರಕರಣಗಳು ಜರುಗಿದ್ದಂತಹ ಸಂದರ್ಭದಲ್ಲಿ, ಅಂತಹ ಪ್ರಕರಣಗಳಲ್ಲಿ ಒಳಗಾದವರಿಗೆ ಎಲ್ಲಾ ಪಿಂಚಣಿ ಸೌಕರ್ಯಗಳನ್ನು ನೀಡಿದರೆ, ಅವರಿಂದ

ವಸೂಲಾತಿ ಮಾಡಲು ಕಷ್ಟಸಾಧ್ಯವಾಗುತ್ತದೆ. ಆದ್ದರಿಂದ ವಾಪಸ್ಸು ಬರುವವರೆಗೆ ಅವರಿಗೆ ಎಲ್ಲಾ ಸೌಲಭ್ಯಗಳನ್ನು ನೀಡಬಾರದೆಂದರು.

ಮಾನ್ಯ ಕುಲಪತಿಗಳು ಮಾತನಾಡಿ, ವಿಶ್ವವಿದ್ಯಾನಿಲಯದ ಬೋಧಕ/ಬೋಧಕೇತರ ಸಿಬ್ಬಂದಿಗಳಿಗೆ ಪಿಂಚಣಿ ಸೌಕರ್ಯವನ್ನು ನೀಡುವ ಸಂದರ್ಭದಲ್ಲಿ ಇಲಾಖೆಯಿಂದಾಗಲಿ, ವಿಭಾಗದಿಂದಾಗಲಿ No Dues Certificate ಅನ್ನು ನೀಡದಿದ್ದಲ್ಲಿ ಪೂರ್ಣ ಪ್ರಮಾಣದ ಪಿಂಚಣಿ ಸೌಲಭ್ಯವನ್ನು ನೀಡಲಾಗುವುದಿಲ್ಲ, ಕೇವಲ Provisional ಪಿಂಚಣಿಯನ್ನು ಮಾತ್ರ ನೀಡಲಾಗುವುದೆಂದು ತಿಳಿಸಿದರು.

ಡಾ. ಬಸವರಾಜು ಸಿ. ಅವರು ಮಾತನಾಡಿ, ಅಮಾನತ್ತು ಎಂಬುದು ಕ್ಲಿಯರ್ ಆದ ನಂತರವೇ ಅವರಿಗೆ ಸಲ್ಲಬೇಕಾದ ಪೂರ್ಣ ಪ್ರಮಾಣದ ಸೌಕರ್ಯವು ದೊರಕುವುದು ಎಂದು ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ಶ್ರೀ ಮಹದೇಶು ಅವರು ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ಅತಿಥಿ ಉಪನ್ಯಾಸಕರ ಸಂದರ್ಶನದ ಮೂಲಕ ಆಹ್ವಾನಿಸುವ ವಿಷಯದ ಬಗ್ಗೆ ಪ್ರಶ್ನಿಸಿದ್ದರು. ಮಾನ್ಯ ಕುಲಪತಿಗಳಾದ ತಾವು ಮುಂದಿನ ಶೈಕ್ಷಣಿಕ ಸಾಲಿನಿಂದ Calender of Events ನಲ್ಲಿ ಸೇರ್ಪಡೆಗೊಳಿಸಲಾಗುವುದು ಎಂದು ತಿಳಿಸಿದ್ದಿರಿ, ಆದರೆ ಕೆಲವೊಂದು ಅತಿಥಿ ಉಪನ್ಯಾಸಕರುಗಳು ಹೆಚ್ಚಾಗಿದ್ದಲ್ಲಿ ಅವರುಗಳನ್ನು Dropout ಮಾಡಿ ಎಂಬುದು ಸಿಂಡಿಕೇಟ್ ಸದಸ್ಯರುಗಳಾದ ನಮ್ಮಗಳ ಅಭಿಪ್ರಾಯವೇ ಆಗಿತ್ತು. ಆದರೆ, ಅನೇಕ ಅತಿಥಿ ಉಪನ್ಯಾಸಕರುಗಳು ನಮ್ಮಲ್ಲಿ ನಿವೇದಿಸಿಕೊಳ್ಳುತ್ತಿರುವುದೇನೆಂದರೆ, ನಮಗೆ 8 ಗಂಟೆಗಳ ಕಾರ್ಯಭಾರವನ್ನು 4 ಗಂಟೆಗೆ, 12 ಗಂಟೆಗಳ ಕಾರ್ಯಭಾರವನ್ನು 8 ಗಂಟೆಗೆ ಮಿತಿಗೊಳಿಸಿ ಕಾರ್ಯಭಾರವನ್ನು ಹಂಚಿಕೆ ಮಾಡಲಾಗಿದೆ ಎಂದು ತಿಳಿಸಿರುವುದನ್ನು ಸಭೆಯ ಗಮನಕ್ಕೆ ತಂದರು.

ಮಾನ್ಯ ಕುಲಪತಿಗಳು ಮಾತನಾಡಿ, ಯಾರಿಗೂ ಆ ರೀತಿಯ ಕಾರ್ಯಭಾರವನ್ನು ಇಳಿಕೆ ಮಾಡುವುದಾಗಲಿ, ಹೆಚ್ಚಿಗೆ ಮಾಡುವುದಾಗಲಿ ಮಾಡಲಾಗಿಲ್ಲ, ಆದರೆ ಕೆಲವು ಅಧ್ಯಯನ ವಿಭಾಗದಲ್ಲಿ ಲಭ್ಯವಿರುವ ಕಾರ್ಯಭಾರವನ್ನು ಹಂಚಿಕೆ ಮಾಡಲಾಗಿದೆ ಎಂದು ತಿಳಿಸಿದರು. ಸುಮಾರು 62 ವಿಷಯಗಳಿರುತ್ತದೆ. ಕಾರ್ಯಭಾರವನ್ನು ಹಂಚಿಕೆ ಮಾಡುವ ಸಂದರ್ಭದಲ್ಲಿ ಆಯಾಯ ವಿಷಯಗಳ ಅಧ್ಯಕ್ಷರನ್ನು ನಂಬಿರುತ್ತೇವೆ. ಅರ್ಥಶಾಸ್ತ್ರ ವಿಭಾಗದಲ್ಲಿ ಕವಿತಾ ಎನ್ನುವವರಿಗೆ 4 ಗಂಟೆಯಿಂದ 8 ಗಂಟೆಗೆ ನೀಡಿ, ಇತಿಹಾಸದಲ್ಲಿ ಸೀತಾರಾಮ್ ಎನ್ನನುವವರನ್ನು ಕೈಬಿಟ್ಟಿದ್ದಾರೆ. ಅವರು ಬದಲಾವಣೆ ಮಾಡಿದಾಗ ಇಂತಹ ಪ್ರಸಂಗಗಳು ನಡೆಯುವ ಸಾಧ್ಯತೆ ಇರುತ್ತದೆ ಎಂದು ತಿಳಿಸಿದರು.

ಡಾ. ಬಸವರಾಜು ಸಿ. ಅವರು ಮಾತನಾಡಿ, ಮಹಾರಾಜ ಕಾಲೇಜಿನ ಇತಿಹಾಸ ವಿಭಾಗದಲ್ಲಿ ಅತಿಥಿ ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಮಹದೇವಯ್ಯ ಎನ್ನುವವರಿಗೂ 8 ಗಂಟೆಯಿಂದ 4 ಗಂಟೆಗೆ ಕಾರ್ಯಭಾರವನ್ನು ಕಡಿಮೆ ಮಾಡಿದ್ದಾರೆ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಅತಿಥಿ ಉಪನ್ಯಾಸಕರನ್ನು ನೇಮಕ ಮಾಡುವ ಸಂದರ್ಭದಲ್ಲಿ ಆದಂತಹ ಕೆಲವು ವ್ಯತ್ಯಾಸಗಳನ್ನು ಸರಿಪಡಿಸಲಾಗಿದೆ. ಉದಾಹರಣೆಗೆ ಕೆಮಿಸ್ಟ್ರಿ ವಿಭಾಗದಲ್ಲಿ ಯುಜಿ ಮತ್ತು ಪಿಜಿ ಕೋರ್ಸ್‌ಗಳು ಇರುವುದರಿಂದ ಪಿಜಿ ಹಾಗೂ ಯುಜಿ ಎರಡಕ್ಕೂ ಅತಿಥಿ ಉಪನ್ಯಾಸಕರನ್ನು ಆಹ್ವಾನಿಸಲಾಗಿದೆ. ಆದರೆ ಪಿಜಿ ತರಗತಿಗಳು ಪ್ರಾರಂಭವಾಗದೆ ಇರುವುದರಿಂದ ಅತಿಥಿ ಉಪನ್ಯಾಸಕರುಗಳಿಗೆ ಆದೇಶವನ್ನು ನೀಡಿಲ್ಲ. ಕೆಲವೊಬ್ಬ ಅತಿಥಿ ಉಪನ್ಯಾಸಕರುಗಳಿಗೆ ಪಿಜಿ ಹಾಗೂ ಯುಜಿನಲ್ಲಿ 4-4 ಗಂಟೆಗಳ ಕಾರ್ಯಭಾರವನ್ನು ನೀಡಿ ಸರಿದೂಗಿಸಲಾಗಿದೆ ಎಂದು ತಿಳಿಸಿದರು.

ಡಾ. ಬಸವರಾಜು ಸಿ ಅವರು ಮಾತನಾಡಿ, ಮುಖ್ಯವಾಗಿ ಮಹಾರಾಜ ಕಾಲೇಜಿನ ಇತಿಹಾಸ ವಿಭಾಗದಲ್ಲಿ ರವಿಕುಮಾರ್ ರವರು 21 ವರ್ಷಗಳಿಂದ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ ಅವರಿಗೆ 12 ಗಂಟೆಗಳಿಂದ 4 ಗಂಟೆಗಳ ಕಾರ್ಯಭಾರವನ್ನೂ ಮಹಾದೇವಯ್ಯ ಎನ್ನುವವರು 11 ವರ್ಷಗಳಿಂದ ಸೇವೆ ಸಲ್ಲಿಸುವವರಿಗೆ 8 ಗಂಟೆಗಳಿಂದ 4 ಗಂಟೆಗಳ ಕಾರ್ಯಭಾರವನ್ನೂ, ಹಾಗೆಯೇ ಸೌಮ್ಯ ಎನ್ನುವವರು ಹಾಸನ

ಸ್ನಾತಕೋತ್ತರ ಕೇಂದ್ರದಲ್ಲಿ ಅತಿಥಿ ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸುತ್ತಿರುವವರಿಗೆ ಪ್ರಸ್ತುತ ನಮ್ಮ ವಿಶ್ವವಿದ್ಯಾನಿಲಯದಲ್ಲಿ ಅವರಿಗೆ ಅತಿಥಿ ಉಪನ್ಯಾಸಕರಾಗಿ ಆದೇಶವನ್ನು ನೀಡಲಾಗಿದೆ ಎಂಬ ಮಾಹಿತಿ ತಿಳಿದು ಬಂದಿದೆ.

ಮಾನ್ಯ ಕುಲಪತಿಗಳು ಮಾತನಾಡಿ, ಅತಿಥಿ ಉಪನ್ಯಾಸಕರಗಳ ನೇಮಕಾತಿ ಸಂದರ್ಭದಲ್ಲಿ ಆದಂತಹ ಮುಖ್ಯವಾದ ವ್ಯತ್ಯಾಸಗಳನ್ನು ಸರಿಪಡಿಸಲಾಗಿದೆ ಎಂದು ತಿಳಿಸಿದರು. ಹಾಗೆಯೇ ಕನ್ನಡ ಮತ್ತು ಇಂಗ್ಲಿಷ್ ವಿಭಾಗಗಳಲ್ಲಿ ಕಾರ್ಯಭಾರವೇ ಕಡಿಮೆಯಾಗಿರುವುದರಿಂದ ಎಲ್ಲರಿಗೂ 4-4 ಗಂಟೆಗಳ ಕಾರ್ಯಭಾರವನ್ನು ನೀಡಲಾಗಿದೆ ಎಂದು ತಿಳಿಸಿದರು.

ಶ್ರೀ ನಾಗರಾಜು ಸಿ. ಅವರು ಮಾತನಾಡಿ, ಇತಿಹಾಸ ವಿಭಾಗದಲ್ಲಿ ಕಾರ್ಯಭಾರವನ್ನು ಹಂಚಿಕೆ ಮಾಡಿರುವುದು ಇನ್ನೂ ಸರಿಯಾಗಿಲ್ಲ. ಹಾಗೂ ಸದರಿ ವಿಷಯದ ಬಗ್ಗೆ ತಮ್ಮ ಗಮನಕ್ಕೂ ತಂದಿದ್ದೆ. ಮಣಿಕಂಠ ಎನ್ನುವವರಿಗೆ 8 ಗಂಟೆಯಿದ್ದಂತಹ ಕಾರ್ಯಭಾರವನ್ನು 4 ಗಂಟೆಗೆ ಇಳಿಸಲಾಗಿದೆ. ಆದರೆ ಸಂಜೆ ಕಾಲೇಜಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ರಮೇಶ್ ಅವರಿಗೆ 4 ಗಂಟೆಗಳ ಕಾರ್ಯಭಾರವನ್ನು ನೀಡಲಾಗಿದೆ. ಆದ್ದರಿಂದ ರಮೇಶ್ ಎನ್ನುವವರಿಗೆ ಬೇರೆ ಕಡೆ ಕಾರ್ಯಭಾರವನ್ನು ನೀಡಿ, ಮಣಿಕಂಠ ಎನ್ನುವವರಿಗೆ ಮೊದಲಿದ್ದ ಹಾಗೆ 8 ಗಂಟೆಗಳ ಕಾರ್ಯಭಾರವನ್ನು ನೀಡಬೇಕೆಂದು ಅವರಿಗೆ ಅನ್ಯಾಯ ಮಾಡಬಾರದೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಅತಿಥಿ ಉಪನ್ಯಾಸಕರುಗಳಿಗೆ ಕಾರ್ಯಭಾರವನ್ನು ಹಂಚಿಕೆ ಮಾಡುವಾಗ ಅವರ Seniorityಯ ಆಧಾರದ ಮೇಲೆ ನೀಡಲಾಗಿದೆ. ಯಾರಿಗೂ ಅನ್ಯಾಯ ಮಾಡಲಾಗಿಲ್ಲ ಎಂದು ತಿಳಿಸುತ್ತಾ, ಮಣಿಕಂಠ ಅವರ ವಿಷಯವನ್ನು ಪರಿಶೀಲಿಸಲಾಗುವುದು ಎಂದು ತಿಳಿಸಿದರು.

ಪ್ರೊ. ಶಬೀರ್ ಮೊಹಮ್ಮದ್ ಮುಸ್ತಾಫಾ ಅವರು ಮಾತನಾಡಿ, ಇಂಜಿನಿಯರಿಂಗ್ ಕಾಲೇಜಿನಲ್ಲಿರುವ ಅತಿಥಿ ಉಪನ್ಯಾಸಕರುಗಳಿಗೆ ನೀಡುತ್ತಿರುವ ವೇತನದಲ್ಲಿ ವ್ಯತ್ಯಾಸವಿದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಇಂಜಿನಿಯರಿಂಗ್ ಕಾಲೇಜಿನಲ್ಲಿರುವ ಅತಿಥಿ ಉಪನ್ಯಾಸಕರುಗಳ ವೇತನದಲ್ಲಿ ವ್ಯತ್ಯಾಸವಿದೆ ಎಂಬುದು ಗಮನಕ್ಕೆ ಬಂದಿದೆ. ಮುಂದಿನ ತಿಂಗಳಲ್ಲಿ ಅತಿಥಿ ಉಪನ್ಯಾಸಕರುಗಳು ರಿಲೀವ್ ಆಗುತ್ತಿದ್ದಾರೆ. ಮೊದಲು ಬಂದ ಅತಿಥಿ ಉಪನ್ಯಾಸಕರುಗಳಿಗೆ ರೂ. 55,000/-, ಅನಂತರ ಬಂದವರಿಗೆ ರೂ. 50,000/- ಹೀಗೆ ವೇತನದಲ್ಲಿ ವ್ಯತ್ಯಾಸವಾಗಿದೆ. ಆಗ ಇದ್ದಂತಹ ಕಮಿಟಿ ಮುಂದೆ ಈ ವಿಷಯ ಬಂದಿದ್ದರೆ ಸರಿಪಡಿಸಬಹುದಾಗಿತ್ತು. ಇಂಜಿನಿಯರಿಂಗ್ ಕಾಲೇಜಿನ ಅತಿಥಿ ಉಪನ್ಯಾಸಕರುಗಳ ವೇತನದಲ್ಲಿ ಆದಂತಹ ವ್ಯತ್ಯಾಸಗಳೆಲ್ಲವನ್ನೂ ಸರಿಪಡಿಸಲಾಗುವುದು ಎಂದು ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ನಮ್ಮ ಇಂಜಿನಿಯರಿಂಗ್ ಕಾಲೇಜನ್ನು ಸಹ ಹೊರಗಡೆ ಇರುವಂತಹ ಪ್ರೈವೇಟ್ ಇಂಜಿನಿಯರಿಂಗ್ ಕಾಲೇಜುಗಳ ಮಟ್ಟಕ್ಕೆ ಕೊಂಡೊಯ್ಯಬೇಕು. ಆದ್ದರಿಂದ ನಾವು ಉಪನ್ಯಾಸಕರುಗಳನ್ನು ನೇಮಕ ಮಾಡುವಾಗ ಅತ್ಯುತ್ತಮ ಮತ್ತು ಅರ್ಹತೆಯುಳ್ಳವರನ್ನೇ ನೇಮಕ ಮಾಡಿಕೊಂಡಾಗ ಇಂಜಿನಿಯರಿಂಗ್ ಕಾಲೇಜನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯಲು ಸಾಧ್ಯವಾಗುತ್ತದೆ. ಇಂತಹ ಸಂದರ್ಭದಲ್ಲಿ ಅರ್ಹತೆಯಿರುವವರು ಕಡಿಮೆ ವೇತನಕ್ಕೆ ಬಂದು ಕೆಲಸವನ್ನು ನಿರ್ವಹಿಸುವುದಿಲ್ಲ ಇದನ್ನು ಸಹ ನಾವುಗಳು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ನಮ್ಮ ಸ್ಕೂಲ್ ಆಫ್ ಇಂಜಿನಿಯರಿಂಗ್ ಕಾಲೇಜನ್ನು ಒಂದು ಮಟ್ಟಕ್ಕೆ ಕೊಂಡೊಯ್ಯಲು ಮೊದಲು ನಮ್ಮ Statute ಮಾಡಿಕೊಂಡು ಸರ್ಕಾರದಿಂದ ಅನುಮೋದನೆ ಪಡೆಯಬೇಕು. ನಮ್ಮ ಇಂಜಿನಿಯರಿಂಗ್ ಕಾಲೇಜನಲ್ಲೂ ಉತ್ತಮವಾದ ಪ್ರವೇಶಾತಿ ನಡೆಯುತ್ತಿದೆ ಎಂಬುದನ್ನು ಸರ್ಕಾರದ ಗಮನಕ್ಕೆ ತಂದು ಅನುಮತಿಯನ್ನು ಪಡೆದ ನಂತರ, ಪ್ರೊಫೆಸರ್‌ಗಳಿಗೆ, ಅಧ್ಯಾಪಕರುಗಳಿಗೆ ಎಷ್ಟು ಮೊತ್ತದ ವೇತನವನ್ನು ನಿಗದಿಪಡಿಸಬೇಕು ಎಂಬುದರ ಬಗ್ಗೆ ಕಾರ್ಯಗತಗೊಳಿಸಬೇಕಾಗಿದೆ. ಪ್ರಸ್ತುತ ಸರಿಯಾದ ದಾಖಲೆಗಳಿಲ್ಲದೆಯಿರುವುದರಿಂದ, ಮೊದಲು ನಿಗದಿಮಾಡಿದಂತಹ ವೇತನವನ್ನೇ ನೀಡುತ್ತಿದ್ದೇವೆ. ಕೆಲವರಿಗೆ

ರೂ.35,000ಗಳನ್ನು ನೀಡುತ್ತಿದ್ದರೂ ಸಹ ಪಿಎಚ್.ಡಿ. ಮಾಡಿದಂತಹವರಿಗೆ ಹೆಚ್ಚಿನ ವೇತನವನ್ನು ನಿಗದಿಪಡಿಸಬೇಕಾಗುತ್ತದೆ ಎಂದು ತಿಳಿಸಿದರು.

ಪ್ರೊ. ಶಬ್ಬೀರ್ ಮೊಹಮ್ಮದ್ ಮುಸ್ತಾಫಾ ಅವರು ಮಾತನಾಡಿ, ಇಂಜಿನಿಯರಿಂಗ್ ಕಾಲೇಜಿನಲ್ಲಿ ಹೊಸದಾಗಿ ಉಪನ್ಯಾಸಕರುಗಳನ್ನು ನೇಮಕ ಮಾಡುವಾಗ HoD ಗಳನ್ನು ಯಾಕೆ ಮಾಡಲಾಗುತ್ತಿಲ್ಲ ಎಂದು ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಇಂಜಿನಿಯರಿಂಗ್ ಕಾಲೇಜಿನಲ್ಲಿರುವಂತಹ ಎಲ್ಲಾ ಉಪನ್ಯಾಸಕರುಗಳು/ಅತಿಥಿ ಉಪನ್ಯಾಸಕರು ಎಲ್ಲರೂ ತಾತ್ಕಾಲಿಕವಾಗಿರುವುದರಿಂದ ಅವರಲ್ಲೇ ಯಾರೂ Senior ಆಗಿರುತ್ತಾರೋ ಅವರನ್ನೇ HoD ಗಳನ್ನಾಗಿ ನೇಮಕ ಮಾಡಬೇಕಾಗುತ್ತದೆ. ಆದ್ದರಿಂದ ಇಂಜಿನಿಯರಿಂಗ್ ಕಾಲೇಜಿನ ನಿರ್ದೇಶಕರ ಹುದ್ದೆಗೆ ನೇಮಕಾತಿ ಮಾಡಲು ಅರ್ಹತೆಯುಳ್ಳ ಒಬ್ಬರನ್ನು ಆಹ್ವಾನಿಸಲಾಗಿದೆ. ಒಬ್ಬ ಒಳ್ಳೆಯ ನಿರ್ದೇಶಕರು ಸಿಕ್ಕರೆ ನಮ್ಮ ಇಂಜಿನಿಯರಿಂಗ್ ಕಾಲೇಜನ್ನು ಯಾವ ರೀತಿ ಉನ್ನತೀಕರಿಸಲು ಸಹಕರಿಸುತ್ತಾರೆ ಎಂಬುದನ್ನು ನೋಡಬೇಕಾಗಿದೆ. ಹಾಗೆಯೇ ಇಂಜಿನಿಯರಿಂಗ್ ಕಾಲೇಜಿಗೆ AICTE ಯ ನಿಯಮಾವಳಿಗಳ ಪ್ರಕಾರ ಮಾಡಬೇಕಾಗುತ್ತದೆ ಎಂದು ತಿಳಿಸಿದರು.

ಡಾ. ಮುಜೀದಾ ಬಾನು ಅವರು ಮಾತನಾಡಿ, ಇಂಜಿನಿಯರಿಂಗ್ ಕಾಲೇಜಿನ ಅತಿಥಿ ಉಪನ್ಯಾಸಕರುಗಳಿಗೆ ನವೆಂಬರ್ ಮಾಹೆಯಲ್ಲಿ Interview ಮಾಡುತ್ತೇವೆ ಎಂದು ತಿಳಿಸುತ್ತಿದ್ದೀರಿ, ಈಗಾಗಲೇ ರೂ.55,000/-ಗಳನ್ನು ಪಡೆಯುತ್ತಿರುವ ಅತಿಥಿ ಉಪನ್ಯಾಸಕರುಗಳು ಮತ್ತೊಮ್ಮೆ ನೇಮಕವಾದಲ್ಲಿ ಅವರಿಗೂ ರೂ. 35,000/-ಗಳನ್ನು ನೀಡಲಾಗುವುದೇ ಎಂದು ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಇಂಜಿನಿಯರಿಂಗ್ ಕಾಲೇಜಿನ ಅತಿಥಿ ಉಪನ್ಯಾಸಕರುಗಳನ್ನು ನೇಮಕ ಮಾಡುವ ಸಂದರ್ಭದಲ್ಲಿ ಈಗಾಗಲೇ ಅತಿಥಿ ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ರೂ. 55,000/-ಗಳ ವೇತನವನ್ನು ಪಡೆಯುತ್ತಿರುವವರಿಗೆ ಯಾವುದೇ ವೇತನವನ್ನು ಕಡಿಮೆ ಮಾಡಲಾಗುವುದಿಲ್ಲ. ಆದರೆ ಪಿಎಚ್.ಡಿ. ಪಡೆದಂತಹ ಅತಿಥಿ ಉಪನ್ಯಾಸಕರುಗಳಿಗೆ ವೇತನವನ್ನು ಹೆಚ್ಚಿಸುವಲ್ಲಿ ಕ್ರಮಕೈಗೊಳ್ಳಬೇಕಾಗಿದೆ ಎಂದು ತಿಳಿಸುತ್ತಾ, ಮುಂದಿನ ಒಂದು ವರ್ಷದವರೆಗೆ ಮರು ನೇಮಕ ಮಾಡಲಾಗುವುದು ಎಂದು ತಿಳಿಸುತ್ತಾ, ಸರ್ಕಾರ ಯಾವ ರೀತಿಯ ಆದೇಶವನ್ನು ನೀಡುತ್ತದೋ ಅದರ ಪ್ರಕಾರ Rationalize ಮಾಡಲಾಗುವುದು ಎಂದು ತಿಳಿಸಿದರು.

ಶ್ರೀ ನಾಗರಾಜು ಸಿ. ಅವರು ಮಾತನಾಡಿ, ದಿನಾಂಕ: 29.12.2023ರಲ್ಲಿ ಫೈನಾನ್ಸ್ ಸೆಕ್ರೆಟರಿ ಡಾ. ಪಿ.ಪಿ. ಜಾಫರ್ ಅವರು ಒಂದು ಆದೇಶವನ್ನು ಹೊರಡಿಸಿದ್ದಾರೆ. ಅದರಲ್ಲಿ ನಮ್ಮ ವಿಶ್ವವಿದ್ಯಾನಿಲಯದಲ್ಲಿ ಬೋಧಕೇತರ ಸಿಬ್ಬಂದಿ 1183 ಮಂದಿ ಇದ್ದಾರೋ ಅವರ ನೇಮಕಾತಿಯನ್ನು ಕೂಡಲೇ ರದ್ದುಪಡಿಸಿ ಎಂದು ತಿಳಿಸಿರುತ್ತಾರೆ. ಅವರನ್ನು ಆರ್ಥಿಕ ಇಲಾಖೆಯ ಅನುಮತಿ ಇಲ್ಲದೆ ನೇಮಕಾತಿ ಹಾಗೂ ನೇಮಕಾತಿ ಮಾಡುವ ಸಂದರ್ಭದಲ್ಲಿ ರೋಸ್ಟರ್ ಪದ್ಧತಿಯನ್ನು ಅನುಸರಿಸಿರುವುದಿಲ್ಲ ಎಂದು ಸಭೆಯ ಗಮನಕ್ಕೆ ತಂದರು.

ಮಾನ್ಯ ಕುಲಪತಿಗಳು ಮಾತನಾಡಿ, ಬೋಧಕೇತರ ಸಿಬ್ಬಂದಿಗಳಲ್ಲಿ 175 ಮಂದಿ ಕೋರ್ಟ್‌ಗೆ ಹೋಗಿದ್ದಾರೆ. ಯಾವುದೇ ಆದೇಶವನ್ನು ಮಾಡುವುದು ಸುಲಭ, ಆದರೆ ಅದನ್ನು ಇಂತಹ ಸಂದರ್ಭಗಳಲ್ಲಿ ಜಾರಿಗೊಳಿಸುವುದು ಕಷ್ಟವಾಗಿರುತ್ತದೆ. ಜೊತೆಗೆ ಅವರು ನೀಡಿರುವಂತಹದ್ದು, ಟಿಪ್ಪಣಿ ಆದೇಶವಲ್ಲ. ಸರ್ಕಾರದ ನಡಾವಳಿ, ಆದೇಶ, ಟಿಪ್ಪಣಿ ಇರುತ್ತದೆ. ಜೊತೆಗೆ ನಮ್ಮ ವಿಶ್ವವಿದ್ಯಾನಿಲಯದ ಕಾಯ್ದೆ ಹಾಗೂ ನಿಯಮಾವಳಿಗಳು ಇರುತ್ತವೆ. ಜೊತೆಗೆ ವಿಶ್ವವಿದ್ಯಾನಿಲಯದಲ್ಲಿ ಕೆಲವೊಂದು ಅಧಿಕಾರಗಳು ನಮಗೂ ಇರುತ್ತದೆ. ಜೊತೆಗೆ ಸರ್ಕಾರದಿಂದ ಸದ್ಯಕ್ಕೆ ತಡೆಹಿಡಿಯುವಂತೆ ಮೌಖಿಕ ಆದೇಶ ಬಂದಿದ್ದರಿಂದ ತಡೆಹಿಡಿಯಲಾಗಿದೆ ಎಂದು ತಿಳಿಸಿದರು.

ಶ್ರೀ ನಾಗರಾಜು ಸಿ ಅವರು ಮಾತನಾಡಿ, ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ತಮ್ಮಲ್ಲಿ ಹಾಗೂ ಕಾರ್ಯದರ್ಶಿಗಳಲ್ಲಿ, 2013 ರಿಂದ 2024ರವರೆಗೆ ತಾತ್ಕಾಲಿಕ ಬೋಧಕೇತರ ಸಿಬ್ಬಂದಿಗಳನ್ನು ನೇಮಕ ಮಾಡಿಕೊಂಡಿದ್ದೀರೋ ಆ ಎಲ್ಲಾ ಮಾಹಿತಿಗಳನ್ನು ನನಗೆ ನೀಡಬೇಕೆಂದು ಸಭೆಯಲ್ಲಿ ಕೋರಿದರು. ಜೊತೆಗೆ

ಸರ್ಕಾರದಿಂದ ಬಂದಿರುವ ಆದೇಶದ ಪ್ರತಿಯನ್ನು ನೀಡಬೇಕೆಂದು ಕೇಳಿದರು. ಇದೇ ತಿಂಗಳು ನಡೆಯುವ ಸರ್ಕಾರದ ಸಭೆಯಲ್ಲಿ ಈ ಎಲ್ಲಾ ದಾಖಲಾತಿಗಳನ್ನು ಎಂಎಲ್‌ಎ ಅವರು ಎಸ್‌ಸಿ/ಎಸ್‌ಟಿ ಸದನ ಸಮಿತಿಯ ಸದಸ್ಯರಾಗಿರುವುದರಿಂದ ಅವರು ಸಭೆ ಕರೆದಿರುವುದರಿಂದ ಅವರಿಗೆ ನೀಡಬೇಕಾಗಿದೆ. ಜೊತೆಗೆ ಈ ವಿಷಯವು ಅಲ್ಲಿ ಚರ್ಚೆಯಾಗಲಿದೆ ಎಂದು ತಿಳಿಸಿದರು. ಜೊತೆಗೆ ಒಬ್ಬರಿಗೆ ಅನ್ಯಾಯ ಇನ್ನೊಬ್ಬರಿಗೆ ಅನಾನೂಕೂಲ ಮಾಡಲಾಗಿರುವುದನ್ನು ಸರಿಪಡಿಸುವುದಕ್ಕೋಸ್ಕರ ಹಾಗೂ ಸದನದಲ್ಲಿ ಚರ್ಚೆಯಾಗಬೇಕಾಗಿರುವುದರಿಂದ ತಾತ್ಕಾಲಿಕ ಬೋಧಕೇತರ ಸಿಬ್ಬಂದಿಗಳ ಪೂರ್ಣ ವಿವರ, ಹೆಸರು, ಹುದ್ದೆ, ಜಾತಿ ಹಾಗೂ ವೇತನವನ್ನೊಳಗೊಂಡ ಸಂಪೂರ್ಣ ಮಾಹಿತಿಯನ್ನು ನೀಡಬೇಕೆಂದು ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ, ತಾತ್ಕಾಲಿಕ ಬೋಧಕೇತರ ಸಿಬ್ಬಂದಿಗಳಿಗೆ ಸಂಬಂಧಿಸಿದ ವಿಷಯವು ಉನ್ನತ ಶಿಕ್ಷಣ ಸಚಿವರ ಗಮನದಲ್ಲಿಯೂ ಇದೆ, ಮಾಹಿತಿಯನ್ನು ಸಹ ಅವರಿಗೆ ನೀಡಲಾಗಿದೆ ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ ಶ್ರೀ ನಾಗರಾಜು ಸಿ. ಅವರು ಕೋರಿರುವ ಮಾಹಿತಿಯಲ್ಲಿ ಪ್ರಸ್ತುತ ಅವರು ಹೆಸರು ಮತ್ತು ಪಡೆಯುತ್ತಿರುವ ವೇತನದ ಮಾಹಿತಿಯನ್ನು ನೀಡಬಹುದು, ಅವರ ಜಾತಿಯನ್ನೊಳಗೊಂಡ ಮಾಹಿತಿಯನ್ನು ನೀಡಬೇಕಾದರೆ ಸಮಯ ಬೇಕಾಗುತ್ತದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ತಾತ್ಕಾಲಿಕ ಬೋಧಕೇತರ ಸಿಬ್ಬಂದಿಗಳ ಸಂಪೂರ್ಣ ಮಾಹಿತಿಯನ್ನು ನೀಡಬೇಕಾದರೆ ಸಮಯ ಬೇಕಾಗುತ್ತದೆ. ಜೊತೆಗೆ ಅತಿಥಿ ಉಪನ್ಯಾಸಕರುಗಳನ್ನು ನೇಮಕ ಮಾಡುವ ಸಂದರ್ಭದಲ್ಲಿ ಸುಮಾರು 23 ಮಂದಿ unqualified ಆಗಿದ್ದಾರೆ ಎಂದುಕೊಂಡಿದ್ದೆವು. ಆದರೆ ಸಂದರ್ಶನದ ವೇಳೆಯಲ್ಲಿ 48 ಮಂದಿ unqualified ಆಗಿದ್ದಾರೆ ಎಂದು ಸಭೆಯ ಗಮನಕ್ಕೆ ತಂದರು. ತಾತ್ಕಾಲಿಕ ಬೋಧಕ ಬೋಧಕೇತರ ಸಿಬ್ಬಂದಿಗಳ ನೇಮಕಾತಿಗಳಲ್ಲಿ ಸಾಮಾಜಿಕ ನ್ಯಾಯವನ್ನು ಒದಗಿಸಬೇಕು ಎಂಬುದನ್ನು ಕಮಿಟಿ ಬಂದಾಗ ತಿಳಿಸಿದ್ದಾರೆ. ಜೊತೆಗೆ ಬೋಧಕ ಸಿಬ್ಬಂದಿಗಳಲ್ಲಿ ಅರ್ಹತೆಯ ಆಧಾರದ ಮೇಲೆ ನೀಡಲಾಗಿದೆ. ಆದರೆ ಬೋಧಕೇತರ ಸಿಬ್ಬಂದಿಗಳ ನೇಮಕಾತಿಯಲ್ಲಿ ಅರ್ಹತೆಗನುಗುಣವಾಗಿ ನೇಮಕವಾಗಿಲ್ಲದಿರುವುದು ಗಮನಕ್ಕೆ ಬಂದಿದೆ ಎಂದು ತಿಳಿಸಿದರು.

ಡಾ. ಹೆಚ್.ಎಸ್. ನಟರಾಜ್ ಅವರು ಮಾತನಾಡಿ, ಎಸ್‌ಸಿಎಸ್‌ಟಿ ಸದನದ ಸಮಿತಿ ಅಧ್ಯಕ್ಷರಾದ ಶ್ರೀ ನರೇಂದ್ರ ಸ್ವಾಮಿಯವರು ಸದರಿ ವಿಷಯದ ಬಗ್ಗೆ ನನ್ನಲ್ಲಿ ಪ್ರಸ್ತಾಪಿಸಿದ್ದರು. ಅವರು ಸರ್ಕಾರ Outsourceನಲ್ಲೂ Reservation ಯೋಜನೆ ತರಬೇಕೆಂದು ಯೋಚನೆ ಮಾಡುತ್ತಿದೆ, ಆದ್ದರಿಂದ ನಮ್ಮ ವಿಶ್ವವಿದ್ಯಾನಿಲಯದಲ್ಲಿರುವ ತಾತ್ಕಾಲಿಕ ಬೋಧಕೇತರ ಸಿಬ್ಬಂದಿಗಳ ಪಟ್ಟಿಯನ್ನು ನೀಡುವಂತೆ ತಿಳಿಸಿದ್ದಾರೆ ಎಂದು ಸಭೆಯ ಗಮನಕ್ಕೆ ತಂದರು.

ಶ್ರೀ ಮಹದೇಶು ಅವರು ಮಾತನಾಡಿ, ತಾತ್ಕಾಲಿಕ ಬೋಧಕೇತರ ಸಿಬ್ಬಂದಿಗಳು ವಿಶ್ವವಿದ್ಯಾನಿಲಯದಲ್ಲಿ ಸುಮಾರು 20, 15 ಹಾಗೂ 10 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ಅವರಲ್ಲಿ ಕೆಲವರು ಯಾವುದೇ ಹೆಚ್ಚಿನ ಸಂಬಳವಿಲ್ಲದೆ ಹಾಗೆಯೇ ನಿವೃತ್ತಿಯನ್ನು ಹೊಂದುತ್ತಿರುತ್ತಾರೆ. ನಮ್ಮ ವಿಶ್ವವಿದ್ಯಾನಿಲಯದ ಗೈಡ್‌ಲೈನ್ಸ್ ಆಧಾರದ ಮೇಲೆ ಅವರ ಜೀವನ ಸುಧಾರಣೆಗಾಗಿ ಹಾಗೂ ಈಗಿನ ಜೀವನಮಟ್ಟಕ್ಕನುಗುಣವಾಗಿ ಅವರುಗಳಿಗೆ ವೇತನವನ್ನು ಸ್ವಲ್ಪಮಟ್ಟಿಗಾದರೂ ಹೆಚ್ಚಿಸಲು ಕ್ರಮಕೈಗೊಳ್ಳ ಬಹುದಲ್ಲವೇ, ಜೊತೆಗೆ ಅವರಿಗೆ ಯಾವುದೇ ಭದ್ರತೆಯೂ ಇಲ್ಲದಿರುವುದರಿಂದ ಈ ಬಗ್ಗೆ ಗಮನಹರಿಸಬೇಕೆಂದರು.

ಮಾನ್ಯ ಕುಲಪತಿಗಳು ಮಾತನಾಡಿ, ತಾತ್ಕಾಲಿಕ ಬೋಧಕೇತರ ಸಂಖ್ಯೆ ಹೆಚ್ಚಾಗಿರುವುದರಿಂದ ಹಾಗೂ 10 ವರ್ಷಗಳ ಸೇವೆಯನ್ನು ಸಲ್ಲಿಸಿರುವ ಸಿಬ್ಬಂದಿಗಳು ಸಹ 180 ರಿಂದ 190ರಷ್ಟು, ಜೊತೆಗೆ 50-60 ಮಂದಿ 15/20 ವರ್ಷಗಳ ಸೇವೆಯನ್ನು ಪೂರೈಸಿರುವವರು ಇದ್ದಾರೆ ಎಂದು ತಿಳಿಸಿದರು.

ಡಾ. ಬಸವರಾಜು ಸಿ. ಅವರು ಮಾತನಾಡಿ, ಶ್ರೀ ಮಹದೇಶು ಅವರು ಮಾತನಾಡಿದ ವಿಷಯಕ್ಕೆ ಪೂರಕವಾಗಿ ಮಾತನಾಡುತ್ತಾ, ಹಿಂದೆಯಿಂದ ತಾತ್ಕಾಲಿಕ ಬೋಧಕೇತರ ಸಿಬ್ಬಂದಿಗಳಿಗೆ 3/5/7/9/10/15/20 ವರ್ಷಗಳಿಗೆ ಅನುಗುಣವಾಗಿ ವೇತನವನ್ನು ಹೆಚ್ಚಿಸುವ ಕ್ರಮವನ್ನು ಅನುಸರಿಸಲಾಗುತ್ತಿತ್ತು. ಆದರೆ ಪ್ರಸ್ತುತ ಈ ಸ್ಲಾಬ್ ಅನ್ನು ರದ್ದುಗೊಳಿಸಲಾಗಿದೆ ಎಂದರು.

ಕುಲಸಚಿವರು ಮಾತನಾಡಿ, ತಾತ್ಕಾಲಿಕ ಬೋಧಕೇತರ ಸಿಬ್ಬಂದಿಗಳಿಗೆ ವೇತನವನ್ನು ಹೆಚ್ಚಿಸಲು ಸರ್ಕಾರವು ನೀಡಿರುವ ಟಿಪ್ಪಣಿಯಲ್ಲಿ ಅನುಮತಿಯನ್ನು ನೀಡಿರುವುದಿಲ್ಲವೆಂದು ತಿಳಿಸಿದರು.

ಸಿಂಡಿಕೇಟ್ ಸದಸ್ಯರುಗಳಾದ ಡಾ. ಬಸವರಾಜು ಸಿ., ಶ್ರೀ ಮಹದೇಶು ಅವರುಗಳು ಮಾತನಾಡಿ, 15 /20 ವರ್ಷಗಳ ಸೇವೆಯನ್ನು ಸಲ್ಲಿಸುತ್ತಿರುವವರಿಗಾದರೂ ವೇತನವನ್ನು ಹೆಚ್ಚಿಸಲು ಕ್ರಮಕೈಗೊಳ್ಳಬಹುದಲ್ಲವೇ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ತಾತ್ಕಾಲಿಕ ಬೋಧಕೇತರ ಸಿಬ್ಬಂದಿಗೆ ಪ್ರಸ್ತುತ ವೇತನವನ್ನು ಹೆಚ್ಚಿಸಲು ಸಾಧ್ಯವಾಗುವುದಿಲ್ಲ, ಮುಂದೆ ನೋಡೋಣವೆಂದರು. ಜೊತೆಗೆ ಸರ್ಕಾರದಿಂದ ಯಾವ ಆದೇಶ ಬರುತ್ತದೋ ಅಂತೆಯೇ ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಶ್ರೀ ನಾಗರಾಜು ಸಿ. ಅವರು ಮಾತನಾಡಿ, ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳು ನಿವೃತ್ತಿ ಹೊಂದಿರುವ ಕುಲಪತಿಗಳ ಮನೆಯಲ್ಲಿ ತೋಟದಲ್ಲಿ ಕೆಲವು ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಜೊತೆಗೆ ಸೆಕ್ಯೂರಿಟಿಗಳನ್ನು ಕೆಲಸಕ್ಕೆ ಬಳಸಿಕೊಳ್ಳುತ್ತಿದ್ದಾರೆ. ಅವರುಗಳ ಹೆಸರುಗಳನ್ನು ಹಾಗೂ ವಿಡೀಯೊಗಳನ್ನು ದಾಖಲೆ ಸಹಿತ ನೀಡಲಾಗುವುದು ಎಂದು ತಿಳಿಸಿದರು. ಯಾವುದೇ ಸಿಬ್ಬಂದಿಗಳು ನಮ್ಮ ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸಬೇಕೆ ಹೊರತು, ನಿವೃತ್ತಿಯಾಗಿರುವಂತಹ ಕುಲಪತಿಗಳ ನಿವಾಸದಲ್ಲಿ, ತೋಟದಲ್ಲಿ ಕೆಲಸ ಮಾಡಲು ಅವಕಾಶವಿರುವುದಿಲ್ಲ. ಆದ್ದರಿಂದ ಸದರಿ ವಿಷಯಕ್ಕೆ ತಮ್ಮ ಗಮನ ಸೆಳೆಯುತ್ತಿರುವುದಾಗಿ ತಿಳಿಸುತ್ತಾ, ಕ್ರಮಕೈಗೊಳ್ಳಬೇಕಾಗಿ ತಿಳಿಸಿದರು.

ಡಾ. ಹೆಚ್.ಎಸ್. ನಟರಾಜು ಅವರು ಮಾತನಾಡಿ, ದಿನಾಂಕ : 14.08.2024 ರಂದು ನಡೆದ ಸಿಂಡಿಕೇಟ್ ಸಭೆಯ ಇತರೆ ವಿಷಯದ ಸಂಖ್ಯೆ : 6ರಲ್ಲಿರುವಂತೆ ಸ್ಕೂಲ್ ಆಫ್ ಲಾ ವಿಭಾಗದ ಅತಿಥಿ ಉಪನ್ಯಾಸಕರುಗಳು ವಿದ್ಯಾರ್ಥಿಗಳಿಗೆ ನಿನ್ನನ್ನು ಪರೀಕ್ಷೆಯಲ್ಲಿ ಅನ್ನುತ್ತೀರ್ಣಗೊಳಿಸಲಾಗಿದೆ ಎಂದು ನೇರವಾಗಿ ಹೇಳಿದ್ದುದ್ದಲ್ಲದೆ, ಅವ್ಯಾಚ್ಯ ಶಬ್ದಗಳಿಂದ ನಿಂದಿಸಿದ್ದುದರ ವಿಷಯದ ಬಗ್ಗೆ ಪ್ರಸ್ತಾಪಿಸಲಾಗಿತ್ತು, ಆದರೆ ಇಲ್ಲಿಯವರೆಗೂ ಯಾವುದೇ ಮಾಹಿತಿ ಬಂದಿಲ್ಲ. ಜೊತೆಗೆ ತಾವೇ ಹೇಳಿದಂತೆ ಯುಜಿ ಹಾಗೂ ಪಿಜಿನಲ್ಲಿ ಅನ್ನುತ್ತೀರ್ಣರಾಗುತ್ತಾರೆ ಎಂಬುದೇ ಒಂದು ದೊಡ್ಡ ವಿಷಯವಾಗಿದೆ. ಉದ್ದೇಶಪೂರ್ವಕವಾಗಿ ಮಾಡಿರುವುದರಿಂದ ಸದರಿ ವಿಷಯದ ಬಗ್ಗೆ ಯಾವ ಕ್ರಮಕೈಗೊಳ್ಳಲಾಗಿದೆ ಎಂದು ಸಭೆಯಲ್ಲಿ ಕೇಳಿದರು.

ಕುಲಸಚಿವ (ಪರೀಕ್ಷಾಂಗ) ರವರು ಮಾತನಾಡಿ, ಸ್ಕೂಲ್ ಆಫ್ ಲಾ ನ ವಿದ್ಯಾರ್ಥಿಗಳ ಪರೀಕ್ಷಾ ಉತ್ತರ ಪತ್ರಿಕೆಗಳ ಮೌಲ್ಯಮಾಪನದ ದೋಷ (Valuation Lapse)ವನ್ನು ಸರಿಪಡಿಸಲು ಬೇರೆಯೆಡೆ ವ್ಯಾಲ್ಯೂವೇಷನ್ ಮಾಡಿಸಲು ಕ್ರಮಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಡಾ. ಶಿಲ್ಪ ಜೆ. ಅವರು ಮಾತನಾಡಿ ಅತಿಥಿ ಉಪನ್ಯಾಸಕರುಗಳನ್ನು ನೇಮಕ ಮಾಡುವಾಗ ಯುಜಿಯಲ್ಲಿ ಆದಂತಹ ವ್ಯತ್ಯಾಸಗಳು ಪಿಜಿನಲ್ಲಿ ಆಗದಂತೆ ಗಮನಹರಿಸಬೇಕೆಂದರು.

ಡಾ. ಬಸವರಾಜು ಸಿ. ಅವರು ಮಾತನಾಡಿ, ದಿನಾಂಕ : 14.08.2024ರಂದು ನಡೆದ ಸಿಂಡಿಕೇಟ್ ಸಭೆಯ ಇತರೆ ವಿಷಯ ಸಂಖ್ಯೆ: 8ಕ್ಕೆ ಸಂಬಂಧಿಸಿದಂತೆ, ಶ್ರೀ ಕನಕದಾಸರ ಅಧ್ಯಯನ ಮತ್ತು ಸಂಶೋಧನಾ ಪೀಠವನ್ನು ಸ್ಥಾಪಿಸುವುದರ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗುವುದು ಎಂದು ತಿಳಿಸಿದ್ದೀರಿ. ಅದರ ಬಗ್ಗೆ ಯಾವ ಕ್ರಮವನ್ನು ಕೈಗೊಳ್ಳಲಾಗಿದೆ ಹಾಗೂ ಒಬ್ಬ ದಾನಿಗಳು ರೂ.1.00 ಕೋಟಿಯನ್ನು ಶ್ರೀ ಕನಕದಾಸ

ಪೀಠಕ್ಕೆ ನೀಡುವುದಕ್ಕೆ ಒಪ್ಪಿಕೊಂಡಿರುವುದರಿಂದ, ತಾವು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದರೆ ಅತಿಶೀಘ್ರವಾಗಿ ಪೀಠವನ್ನು ಸ್ಥಾಪಿಸಲು ಅನುಕೂಲವಾಗುವುದೆಂದರು.

ಕುಲಸಚಿವರು ಮಾತನಾಡಿ, ಶ್ರೀ ಕನಕದಾಸರ ಅಧ್ಯಯನ ಮತ್ತು ಸಂಶೋಧನಾ ಪೀಠವನ್ನು ಸ್ಥಾಪಿಸಲು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಿಗೆ ಪತ್ರವನ್ನು ಬರೆಯಲಾಗಿದೆ ಎಂದು ತಿಳಿಸಿದರು.

ಡಾ. ಬಸವರಾಜು ಸಿ. ಅವರು ಮಾತನಾಡಿ, ಶ್ರೀ ಕನಕದಾಸರ ಪೀಠವು ಮಾನಸಗಂಗೋತ್ರಿಯಲ್ಲಿ ಸ್ಥಾಪಿಸಬೇಕು ಎಂದು ಮಾತ್ರ ಹೇಳಿರುವುದಾಗಿ ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಯಾವುದೇ ಪೀಠವನ್ನು ಒಂದು ಅಧ್ಯಯನ ವಿಭಾಗಕ್ಕೆ ಒಳಗೊಂಡಂತೆ ಸ್ಥಾಪಿಸಲಾಗುವುದು. ಕಾರಣ ಪೀಠಕ್ಕೂ ಹಾಗೂ ಅಧ್ಯಯನ ವಿಭಾಗಕ್ಕೂ ಸಂಬಂಧವಿರುತ್ತದೆ ಎಂದು ಉದಾಹರಣೆಗೆ: ಸಾಹಿತ್ಯ ಎಂದರೆ ಕನ್ನಡ ವಿಭಾಗಕ್ಕೆ ಫಿಜಿಕ್ಸ್ ಎಂದರೆ ಫಿಜಿಕ್ಸ್ ವಿಭಾಗಕ್ಕೆ, ಅದೇ ರೀತಿ ಇದನ್ನು ಸಹ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಗೆ ನೀಡಲಾಗಿದೆ ಎಂದು ತಿಳಿಸುತ್ತಾ, ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಕಾರ್ಯೋನ್ಮುಖ(Followup) ರಾಗುವಂತೆ ಕುಲಸಚಿವರಿಗೆ ತಿಳಿಸಿದರು.

ಶ್ರೀ ನಾಗರಾಜು ಸಿ. ಅವರು ಮಾತನಾಡಿ, ಶ್ರೀ ವಾಲ್ಮೀಕಿ ಪೀಠವನ್ನು ಸ್ಥಾಪಿಸಲು ಪತ್ರವನ್ನು ನೀಡಿ ಏಳು ತಿಂಗಳುಗಳಾಗಿವೆ. ಆದರೂ ಯಾವುದೇ ಕ್ರಮವನ್ನು ಕೈಗೊಂಡಿಲ್ಲವೆಂದು ತಿಳಿಸಿದರು. ಹಾಗೂ ಪ್ರಾರಂಭದಿಂದ ಇಲ್ಲಿಯವರೆಗೆ ಮಾಡಿರುವಂತಹ ಪತ್ರಗಳನ್ನು ನೀಡುವಂತೆ ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಸರ್ಕಾರದ ಅನುಮತಿ ದೊರೆತರೆ ಶ್ರೀ ವಾಲ್ಮೀಕಿ ಪೀಠವನ್ನು ಸ್ಥಾಪಿಸಲು ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಶ್ರೀ ವಾಲ್ಮೀಕಿ ಪೀಠವನ್ನು ಸ್ಥಾಪಿಸುವ ಸಂಬಂಧ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಈಗಾಗಲೇ ಕಳುಹಿಸಿದ್ದು, ಪ್ರಸ್ತಾವನೆಯು ವಾಪಸ್ಸು ಬಂದಿರುವುದನ್ನು ಸಭೆಯ ಗಮನಕ್ಕೆ ತರುತ್ತಾ, ಶ್ರೀ ವಾಲ್ಮೀಕಿ ಪೀಠಕ್ಕೆ ಸಂಬಂಧಿಸಿದ ಪತ್ರವನ್ನು ತಮಗೆ ಈಗಾಗಲೇ ನೀಡಲಾಗಿರುವುದನ್ನು ತಿಳಿಸುತ್ತಾ, ನೀವು ಪತ್ರವನ್ನು ನೀಡಿದ ನಂತರ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿ ವಾಪಸ್ಸು ಬಂದಿರುವ ಪ್ರತಿಯನ್ನು ಸಹ ನೀಡುವುದಾಗಿ ತಿಳಿಸಿದರು.

ಶ್ರೀ ಮಹದೇಶು ಅವರು ಮಾತನಾಡಿ, ದಿನಾಂಕ : 14.08.2024ರಂದು ನಡೆದ ಸಿಂಡಿಕೇಟ್ ಸಭೆಯ ಇತರೆ ವಿಷಯ ಸಂಖ್ಯೆ: 4ಕ್ಕೆ ಸಂಬಂಧಿಸಿದಂತೆ, ಪತ್ರಿಕೋದ್ಯಮ ಮತ್ತು ಸಂವಹನ ಅಧ್ಯಯನ ವಿಭಾಗದಲ್ಲಿರುವಂತಹ ವಿದ್ಯಾರ್ಥಿಗಳಿಗೆ ಅನ್ಯಾಯವಾಗಿರುವುದರ ಬಗೆಗಿನ ವಿಷಯವನ್ನು ಸಭೆಯಲ್ಲಿ ಪ್ರಸ್ತಾಪಿಸಿದರು.

ನಂತರ ಕುಲಸಚಿವರು ಸಭಾ ಕಾರ್ಯಸೂಚಿಯನ್ನು ಸಭೆಯಲ್ಲಿ ಮಂಡಿಸಿದರು.

| | |
|---|---|
| ಸಾಮಾನ್ಯ ಸಭೆ 2024/6.1 | ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಸ್ಥಾಪಿಸಲಾಗಿರುವ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಅಧ್ಯಯನ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಬಗ್ಗೆ. |
| ತೀರ್ಮಾನ | **ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಸ್ಥಾಪಿಸಲಾಗಿರುವ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಅಧ್ಯಯನ ಪೀಠಕ್ಕೆ ಡಾ. ಎ.ಆರ್.ಶ್ರೀನಾಥ್, ನಿವೃತ್ತ ನಿರ್ದೇಶಕರು, ಭಾರತದ ರಾಷ್ಟ್ರೀಯ ಸಹಕಾರಿ ಒಕ್ಕೂಟ, ನವದೆಹಲಿ, ವಿವೇಕಾನಂದನಗರ, ಮೈಸೂರು ಇವರನ್ನು ಒಂದು ವರ್ಷದ ಅವಧಿಗೆ ಮಾಹೆಯಾನ ರೂ.10,000/-ಗಳ ಗೌರವ ಸಂಭಾವನೆಯೊಂದಿಗೆ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.** |

| | |
|---|---|
| ಸಾಮಾನ್ಯ ಸಭೆ 2024/6.2 | ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಸ್ಥಾಪಿಸಲಾಗಿರುವ ಪ್ಲಾನಿಂಗ್ ಕಮಿಷನ್ ಅಧ್ಯಯನ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಬಗ್ಗೆ. |
| ತೀರ್ಮಾನ | ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಸ್ಥಾಪಿಸಲಾಗಿರುವ ಪ್ಲಾನಿಂಗ್ ಕಮಿಷನ್ ಅಧ್ಯಯನ ಪೀಠಕ್ಕೆ ಪ್ರೊ. ರವಿ ಭಂಡಾರಿ, ವಿಶ್ವೇಶ್ವರಪುರಂ, ಬೆಂಗಳೂರು ಇವರನ್ನು ಒಂದು ವರ್ಷದ ಅವಧಿಗೆ ಮಾಹೆಯಾನ ರೂ.10,000/-ಗಳ ಗೌರವ ಸಂಭಾವನೆಯೊಂದಿಗೆ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| ಸಾಮಾನ್ಯ ಸಭೆ 2024/6.3 | "ಸಾಮಾಜಿಕ ಹೊರಗುಳಯುವಿಕೆ ಮತ್ತು ಒಳಗೊಳ್ಳುವಿಕೆ ನೀತಿ ಅಧ್ಯಯನ ಕೇಂದ್ರ"ವನ್ನು "ಸಾಮಾಜಿಕ ಒಳಗೊಳ್ಳುವಿಕೆ ಅಧ್ಯಯನ ಕೇಂದ್ರ" ಎಂದು ಮರು ನಾಮಾಂಕಿತಗೊಳಿಸುವ ಬಗೆಗೆ. |
| ತೀರ್ಮಾನ | ದಿನಾಂಕ: 25-06-2024ರಂದು ಜರುಗಿದ ಯು.ಜಿ.ಸಿ.ಯ 581ನೇ ಸಭೆಯಲ್ಲಿ ಯುಜಿಸಿ ಯೋಜನೆಯ ಕೇಂದ್ರಗಳನ್ನು ಮರು ನಾಮಾಂಕಿತಗೊಳಿಸಲು ನಿರ್ಣಯಿಸಿರುವ ಹಿನ್ನೆಲೆಯಲ್ಲಿ, ಮೈಸೂರು ವಿಶ್ವವಿದ್ಯಾನಿಲಯದ ಸಾಮಾಜಿಕ ಹೊರಗುಳಯುವಿಕೆ ಮತ್ತು ಒಳಗೊಳ್ಳುವಿಕೆ ನೀತಿ ಅಧ್ಯಯನ ಕೇಂದ್ರದ (Center for the Study of Social Exclusion and Inclusive Policy-CSSEIP) ನಾಮಾಂಕಿತವನ್ನು "ಸಾಮಾಜಿಕ ಒಳಗೊಳ್ಳುವಿಕೆ ಅಧ್ಯಯನ ಕೇಂದ್ರ (Centre for the Study of Social Inclusion-(CSSI)" ಎಂದು ಬದಲಾವಣೆ ಮಾಡಿ ಅಧಿಸೂಚನೆ ಹೊರಡಿಸಲು ಸಿಂಡಿಕೇಟ್ ಸಭೆಯು ನಿರ್ಣಯಿಸಿತು. |
| ಸಾಮಾನ್ಯ ಸಭೆ 2024/6.4 | ವಿಶ್ವವಿದ್ಯಾನಿಲಯದ ಮಾಳವೀಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರ ಹಾಗೂ ಕೇಂದ್ರದಲ್ಲಿನ ಬೋಧಕ ಸಿಬ್ಬಂದಿ ಸೇವೆಯನ್ನು ಮುಂದುವರೆಸುವ ಬಗ್ಗೆ. |
| ತೀರ್ಮಾನ | ಯುಜಿಸಿ ಅನುದಾನದ ಅಡಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಮಾಳವೀಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರದಲ್ಲಿ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರಾಗಿ (Tenure Basis) ಕಾರ್ಯನಿರ್ವಹಿಸುತ್ತಿರುವ ಡಾ. ಎಲ್.ನಂಜುಂಡಸ್ವಾಮಿ ಇವರನ್ನು ದಿನಾಂಕ: 01-04-2024 ರಿಂದ 31-03-2025 ರವರೆಗೆ ಮುಂದುವರೆಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| ಸಾಮಾನ್ಯ ಸಭೆ 2024/6.5 | Specialized Programme ಅಡಿಯಲ್ಲಿನ ಅಧ್ಯಯನ ಮಂಡಳಿಗಳ ರಚನೆ/ಪುನರ್‌ರಚನೆ ಬಗ್ಗೆ-ಅನುಸಮರ್ಥನೆಗಾಗಿ. |
| ತೀರ್ಮಾನ | Specialized Programme ಅಡಿಯಲ್ಲಿ (1) Vogue Institute of Design, C/o ಎ.ಡಿ. ಬಿಳಿಗೌಡ ಪ್ರಥಮ ದರ್ಜೆ ಕಾಲೇಜು, ಕೊಪ್ಪ, ಮದ್ದೂರು ತಾ., ಮಂಡ್ಯ ಜಿಲ್ಲೆ ಸಂಸ್ಥೆಗೆ M.Des (Fashion Design Management) ಮತ್ತು M.Des. (Interior Design Management) ಕೋರ್ಸ್‌ಗಳಿಗೆ, (2) ಇಂಟರ್‌ನ್ಯಾಷನ್ ಅಕಾಡೆಮಿ ಆಫ್ ರಿಪ್ರೊಡಕ್ಟಿವ್ ಸೈನ್ಸಸ್, ಸಿದ್ದಾರ್ಥನಗರ, ಮೈಸೂರು ಸಂಸ್ಥೆಯ M.Sc. (Clinical Embryology & Assisted Reproductive Techniques) ಕೋರ್ಸ್‌ಗೆ ಹಾಗೂ (3) Center Head, Universal Institute for Private Training, Salmia, Kuwait ಸಂಸ್ಥೆಯ B.A. |

| | |
|---|---|
| | (English Literature and Digital Media Communication), BCA (Artificial Intelligence & Data Science) (AI & DS) and B.A. (Applied Psychology) ಕೋರ್ಸ್‌ಗಳ ಪಠ್ಯಕ್ರಮ ರಚನೆಗೆ ಸಂಬಂಧಿಸಿದಂತೆ ಮಾನ್ಯ ಕುಲಪತಿಯವರ ಆದೇಶಾನುಸಾರ ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ, ಅಧ್ಯಯನ ಮಂಡಳಿಗಳನ್ನು ರಚಿಸಿ/ ಪುನರ್‌ರಚಿಸಿ ಅಧಿಸೂಚನೆ ಹೊರಡಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| ಸಾಮಾನ್ಯ ಸಭೆ 2024/6.6 | ಕ್ರಿಶ್ಚಿಯಾನಿಟಿ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7) ಪ್ರಕಾರ ಡಾ. ವಾಲಂಡಿನ್ ರಾಜೇಂದ್ರ ಕುಮಾರ್, ಸಹಾಯಕ ಪ್ರಾಧ್ಯಾಪಕರು, ಕ್ರಿಶ್ಚಿಯಾನಿಟಿ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ: 29-08-2024 ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ಕ್ರಿಶ್ಚಿಯಾನಿಟಿ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇಲ್ಲಿಗೆ ಅಧ್ಯಕ್ಷರನ್ನಾಗಿ ನೇಮಕ ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2024/6.7 | ರಾಜ್ಯಶಾಸ್ತ್ರ ಮತ್ತು ಸಾವಯವ ರಸಾಯನಶಾಸ್ತ್ರ ಅಧ್ಯಯನ ವಿಭಾಗಗಳಿಗೆ ಅಧ್ಯಕ್ಷರುಗಳನ್ನು ನೇಮಕ ಮಾಡಿರುವ ಬಗ್ಗೆ ಅನುಸಮರ್ಥನೆಗಾಗಿ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7) ಪ್ರಕಾರ ಪ್ರೊ. ಕೃಷ್ಣ ಆರ್ ಹೊಂಬಾಳ್, ಪ್ರಾಧ್ಯಾಪಕರು ಇವರನ್ನು ರಾಜ್ಯಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ಹಾಗೂ ಡಾ. ಬಸಪ್ಪ, ಸಹ ಪ್ರಾಧ್ಯಾಪಕರು ಇವರನ್ನು ಸಾವಯವ ರಸಾಯನಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಿ ಆದೇಶ ಹೊರಡಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| ಸಾಮಾನ್ಯ ಸಭೆ 2024/6.8 | ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಸ್ಥಾಪಿಸಲಾಗಿರುವ ಡಾ. ಪಿ.ಆರ್. ತಿಪ್ಪೇಸ್ವಾಮಿ ಅಧ್ಯಯನ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಬಗೆಗೆ. |
| ತೀರ್ಮಾನ | ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಸ್ಥಾಪಿಸಲಾಗಿರುವ ಡಾ. ಪಿ.ಆರ್. ತಿಪ್ಪೇಸ್ವಾಮಿ ಅಧ್ಯಯನ ಪೀಠಕ್ಕೆ ಡಾ. ಸುನಂದಮ್ಮ.ಆರ್, ನಿವೃತ್ತ ಪ್ರಾಧ್ಯಾಪಕರು, ಬೆಂಗಳೂರು ಇವರನ್ನು ಒಂದು ವರ್ಷದ ಅವಧಿಗೆ ರೂ.20,000/-ಗಳ ಗೌರವ ಸಂಭಾವನೆಯೊಂದಿಗೆ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಲು ಸಿಂಡಿಕೇಟ್ ಸಭೆಯು ನಿರ್ಣಯಿಸಿತು. |
| ಸಾಮಾನ್ಯ ಸಭೆ 2024/6.9 | Payment of Special Fee in favour of Sri P.D. Medappa, University Advocate, Mysuru in connection with the Regular Appeal bearing No. 122 of 2023 filed by Cosmopolitan Club (R)., Mysuru against the University of Mysore before the Hon'ble Principal Senior Civil Judge and C.J.M at Mysuru-ratification reg. |

| | |
|---|---|
| ತೀರ್ಮಾನ | **The Payment of Special Fee in favour of Sri P.D.Medappa, University Advocate, Mysuru in connection with the Regular Appeal bearing No. 122 of 2023 filed by Cosmopolitan Club (R)., Mysuru against the University of Mysore before the Hon'ble Principal Senior Civil Judge and C.J.M at Mysuru vide University Order bearing No.WPC/223/ 2003-04 dated 03-06-2024 is approved and ratified by the Syndicate.** |
| ಸಾಮಾನ್ಯ ಸಭೆ 2024/6.10 | Payment of professional fees in favour of Sri Santosh S. Nagarale, Advocate, Bengaluru and M/S. Holla & Holla, Advocates, Bengaluru towards representing the Hon'ble Chancellor in W.A. 1199/2023 and connected appeals before the Hon'ble High Court of Karnataka at Bengaluru-Ratification reg. |
| ತೀರ್ಮಾನ | **The Payment of professional fees in favour of Sri Santosh S. Nagarale, Advocate, Bengaluru and M/S. Holla & Holla, Advocates, Bengaluru towards representing the Hon'ble Chancellor in W.A. 1199/2023 and connected appeals before the Hon'ble High Court of Karnataka at Bengaluru vide University Order bearing No.WPC/84/2022-23 dated 03-06-2024 is approved and ratified by the Syndicate.** |
| ಸಾಮಾನ್ಯ ಸಭೆ 2024/6.11 | Inclusion of Sri N. Mahadevaswamy, Advocate, Mysuru and Sri Abhishek Kumar, Advocate, Bengaluru into the University Panel of Advocates-ratification reg. |
| ತೀರ್ಮಾನ | **Inclusion of Sri N. Mahadevaswamy, Advocate, Mysuru and Sri Abhishek Kumar, Advocate, Bengaluru into the University Panel of Advocates vide University Order bearing No.WPC/407/2019-2020 (1&2) dated 15-05-2024 is approved and ratified by the Syndicate.** |
| ಸಾಮಾನ್ಯ ಸಭೆ 2024/6.12 | Payment of Special Fee in favour of Sri P.N. Manmohan, Empanelled Advocate, Bengaluru in connection with Civil Revision Petition No. 139/2022 filed by University of Mysore against Karnataka State Bharath Scouts and Guides, Mysuru before the Hon'ble High Court of Karnataka at Bengaluru-ratification reg. |
| ತೀರ್ಮಾನ | **The Payment of Special Fee in favour of Sri P.N. Manmohan, Empanelled Advocate, Bengaluru in connection with Civil Revision Petition No.139/2022 filed by University of Mysore against Karnataka State Bharath Scouts and Guides, Mysuru before the Hon'ble High Court of Karnataka at Bengaluru vide University Order bearing No.WPC/356/2022-23 dated 03-06-2024 is approved and ratified by the Syndicate.** |

| | |
|---|---|
| ಸಾಮಾನ್ಯ ಸಭೆ 2024/6.13 | ಮಹಾಜನ ರಿಸರ್ಚ್ ಫೌಂಡೇಶನ್. ಪೂಜಾ ಭಾಗವತ್ ಮೆಮೋರಿಯಲ್ ಮಹಾಜನ ಪಿ.ಜಿ. ಸೆಂಟರ್. ಕೆ.ಆರ್.ಎಸ್. ರಸ್ತೆ. ಮೇಟಗಳ್ಳಿ. ಮೈಸೂರು-570 016 ಇವರು ಹೆಚ್ಚುವರಿಯಾಗಿ Management ಮತ್ತು Commerce ವಿಷಯಗಳಲ್ಲಿ ಪಿಎಚ್.ಡಿ. ಸಂಶೋಧನೆ ನಡೆಸಲು ವಿಶ್ವವಿದ್ಯಾನಿಲಯದಿಂದ ಸಂಶೋಧನಾ ಮಾನ್ಯತೆ ಕೋರಿರುವ ಸಂಬಂಧ ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| ತೀರ್ಮಾನ | ಪರಿವೀಕ್ಷಣಾ ಸಮಿತಿಯ ಶಿಫಾರಸ್ಸಿನನ್ವಯ ಹಾಗೂ **"The University of Mysore-Recognition of Certain Institutions for specified studies/specialized and Research Statutes 2008"** ನಿಬಂಧನೆಗಳ ಅಡಿಯಲ್ಲಿ 2024-24ನೇ ಶೈಕ್ಷಣಿಕ ಸಾಲಿನಿಂದ ಮಹಾಜನ ರಿಸರ್ಚ್ ಫೌಂಡೇಶನ್, ಪೂಜಾ ಭಾಗವತ್ ಮೆಮೋರಿಯಲ್ ಮಹಾಜನ ಪಿ.ಜಿ. ಸೆಂಟರ್, ಕೆ.ಆರ್.ಎಸ್. ರಸ್ತೆ, ಮೇಟಗಳ್ಳಿ, ಮೈಸೂರು-570 016 ಈ ಸಂಸ್ಥೆಗೆ ಹೆಚ್ಚುವರಿಯಾಗಿ **Management** ಮತ್ತು **Commerce** ವಿಷಯಗಳಲ್ಲಿ ಪಿಎಚ್.ಡಿ. ಪದವಿಗಾಗಿ ಸಂಶೋಧನೆ ನಡೆಸಲು ವಿಶ್ವವಿದ್ಯಾನಿಲಯದಿಂದ ಸಂಶೋಧನಾ ಕೇಂದ್ರದ ಮಾನ್ಯತೆ ನೀಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2024/6.14 | International Academy of Reproductive Science, ರಾಜಶೇಖರ್ ಮೆಡಿಕಲ್ ಫೌಂಡೇಶನ್. # 272/2. 1ನೇ ಮಹಡಿ. ಟಿ-ನರಸೀಪುರ ರಸ್ತೆ. ಮೈಸೂರು ಇವರ ಸಂಸ್ಥೆಯಲ್ಲಿ Specialized Programme ಅಡಿಯಲ್ಲಿ ಹೊಸ ಕೋರ್ಸ್ ಪ್ರಾರಂಭಿಸಲು ಮಾನ್ಯತೆ ನೀಡಿರುವ ಬಗ್ಗೆ-ಅನುಸಮರ್ಥನೆಗಾಗಿ. |
| ತೀರ್ಮಾನ | ಪರಿವೀಕ್ಷಣಾ ಸಮಿತಿಯ ಶಿಫಾರಸ್ಸಿನನ್ವಯ ಹಾಗೂ **"The University of Mysore-Recognition of Certain Institutions for specified studies/ specialized and Research Statutes 2008"** ನಿಬಂಧನೆಗಳ ಅಡಿಯಲ್ಲಿ **International Academy of Reproductive Science,** ರಾಜಶೇಖರ್ ಮೆಡಿಕಲ್ ಫೌಂಡೇಶನ್, # 272/2, 1ನೇ ಮಹಡಿ, ಟಿ-ನರಸೀಪುರ ರಸ್ತೆ, ಮೈಸೂರು ಇವರ ಸಂಸ್ಥೆಯಲ್ಲಿ **Specialized Programme** ಅಡಿಯಲ್ಲಿ ಹೊಸದಾಗಿ **M.Sc. (Clinical Embryology and Assisted Reproductive Techniques** ಕೋರ್ಸ್‌ಗೆ 40 ವಿದ್ಯಾರ್ಥಿಗಳ ಪ್ರವೇಶಾತಿ ಮಿತಿಯೊಂದಿಗೆ 2024-25ನೇ ಸಾಲಿನಿಂದ ಪ್ರಾರಂಭಿಸಲು ಮಾನ್ಯ ಕುಲಪತಿಗಳ ಆದೇಶಾನುಸಾರ ಮತ್ತು ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ಅಧಿಸೂಚನೆ ಹೊರಡಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| ಸಾಮಾನ್ಯ ಸಭೆ 2024/6.15 | ಕಾವೇರಿ ಕಾಲೇಜ್ ಆಫ್ ಲೈಫ್ ಸೈನ್ಸ್ ಅಂಡ್ ಮ್ಯಾನೇಜ್‌ಮೆಂಟ್. ಕೆ.ಬಿ.ಎಲ್. ಲೇಔಟ್. ಬನ್ನೂರು ರಿಂಗ್ ರಸ್ತೆ. ದೇವೇಗೌಡ ಸರ್ಕಲ್ ಹತ್ತಿರ. ಆಲನಹಳ್ಳಿ. ಮೈಸೂರು ಇವರ ಸಂಸ್ಥೆಯಲ್ಲಿ Specialized Programme ಅಡಿಯಲ್ಲಿ ಹೊಸ ಕೋರ್ಸ್‌ಗಳನ್ನು ಪ್ರಾರಂಭಿಸಲು ಮಾನ್ಯತೆ ನೀಡಿರುವ ಬಗ್ಗೆ-ಅನುಸಮರ್ಥನೆಗಾಗಿ. |
| ತೀರ್ಮಾನ | ಪರಿವೀಕ್ಷಣಾ ಸಮಿತಿಯ ಶಿಫಾರಸ್ಸಿನನ್ವಯ ಹಾಗೂ **"The University of Mysore-Recognition of Certain Institutions for specified studies/ specialized and Research Statutes 2008"** ನಿಬಂಧನೆಗಳ ಅಡಿಯಲ್ಲಿ ಕಾವೇರಿ ಕಾಲೇಜ್ ಆಫ್ ಲೈಫ್ ಸೈನ್ಸ್ |

| | |
|---|---|
| | ಅಂಡ್ ಮ್ಯಾನೇಜ್‌ಮೆಂಟ್, ಕೆ.ಬಿ.ಎಲ್. ಲೇಔಟ್, ಬನ್ನೂರು ರಿಂಗ್ ರಸ್ತೆ, ದೇವೇಗೌಡ ಸರ್ಕಲ್ ಹತ್ತಿರ, ಆಲನಹಳ್ಳಿ, ಮೈಸೂರು ಇವರ ಸಂಸ್ಥೆಯಲ್ಲಿ Specialized Programme ಅಡಿಯಲ್ಲಿ ಹೊಸದಾಗಿ **1. Bachelor of Hospital Management-60 intake, 2. PG Diploma in Coding & Transcription-49 intake and 3. PG Diploma in health Insurance & Records-40 intake** ಕೋರ್ಸ್‌ಗಳನ್ನು 2024-25ನೇ ಸಾಲಿನಿಂದ ಪ್ರಾರಂಭಿಸಲು ಮಾನ್ಯ ಕುಲಪತಿಗಳ ಆದೇಶಾನುಸಾರ ಮತ್ತು ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ಅಧಿಸೂಚನೆ ಹೊರಡಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| ಸಾಮಾನ್ಯ ಸಭೆ 2024/6.16 | ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ವಾಲ್ಮೀಕಿ ರಸ್ತೆ, ಪಡುವಾರಹಳ್ಳಿ, ಮೈಸೂರು ಇವರು ಹೊಸದಾಗಿ Commerce ವಿಷಯದಲ್ಲಿ ಪಿಎಚ್.ಡಿ. ಸಂಶೋಧನೆ ನಡೆಸಲು ವಿಶ್ವವಿದ್ಯಾನಿಲಯದಿಂದ ಸಂಶೋಧನಾ ಕೇಂದ್ರದ ಮಾನ್ಯತೆ ಕೋರಿರುವ ಸಂಬಂಧ ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| ತೀರ್ಮಾನ | **ಪರಿವೀಕ್ಷಣಾ ಸಮಿತಿಯ ಶಿಫಾರಸ್ಸಿನನ್ವಯ ಹಾಗೂ "The University of Mysore-Recognition of Certain Institutions for specified studies/ specialized and Research Statutes 2008" ನಿಬಂಧನೆಗಳ ಅಡಿಯಲ್ಲಿ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ವಾಲ್ಮೀಕಿ ರಸ್ತೆ, ಪಡುವಾರಹಳ್ಳಿ, ಮೈಸೂರು ಸಂಸ್ಥೆಗೆ ಹೊಸದಾಗಿ Commerce ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ ಸಂಶೋಧನೆ ನಡೆಸಲು ವಿಶ್ವವಿದ್ಯಾನಿಲಯದಿಂದ ಸಂಶೋಧನಾ ಕೇಂದ್ರದ ಮಾನ್ಯತೆ ನೀಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| ಸಾಮಾನ್ಯ ಸಭೆ 2024/6.17 | ದಿನಾಂಕ: 18-07-2024ರಂದು ನಡೆದ ಕ್ರೀಡಾ ಸಮಿತಿಯ ನಡವಳಿಯನ್ನು ಅನುಮೋದಿಸುವ ಬಗ್ಗೆ. |
| | ಶ್ರೀ ಕೆ.ಗೋಕುಲ್ ಗೋವರ್ಧನ್ ಅವರು ಮಾತನಾಡಿ, 2023-24ನೇ ಶೈಕ್ಷಣಿಕ ಸಾಲಿನ ವಿವಿಧ ಕ್ರೀಡಾ ಚಟುವಟಿಕೆಗಳ ವೆಚ್ಚದ ಪಟ್ಟಿಯನ್ನು ಕಾರ್ಯಸೂಚಿಯಲ್ಲಿ ಲಗತ್ತಿಸಿರುವುದಿಲ್ಲ. ಸದರಿ ಕಾರ್ಯಸೂಚಿಯಲ್ಲಿ 2023-24ನೇ ಶೈಕ್ಷಣಿಕ ಸಾಲಿನ ವಿವಿಧ ಕ್ರೀಡಾ ಚಟುವಟಿಕೆಗಳ ವೆಚ್ಚದ ಪಟ್ಟಿಯನ್ನು ಲಗತ್ತಿಸಿ, ಮರು ಮಂಡಿಸಬೇಕೆಂದು ತಿಳಿಸಿದರು.<br><br>ಡಾ. ಟಿ.ಆರ್.ಚಂದ್ರಶೇಖರ್ ಅವರು ಮಾತನಾಡಿ, ನನ್ನನ್ನು ಕ್ರೀಡಾ ಸಮಿತಿಗೆ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಲಾಗಿತ್ತು. ಬಜೆಟ್‌ಗೆ ಅನುಮೋದನೆಗೆ ನೀಡಲಾಗಿತ್ತು. ತದನಂತರ, ಕ್ರೀಡಾ ಸಮಿತಿಯಿಂದ ನಿಮ್ಮನ್ನು ಕೈಬಿಡಲಾಗಿದ್ದು, ಬೇರೆಯವರನ್ನು ತೆಗೆದುಕೊಳ್ಳುತ್ತೇವೆಂದು ಲಿಖಿತವಾಗಿ ತಿಳಿಸಬಹುದಾಗಿತ್ತು ಹಾಗೂ ಬಜೆಟ್‌ಗೆ ಅನುಮೋದನೆ ನೀಡಿದ್ದವರಿಗೆ ವೆಚ್ಚ ಪಟ್ಟಿಯನ್ನು ಪರಿಶೀಲಿಸಲು ಅವಕಾಶವಿಲ್ಲವೇ, ಪ್ರತಿ ವರ್ಷ ಸದಸ್ಯರನ್ನು ಬದಲಾವಣೆ ಮಾಡುವುದಾದರೆ, ಕನಿಷ್ಠ ಸೌಜನ್ಯಕ್ಕಾದರೂ ಲಿಖಿತವಾಗಿ ಅಥವಾ ದೂರವಾಣಿ ತಿಳಿಸಿ ಗೌರವಯುತವಾಗಿ ಕಳುಹಿಸಬಹುದಾಗಿತ್ತು. ಏಕೆಂದರೆ, ನಾವಿನ್ನು ಸದಸ್ಯರಾಗಿದ್ದೇವೆಂದು ಎಷ್ಟೋ ಮಂದಿ approach ಮಾಡುತ್ತೇನೆಂದು ಭಾವಿಸಿ ವಿಷಯಗಳನ್ನು ಮಂಡಿಸಲು ತಿಳಿಸುತ್ತಾರೆ. ಪ್ರತಿ ಶೈಕ್ಷಣಿಕ ಸಾಲಿನಲ್ಲೂ ಪರಿಷ್ಕೃತ ಕ್ರೀಡಾ ಸಮಿತಿ ರಚಿಸಬೇಕೆಂದು ಅಧಿನಿಯಮದಲ್ಲಿದೆಯೇ, ಎಂದು ತಿಳಿಸಿದರು. |

| | |
|---|---|
| | ಡಾ. ಬಸವರಾಜು ಸಿ ಅವರು ಮಾತನಾಡಿ, ಇನ್ನು ಮುಂದೆ ಈ ರೀತಿಯಾಗದಂತೆ ಸಮಿತಿಗೆ ಹೆಸರನ್ನು ಶಿಫಾರಸ್ಸು ಮಾಡುವವರು ಸೌಜನ್ಯಕ್ಕಾದರೂ ಲಿಖಿತವಾಗಿ ತಿಳಿಸಲು ಕ್ರಮ ತೆಗೆದುಕೊಳ್ಳಬೇಕೆಂದರು.<br><br>ಕುಲಪತಿಗಳು ಮಾತನಾಡಿ, ಪ್ರತಿ ಶೈಕ್ಷಣಿಕ ಸಾಲಿನಲ್ಲೂ ಕ್ರೀಡಾ ಸಮಿತಿಯನ್ನು ಪರಿಷ್ಕರಿಸಲಾಗುತ್ತದೆ. ಯಾವುದೇ ಸಮಿತಿಗಾದರೂ ಆಯಾ ವಿಭಾಗದ ಅಧ್ಯಕ್ಷರು/ ನಿರ್ದೇಶಕರುಗಳು ಹೆಸರುಗಳನ್ನು ಶಿಫಾರಸ್ಸು ಮಾಡುತ್ತಾರೆ. ಆ ಹೆಸರುಗಳಲ್ಲಿ ಸಮಿತಿ ರಚನೆಗೆ ನಾಮನಿರ್ದೇಶನ ಮಾಡುತ್ತೇನೆ. ಪ್ರತಿ ಶೈಕ್ಷಣಿಕ ಸಾಲಿನಲ್ಲಿ ಪರಿಷ್ಕೃತವಾಗಿ ಸದಸ್ಯರನ್ನು ನೇಮಕ ಮಾಡಬೇಕೆಂದು ದೈಹಿಕ ಶಿಕ್ಷಣದ ಮಾರ್ಗಸೂಚಿಯಲ್ಲಿದೆ. ಇನ್ನು ಮುಂದೆ ಸಮಿತಿಯನ್ನು ಪರಿಷ್ಕರಿಸಿದ್ದಲ್ಲಿ, ಸದಸ್ಯರುಗಳಿಗೆ ಆಯಾ ವಿಭಾಗದ ಉಪಕುಲಸಚಿವರ ಮುಖಾಂತರ ಲಿಖಿತವಾಗಿ ತಿಳಿಸಲು ಕ್ರಮವಹಿಸಲಾಗುವುದೆಂದರು. |
| ತೀರ್ಮಾನ | **ಮರು ಮಂಡಿಸುವುದು.** |
| ಸಾಮಾನ್ಯ ಸಭೆ 2024/6.18 | ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳ ಆಡಳಿತ, ನಿರ್ವಹಣೆ ಹಾಗೂ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಸಲಹಾ ಸಮಿತಿಯ ಸಭೆಯ ತೀರ್ಮಾನಗಳನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ. |
| ತೀರ್ಮಾನ | **ದಿನಾಂಕ: 12-07-2024 ರಂದು ಜರುಗಿದ 2024-25ನೇ ಶೈಕ್ಷಣಿಕ ಸಾಲಿನ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳ ಆಡಳಿತ, ನಿರ್ವಹಣೆ ಹಾಗೂ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಸಲಹಾ ಸಮಿತಿಯ ಸಭೆಯ ತೀರ್ಮಾನಗಳನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| ಸಾಮಾನ್ಯ ಸಭೆ 2024/6.19 | ವಿಶ್ವವಿದ್ಯಾನಿಲಯದ ಸ್ಕೂಲ್ ಆಫ್ ಇಂಜಿನಿಯರಿಂಗ್ ನಿಕಾಯದಡಿ ಬರುವ ಆರು ಅಧ್ಯಯನ ಮಂಡಳಿಗಳನ್ನು ಪುನರ್‌ರಚಿಸುವ ಬಗ್ಗೆ. |
| ತೀರ್ಮಾನ | **ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 33(1) ಮತ್ತು (2)ರ ಪ್ರಕಾರ ವಿಶ್ವವಿದ್ಯಾನಿಲಯದ ಸ್ಕೂಲ್ ಆಫ್ ಇಂಜಿನಿಯರಿಂಗ್ ನಿಕಾಯದಡಿ ಬರುವ ಈ ಕೆಳಕಂಡ ವಿಷಯಗಳ ಅಧ್ಯಯನ ಮಂಡಳಿಗಳನ್ನು ಪುನರ್‌ರಚಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.**<br>1. **Civil and Environmental Engineering**<br>2. **Artificial Intelligence and Data Science**<br>3. **Artificial Intelligence and Machine Learning**<br>4. **Computer Science and Design**<br>5. **Bio-medical and Robotic Engineering** |
| ಸಾಮಾನ್ಯ ಸಭೆ 2024/6.20 | ವಿಶ್ವವಿದ್ಯಾನಿಲಯದ 2023-24ನೇ ಸಾಲಿನ ವಾರ್ಷಿಕ ವರದಿಯ ಪರಿಶೀಲನೆ ಹಾಗೂ ಅನುಮೋದನೆ ಬಗೆಗೆ. |
| ತೀರ್ಮಾನ | **ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ರ ಪ್ರಕರಣ 50(1)ರ ಪ್ರಕಾರ ಸಿದ್ಧಪಡಿಸಲಾಗಿರುವ ವಿಶ್ವವಿದ್ಯಾನಿಲಯದ 2023-24ನೇ ಸಾಲಿನ ವಾರ್ಷಿಕ ವರದಿಯ ಕರಡು ಪ್ರತಿಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿ, ಸರ್ಕಾರಕ್ಕೆ ಕಳುಹಿಸಲು ತೀರ್ಮಾನಿಸಿತು.** |

| | |
|---|---|
| ಸಾಮಾನ್ಯ ಸಭೆ 2024/6.21 | ಪರೀಕ್ಷಾ ಅಕ್ರಮ ಹಾಗೂ ಲೋಪದೋಷಗಳ ವಿಚಾರಣಾ ಸಮಿತಿಯ ಶಿಫಾರಸ್ಸುಗಳು. |
| ತೀರ್ಮಾನ | **ಜೂನ್/ಜುಲೈ 2024 ರಲ್ಲಿ ನಡೆದ ಪದವಿ ಪರೀಕ್ಷೆಗಳಿಗೆ ಸಂಬಂಧಿಸಿದಂತೆ 11 ವಿದ್ಯಾರ್ಥಿಗಳು ಪರೀಕ್ಷಾ ಅಕ್ರಮ ಎಸಗಿರುವ ಬಗ್ಗೆ ಪರೀಕ್ಷಾ ಅಕ್ರಮ ಹಾಗೂ ಲೋಪದೋಷಗಳ ವಿಚಾರಣಾ ಸಮಿತಿಯು (ಎಂ.ಪಿ.ಎಲ್.ಇ.ಸಿ) ದಿನಾಂಕ: 28-08-2024 ಹಾಗೂ 29-08-2024 ರಂದು ವಿಚಾರಣೆ ನಡೆಸಿ, ಸಲ್ಲಿಸಿರುವ ಶಿಫಾರಸುಗಳನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| ಸಾಮಾನ್ಯ ಸಭೆ 2024/6.22 | ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನ ಬಿ.ಕಾಂ. ಸ್ನಾತಕ ಕೋರ್ಸ್‌ನ ಶಾಶ್ವತ ಸಂಯೋಜನೆ ಮತ್ತು ಬಿ.ಸಿ.ಎ. ಕೋರ್ಸ್‌ಗೆ ಹೆಚ್ಚುವರಿ ವಿದ್ಯಾರ್ಥಿಗಳ ಪ್ರವೇಶಾತಿ ಬಗ್ಗೆ. |
| ತೀರ್ಮಾನ | **ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಟ್ಟ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಮೈಸೂರು ಸಂಸ್ಥೆಗೆ 2024-2025ನೇ ಶೈಕ್ಷಣಿಕ ಸಾಲಿನಿಂದ ಬಿ.ಕಾಂ ಸ್ನಾತಕ ಕೋರ್ಸ್‌ನ 60 ವಿದ್ಯಾರ್ಥಿಗಳ ಪ್ರಮಾಣಕ್ಕೆ ಶಾಶ್ವತ ಸಂಯೋಜನೆಯನ್ನು ಮತ್ತು ಬಿ.ಸಿ.ಎ ಕೋರ್ಸ್‌ಗೆ ಹಾಲಿಯಿರುವ 60 ಪ್ರವೇಶಾತಿ ಸಂಖ್ಯೆಗೆ ಹೆಚ್ಚುವರಿಯಾಗಿ 20 ಪ್ರವೇಶಾತಿ ಸಂಖ್ಯೆಯನ್ನು ಸೇರಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| ಸಾಮಾನ್ಯ ಸಭೆ 2024/6.23 | ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನಲ್ಲಿರುವ ಬಿ.ಕಾಂ. ಕೋರ್ಸ್‌ನ ಪ್ರಥಮ ವರ್ಷಕ್ಕೆ ವಿದ್ಯಾರ್ಥಿಗಳ ಸಂಖ್ಯಾಮಿತಿಯನ್ನು 690 ರಿಂದ 1100ಕ್ಕೆ ಹೆಚ್ಚಿಸಿರುವ ಬಗ್ಗೆ. |
| ತೀರ್ಮಾನ | **ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಮೈಸೂರು ಇವರು 2024-2025ನೇ ಶೈಕ್ಷಣಿಕ ಸಾಲಿನಲ್ಲಿ ಬಿ.ಕಾಂ. ಕೋರ್ಸ್‌ನ ಪ್ರಥಮ ವರ್ಷಕ್ಕೆ ವಿದ್ಯಾರ್ಥಿಗಳ ಸಂಖ್ಯಾಮಿತಿಯನ್ನು 690 ರಿಂದ 1100 ಕ್ಕೆ ಹೆಚ್ಚಿಸಿ, 410 ವಿದ್ಯಾರ್ಥಿಗಳನ್ನು ಹೆಚ್ಚುವರಿಯಾಗಿ ಪ್ರವೇಶಾತಿ ಮಾಡಿಕೊಂಡು ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳ ಅನುಮೋದನೆಯನ್ನು ಕಾಯ್ದಿರಿಸಿ ದಿನಾಂಕ: 06-12-2023 ರಂದು ಸಂಯೋಜನಾ ಆದೇಶ ಹೊರಡಿಸಿ ಕ್ರಮ ಕೈಗೊಂಡಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |
| ಸಾಮಾನ್ಯ ಸಭೆ 2024/6.24 | Centre for Study of Social Exclusion and Inclusive Policy (CSSEIP) ಕೇಂದ್ರದಲ್ಲಿನ ಬೋಧಕರ ಸೇವೆಯನ್ನು ಮುಂದುವರೆಸುವ ಬಗ್ಗೆ. |
| ತೀರ್ಮಾನ | **Centre for Study of Social Exclusion and Inclusive Policy (CSSEIP) ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಡಾ. ಸಿದ್ದರಾಜು.ವಿ.ಜಿ., ಸಹ ಪ್ರಾಧ್ಯಾಪಕರು ಹಾಗೂ ನಿರ್ದೇಶಕರು (ಪ್ರಭಾರ) ಮತ್ತು ಡಾ. ನಂಜುಂಡ.ಡಿ.ಸಿ., ಸಹ ಪ್ರಾಧ್ಯಾಪಕರು ಹಾಗೂ ಉಪ ನಿರ್ದೇಶಕ ಇವರುಗಳನ್ನು ವಿಶ್ವವಿದ್ಯಾನಿಲಯಕ್ಕೆ ಯಾವುದೇ ರೀತಿಯ ಆರ್ಥಿಕ ಹೊರೆಯಾಗದಂತೆ "tenure basis" ಅಡಿಯಲ್ಲಿ ದಿನಾಂಕ: 31-03-2025 ರವರೆಗೆ ಮುಂದುವರೆಸಲು ಸಿಂಡಿಕೇಟ್ ಸಭೆಯು ಅನುಮತಿಸಿತು.** |
| ಸಾಮಾನ್ಯ ಸಭೆ | 2023-24ನೇ ಶೈಕ್ಷಣಿಕ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಮೈಸೂರು ನಗರ ವ್ಯಾಪ್ತಿಯ ಸ್ನಾತಕ, ಸ್ನಾತಕೋತ್ತರ ಹಾಗೂ ಸಂಶೋಧನಾ ವಿದ್ಯಾರ್ಥಿನಿಲಯಗಳಲ್ಲಿನ ನಿಲಯವಾಸಿಗಳಿಗೆ ಭೋಜನ ವ್ಯವಸ್ಥೆಯನ್ನು ಕಲ್ಪಿಸಲು ಅಗತ್ಯವಾದ 52 ಆಹಾರ ಪದಾರ್ಥಗಳನ್ನು (ತರಕಾರಿಗಳು/ |

| | |
|---|---|
| 2024/6.25 | ಸೊಪ್ಪುಗಳು/ ಹಣ್ಣುಗಳು/ ಹಾಲು ಮತ್ತು ಮೊಸರು/ ಮೊಟ್ಟೆ ಮತ್ತು ಚಿಕನ್) ವಾರ್ಷಿಕ ದರ ಒಪ್ಪಂದದ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ಸರಬರಾಜು ಮಾಡಲು ಮೆ.: ವಿನಾಯಕ ಎಂಟರ್‌ಪ್ರೈಸಸ್, ಚಾಮರಾಜನಗರ, ಇವರು ಆಯ್ಕೆಗೊಂಡಿರುವ ಹಿನ್ನೆಲೆಯಲ್ಲಿ ಆದೇಶ ಹೊರಡಿಸಿರುವ ವಿಷಯವನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ. |
| ತೀರ್ಮಾನ | ಮುಂದೂಡಲಾಯಿತು. |
| ಸಾಮಾನ್ಯ ಸಭೆ 2024/6.26 | 2023-24ನೇ ಶೈಕ್ಷಣಿಕ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಮೈಸೂರು ನಗರ ವ್ಯಾಪ್ತಿಯ ಸ್ನಾತಕ, ಸ್ನಾತಕೋತ್ತರ ಹಾಗೂ ಸಂಶೋಧನಾ ವಿದ್ಯಾರ್ಥಿನಿಲಯಗಳಲ್ಲಿನ ನಿಲಯವಾಸಿಗಳಿಗೆ ಭೋಜನ ವ್ಯವಸ್ಥೆಯನ್ನು ಕಲ್ಪಿಸಲು ಬೇಕಾಗಿರುವ 39 ಮುಖ್ಯ ಅಡುಗೆಯವರು, 71 ಸಹಾಯಕರು ಹಾಗೂ 53 ಹೆಲ್ಪರ್ಸ್‌ಗಳ ಸೇವೆಯನ್ನು ಹೊರಗುತ್ತಿಗೆಯ ಆಧಾರದ ಮೇಲೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಪಡೆಯಲು ಶ್ರೀ ಶಿವಣ್ಣ ಮೆ.: ಕಾಂತಿ ಏಜೆನ್ಸಿ ನೆಟ್‌ವರ್ಕ್ಸ್, ಮೈಸೂರು ಸಂಸ್ಥೆಯು ಆಯ್ಕೆಗೊಂಡಿರುವ ಹಿನ್ನೆಲೆಯಲ್ಲಿ ಆದೇಶ ಹೊರಡಿಸಿರುವ ವಿಷಯವನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ. |
| ತೀರ್ಮಾನ | **ಮುಂದೂಡಲಾಯಿತು.** |
| ಸಾಮಾನ್ಯ ಸಭೆ 2024/6.27 | 2023-24ನೇ ಶೈಕ್ಷಣಿಕ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಮೈಸೂರು ನಗರ ವ್ಯಾಪ್ತಿಯ ಸ್ನಾತಕ, ಸ್ನಾತಕೋತ್ತರ ಹಾಗೂ ಸಂಶೋಧನಾ ವಿದ್ಯಾರ್ಥಿನಿಲಯಗಳಲ್ಲಿನ ನಿಲಯವಾಸಿಗಳಿಗೆ ಭೋಜನ ವ್ಯವಸ್ಥೆಯನ್ನು ಕಲ್ಪಿಸಲು ಅಗತ್ಯವಾದ 81 ದಿನಸಿ ಪದಾರ್ಥಗಳನ್ನು ವಾರ್ಷಿಕ ದರ ಒಪ್ಪಂದದ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ಸರಬರಾಜು ಮಾಡಲು ಮೆ.: ವಿನಾಯಕ ಎಂಟರ್‌ಪ್ರೈಸಸ್ ಚಾಮರಾಜನಗರ, ಇವರು ಆಯ್ಕೆಗೊಂಡಿರುವ ಹಿನ್ನೆಲೆಯಲ್ಲಿ ಆದೇಶ ಹೊರಡಿಸಿರುವ ವಿಷಯವನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಕೋರಿ. |
| ತೀರ್ಮಾನ | **ಮುಂದೂಡಲಾಯಿತು.** |
| ಸಾಮಾನ್ಯ ಸಭೆ 2024/6.28 | ಶ್ರೀಮತಿ ಜಯಲಕ್ಷ್ಮಿ, ತಾತ್ಕಾಲಿಕ ಸಫಾಯಿ ಕರ್ಮಚಾರಿ ಸಿಬ್ಬಂದಿ, ಸ್ನಾತಕೋತ್ತರ ಮಹಿಳಾ ವಿದ್ಯಾರ್ಥಿನಿಲಯ ಬ್ಲಾಕ್-3 ಇವರಿಗೆ ಸಫಾಯಿ ಕರ್ಮಚಾರಿ ವೇತನವನ್ನು ಪಾವತಿಸುವ ಬಗ್ಗೆ. |
| ತೀರ್ಮಾನ | **ಶ್ರೀಮತಿ ಜಯಲಕ್ಷ್ಮಿ, ತಾತ್ಕಾಲಿಕ ಸಫಾಯಿ ಕರ್ಮಚಾರಿ ಸಿಬ್ಬಂದಿ, ಸ್ನಾತಕೋತ್ತರ ಮಹಿಳಾ ವಿದ್ಯಾರ್ಥಿನಿಲಯ ಬ್ಲಾಕ್-3 ಇವರಿಗೆ ಪ್ರಸ್ತುತ ಸ್ವಚ್ಛತಾ ಸಿಬ್ಬಂದಿ ವೇತನ ಪಾವತಿಸುತ್ತಿದ್ದು, ಸಫಾಯಿ ಕರ್ಮಚಾರಿ ಸಿಬ್ಬಂದಿ ವೇತನ ಪಾವತಿಸುವ ಬಗ್ಗೆ ಸರ್ಕಾರಕ್ಕೆ ಪತ್ರ ಬರೆಯಲು ಹಾಗೂ ಸರ್ಕಾರವು ಸ್ಪಷ್ಟ ನಿರ್ದೇಶನ ನೀಡುವವರೆಗೆ ಶ್ರೀಮತಿ ಜಯಲಕ್ಷ್ಮಿ ಇವರ "ತಾತ್ಕಾಲಿಕ ಸಫಾಯಿ ಕರ್ಮಚಾರಿ ಸಿಬ್ಬಂದಿ" ಎಂಬ ಪದನಾಮವನ್ನು ಹಿಂಪಡೆದು "ತಾತ್ಕಾಲಿಕ ಸ್ವಚ್ಛತಾ ಸಿಬ್ಬಂದಿ" ಎಂದು ಬದಲಾವಣೆ ಮಾಡಿ ಆದೇಶ ಹೊರಡಿಸಲು ಸಿಂಡಿಕೇಟ್ ಸಭೆಯು ಒಪ್ಪಿಗೆ ಸೂಚಿಸಿತು.** |
| ಸಾಮಾನ್ಯ ಸಭೆ 2024/6.29 | 2023-24ನೇ ಆರ್ಥಿಕ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಆಯವ್ಯಯ ಅಂದಾಜುಗಳಲ್ಲಿ ಮರು ಹೊಂದಾಣಿಕೆ (Re-appropriation) ಮಾಡಿರುವುದನ್ನು "ಸಿಂಡಿಕೇಟ್" ಸಭೆಯ ಅನುಮೋದನೆಗಾಗಿ ಮರು ಮಂಡಿಸುವ ಬಗ್ಗೆ. |

| | |
|---|---|
| ತೀರ್ಮಾನ | 2023-24ನೇ ಆರ್ಥಿಕ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಆಯವ್ಯಯ ಅಂದಾಜುಗಳಲ್ಲಿ ಮರು ಹೊಂದಾಣಿಕೆ (Re-appropriation) ಮಾಡಿರುವುದನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2024/6.30 | ಮೈಸೂರು ವಿಶ್ವವಿದ್ಯಾನಿಲಯದ 2024-2025ನೇ ಆರ್ಥಿಕ ಸಾಲಿನ ಆಯವ್ಯಯ ಅಂದಾಜು ಗಳನ್ನು ಅನುಮೋದಿಸುವ ಬಗ್ಗೆ. |
| | ಡಾ. ಟಿ.ಆರ್.ಚಂದ್ರಶೇಖರ್ ಅವರು ಮಾತನಾಡಿ, ಕಳೆದ ಸಿಂಡಿಕೇಟ್ ಸಭೆಯಲ್ಲಾಗಿರುವ ತೀರ್ಮಾನವನ್ನು ತಿಳಿಸಬೇಕೆಂದರು. ಮುಂದುವರೆದು, ಕಳೆದ ಸಿಂಡಿಕೇಟ್ ಸಭೆಯಲ್ಲಿ ಸುದೀರ್ಘವಾಗಿ ಚರ್ಚೆಯಾಗಿ, ಸದಸ್ಯರುಗಳು ತಿಳಿಸಿರುವ ಸಲಹೆಗಳನ್ನು ಒಪ್ಪಿಕೊಂಡಿದ್ದು, ನಡಾವಳಿಯಲ್ಲಿಯೂ ನಮೂದಾಗಿರುತ್ತದೆ. ಆದರೂ ಸದಸ್ಯರುಗಳು ಸಲಹೆ ನೀಡಿದಂತೆ ಆಯವ್ಯಯವನ್ನು ಸಿದ್ಧಪಡಿಸಿರುವುದಿಲ್ಲ. ಇದು ನಿಯಮಗಳ ವಿರುದ್ಧವಾಗಿದೆ ಎಂದರು.<br><br>ಹಣಕಾಸು ಅಧಿಕಾರಿಗಳು ಮಾತನಾಡಿ, 5 ಹಾಗೂ 7 ತಿಂಗಳಿಗೆ ಬಜೆಟ್ ಮಾಡಲು ಸಾಧ್ಯವಿಲ್ಲ. ಏಕೆಂದರೆ, ಯುಯುಸಿಎಂಎಸ್ ನಲ್ಲಿ ಒಂದು ವರ್ಷದ ಪೂರ್ಣ ಬಜೆಟ್‌ನ್ನು ಅಪ್‌ಲೋಡ್ ಮಾಡಬೇಕು. ಇನ್ನು ಮುಂದೆ ಆಯಾ ಆರ್ಥಿಕ ವರ್ಷದ ವೆಚ್ಚಗಳ ಪಟ್ಟಿಯನ್ನು ಸಹ ಅಪ್‌ಲೋಡ್ ಮಾಡಬೇಕು. ಇಂತಹ ಸಂದರ್ಭದಲ್ಲಿ ಮಾರ್ಪಾಡು ಮಾಡುವುದಕ್ಕಾಗುವುದಿಲ್ಲ. ಪಿಂಚಣಿ ಬಗ್ಗೆ ಕೇಳಿದ್ದ ಸ್ಪಷ್ಟೀಕರಣಗಳಿಗೆ ಸ್ಪಷ್ಟತೆ ನೀಡಲಾಗುವುದೆಂದು ಮಾತ್ರ ಒಪ್ಪಿಕೊಂಡಿರುತ್ತೇನೆ ಹೊರತು ಆಯವ್ಯಯದಲ್ಲ ಎಂದರು.<br><br>ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಸದಸ್ಯರುಗಳು ತಿಳಿಸಿರುವ ಸಲಹೆಗಳನ್ನು ಆಯವ್ಯಯದಲ್ಲಿ ಸೇರ್ಪಡೆ ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳುವುದಕ್ಕೆ ಬರುವುದಿಲ್ಲ. ಹಿಂದಿನ ಸಭೆಯಲ್ಲಿ ನಡೆದಿರುವ ಚರ್ಚೆಗಳನ್ನು ಪುನಃ ತಿಳಿಸಬೇಕು ಎಂದು ತಿಳಿಸಿದ್ದಲ್ಲಿ, ದಾಖಲೆಗಳ ಸಮೇತ ತಿಳಿಸಲಾಗುವುದೆಂದರು.<br><br>ಕುಲಪತಿಗಳು ಮಾತನಾಡಿ, ಬಜೆಟ್‌ನ ಸಂಬಂಧ ಈಗಾಗಲೇ ಮೂರು ಸಭೆಗಳಲ್ಲಿ ಹಲವಾರು ಚರ್ಚೆಗಳಾಗಿದೆ. ಸುಮಾರು ವರ್ಷಗಳಿಂದ ಬಜೆಟ್ ಸಿದ್ಧಪಡಿಸಿದಂತೆಯೇ ಈಗಲೂ ಮುಂದುವರೆಸಿಕೊಂಡು ಬರಲಾಗಿದೆ. ಕರ್ನಾಟಕ ಸರ್ಕಾರದ ಬಜೆಟ್ ಸಹ ಇದೇ ರೀತಿಯಿರುತ್ತದೆ. ತಿದ್ದುಪಡಿಯಾಗಲೀ ಅಥವಾ ಆಕ್ಷೇಪಣೆಯಾಗಲೀ ಲಿಖಿತವಾಗಿ ಸಲ್ಲಿಸಬೇಕು. ಪ್ರತಿ ವರ್ಷವೂ ನಿಗದಿತ ಅವಧಿಯೊಳಗೆ ಸಿದ್ಧಪಡಿಸಿರುವ ಆಯವ್ಯಯವನ್ನು ಸರ್ಕಾರಕ್ಕೆ ಕಳುಹಿಸಬೇಕು. ನಿಗದಿತ ಅವಧಿಯಲ್ಲಿ ಆಯವ್ಯಯವನ್ನು ಸಿದ್ಧಪಡಿಸಲಾಗಿದ್ದು, ಚುನಾವಣಾ ನೀತಿ ಸಂಹಿತೆ ಹಿನ್ನೆಲೆಯಲ್ಲಿ ಕಳುಹಿಸುವುದು ತಡವಾಗಿದೆ ಎಂದು ತಿಳಿಸಿದರು.<br><br>ಡಾ. ಬಸವರಾಜು.ಸಿ ಅವರು ಮಾತನಾಡಿ, ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ಸದಸ್ಯರುಗಳು ತಿಳಿಸಿರುವ ತಿದ್ದುಪಡಿಗಳನ್ನು ಸರಿಪಡಿಸಲಾಗಿದೆಯೇ, ತಿದ್ದುಪಡಿ ಮಾಡಿರುವುದನ್ನು ಸಭೆಯ ಗಮನಕ್ಕೆ ತರಬೇಕೆಂದರು.<br><br>ಕುಲಸಚಿವ (ಪರೀಕ್ಷಾಂಗ) ಅವರು ಮಾತನಾಡಿ, typographical corrections ಪೂರ್ಣವಾಗಿ ಮಾಡಿಸಲಾಗಿದೆ ಎಂದರು.<br><br>ಹಣಕಾಸು ಅಧಿಕಾರಿಗಳು ಮಾತನಾಡಿ, 2023-24ನೇ ಆಯವ್ಯಯದ ಅಂದಾಜು ವೆಚ್ಚದಲ್ಲಿನ ಶೀರ್ಷಿಕೆಯನ್ನು ಸಭೆಯಲ್ಲಿ ತಿಳಿಸಿದಂತೆ ಬದಲಾವಣೆ ಮಾಡಲಾಗಿದೆ. 5 ಮತ್ತು 7 ತಿಂಗಳಿಗೊಮ್ಮೆ ಬಜೆಟ್ ಸಿದ್ಧಪಡಿಸಿಯೆಂದು ತಿಳಿಸಿರುವುದು ಸಾಧ್ಯವಿಲ್ಲವೆಂದರು. |

| | |
|---|---|
| | ಡಾ. ಟಿ.ಆರ್.ಚಂದ್ರಶೇಖರ್ ಅವರು ಮಾತನಾಡಿ, ಬದಲಾವಣೆ ಮಾಡಿರುವ 2023-24ನೇ ಆಯವ್ಯಯದ ಅಂದಾಜು ವೆಚ್ಚದಲ್ಲಿನ ಶೀರ್ಷಿಕೆಯನ್ನು ಅನುಮೋದಿಸಬಹುದು. ಬಜೆಟ್‌ನಲ್ಲಿನ ತಿದ್ದುಪಡಿ ಮಾಡುವುದು ಸಾಧ್ಯವಿಲ್ಲವೆಂದಾದರೆ, ಕಳೆದ ಸಿಂಡಿಕೇಟ್ ಸಭೆಯ ತೀರ್ಮಾನಕ್ಕೆ ಬದ್ಧರಲ್ಲ. ಕಾಲಾವಕಾಶ ಕಡಿಮೆಯಿರುವುದರಿಂದ ಪ್ರಸ್ತುತ ಸಿದ್ಧಪಡಿಸಲಾಗಿರುವ ಆಯವ್ಯಯಕ್ಕೆ ಒಪ್ಪಿಗೆ ನೀಡಬೇಕೆಂದು ಸಭೆಯ ನಡಾವಳಿಯಲ್ಲಿ ದಾಖಲಿಸಬೇಕೆಂದರು. ಆಯವ್ಯಯವನ್ನು ಸಿದ್ಧಪಡಿಸುವ ಹಾಗೂ ಅನುಮೋದಿಸುವ ಜವಾಬ್ದಾರಿಯನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆಯು ಸಿಂಡಿಕೇಟ್‌ಗೆ ನೀಡಿದೆ.<br><br>ಕುಲಪತಿಗಳು ಮಾತನಾಡಿ, ಹಣಕಾಸು ಅಧಿಕಾರಿಯವರು ಆಯವ್ಯಯವನ್ನು ಸಿದ್ಧಪಡಿಸುವುದು ಮೊದಲ ಬಾರಿಯಾಗಿರುವುದು. ಕೆಲವೊಂದು corrections ಆಗಿದೆ. corrections ಈಗ ಸರಿಪಡಿಸಲಾಗಿದೆ. ಈ ಬಾರಿ ಬಜೆಟ್‌ನ್ನು ಅನುಮೋದಿಸಿ. ಮುಂದಿನ ಆರ್ಥಿಕ ಸಾಲಿನಿಂದ ಎರಡು ತಿಂಗಳು ಮುಂಚೆಯೇ ಆಯವ್ಯಯ ಕರಡನ್ನು ಸಿದ್ಧಪಡಿಸಲಾಗುವುದು. ಆಗ ಸಿಂಡಿಕೇಟ್ ಸದಸ್ಯರನ್ನೊಳಗೊಂಡಂತೆ ಕರಡು ಆಯವ್ಯವನ್ನು ಸಿದ್ಧಪಡಿಸಲು ಕ್ರಮವಹಿಸಲಾಗುವುದೆಂದು ತಿಳಿಸುತ್ತಾ, ಪ್ರಸ್ತುತ 2024-2025ನೇ ಆರ್ಥಿಕ ಸಾಲಿನ ಆಯವ್ಯಯ ಅಂದಾಜುಗಳಿಗೆ ಅನುಮೋದನೆ ನೀಡಬೇಕೆಂದರು.<br><br>ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಕಳೆದ ಸಿಂಡಿಕೇಟ್ ಸಭೆಯ ತೀರ್ಮಾನಕ್ಕೆ ಸುದೀರ್ಘವಾಗಿ ಚರ್ಚೆ ನಡೆದಂತಹ ತೀರ್ಮಾನಗಳಿಗೆ ಅನೇಕ ಕಾಯ್ದೆ ವಿರುದ್ಧವಾಗಿ ನಡೆದುಕೊಂಡಿದ್ದೇವೆ. ಯಾವ ವಿಷಯದಲ್ಲೂ ಕೂಡ ಅದಕ್ಕೆ ಅನುಸರಿಸಿಲ್ಲ. ನಿಯಮಬಾಹಿರವಾಗಿ ಮಂಡಿಸುತ್ತಿದ್ದೀರಿ. Karnataka Fiscal Responsibility Act ಪ್ರಕಾರ ಆಯವ್ಯಯ ಅಂದಾಜುಗಳನ್ನು ಸಿದ್ಧಪಡಿಸುವ ಸಂದರ್ಭದಲ್ಲಿ ಕ್ರೋಢಿಕೃತ ಸಂಪನ್ಮೂಲಗಳನ್ನು ಒಳಗೊಂಡಂತೆ ಆಯವ್ಯಯವನ್ನು ಸಿದ್ಧಪಡಿಸುವಾಗ, ಅಂದಾಜು ಮೊತ್ತವು ನಿರೀಕ್ಷಿತ ಆದಾಯಕ್ಕಿಂತ ಆಯವ್ಯಯದ ಅಂದಾಜಿನ ಕೊರತೆ ಶೇ.3 ರಷ್ಟು ಮೀರಬಾರದು. ಆದರೆ, ತಾವು ಮಂಡಿಸಿರುವ ಆಯವ್ಯಯದಲ್ಲಿ ಶೇ.30 ರಷ್ಟು ಕೊರತೆ ಕಂಡುಬಂದಿದೆ. ಇದು ನಿಯಮಗಳಿಗೆ ವಿರುದ್ಧವಾಗಿದೆ ಎಂದರು.<br><br>ಹಣಕಾಸು ಅಧಿಕಾರಿಗಳು ಮಾತನಾಡಿ, Karnataka Fiscal Responsibility Act 2004ರಿಂದ ಜಾರಿಗೆ ಬಂದಿದೆ. ಅದು Ideal condition ಗಳಲ್ಲಿದ್ದರೆ Economic Development ಆಗುತ್ತದೆಂಬ ಉದ್ದೇಶದಿಂದ ಮಾಡಿದ್ದಾರೆಂದು ಸ್ಪಷ್ಟಪಡಿಸಿದರು.<br><br>ಕುಲಸಚಿವ (ಪರೀಕ್ಷಾಂಗ) ಅವರು ಮಾತನಾಡಿ, ಅಕೌಂಟಿಂಗ್ ತೊಡಕಾಗಿರುವುದರಿಂದ ನಮ್ಮಲ್ಲಿ receipt payment and income expenditure ಅಷ್ಟೆ ಮಾಡುತ್ತಿದ್ದೇವೆ. so far the last so many decades. ನಮ್ಮಲ್ಲಿ Balance sheet concept ಇರುವುದಿಲ್ಲ. ಇದುವರೆವಿಗೂ Balance sheet ಮಾಡಿರುವುದಿಲ್ಲ. ಆದ್ದರಿಂದ ನಮ್ಮಲ್ಲಿ Accounting Financial System ಬೇರೆಯಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಕೊರತೆಯನ್ನು ಬಜೆಟ್ ಪುಸ್ತಕದಲ್ಲಿ ತೋರಿಸಲಾಗಿದೆ. ಇದು ಕೇವಲ Projections ಆಗಿರುತ್ತದೆ. revenue expected thirty crores ಅಂತ ತೋರಿಸಿ ಆ revenue ನಮಗೆ ಬರದೇ ಇರಬಹುದು. Its only a propose, not actual, to be realized in the near future. |

| | |
|---|---|
| | ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, 2024-25ನೇ ಆರ್ಥಿಕ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಆಯವ್ಯಯ ಅಂದಾಜುಗಳಿಗೆ ಸಿಂಡಿಕೇಟ್ ಸದಸ್ಯರುಗಳು ತಿಳಿಸಿರುವ ಲೋಪದೋಷಗಳನ್ನು ತಿದ್ದುಪಡಿ ಮಾಡಿ, ಪರಿಷ್ಕರಿಸಿದ ಆಯವ್ಯಯವನ್ನು ಮುಂದಿನ ಸಭೆಯಲ್ಲಿ ಮಂಡಿಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು ಎಂದು ತೀರ್ಮಾನವಾಗಿದೆ. ಯಾವ ಲೋಪದೋಷಗಳನ್ನು ಸರಿ ಮಾಡಿದ್ದೀರಾ ಅಷ್ಟನ್ನು ಸಭೆಯಲ್ಲಿ ತಿಳಿಸಿದರೆ ನಂತರ ಅನುಮೋದಿಸಬಹುದೆಂದರು.<br><br>ಶ್ರೀ ಕೆ.ಗೋಕುಲ್ ಗೋವರ್ಧನ್ ಅವರು ಮಾತನಾಡಿ, ಮುಂದಿನ ಆರ್ಥಿಕ ವರ್ಷದ ಆಯವ್ಯಯವನ್ನು ಸಿದ್ಧಪಡಿಸುವ ಸಂದರ್ಭದಲ್ಲಿ ಸಿಂಡಿಕೇಟ್ ಸದಸ್ಯರನ್ನೊಳಗೊಂಡಂತೆ ಹಾಗೂ ಸಿಂಡಿಕೇಟ್ ಸದಸ್ಯರುಗಳು ಪ್ರಸ್ತುತ ಆಯವ್ಯಯಕ್ಕೆ ನೀಡಿರುವ ಸಲಹೆಗಳನ್ನು ಒಳಗೊಂಡಂತೆ ಕರಡು ಆಯವ್ಯಯವನ್ನು ಸಿದ್ಧಪಡಿಸುವುದು ಸಮಂಜಸವೆಂದು ತಿಳಿಸಿದರು.<br><br>ಕುಲಪತಿಗಳು ಮಾತನಾಡಿ, ಆಯವ್ಯಯದಲ್ಲಿ ಶೇ.30 ರಷ್ಟು ಕೊರತೆಯಿದೆಯೆಂದು ಸರ್ಕಾರಕ್ಕೆ ಪತ್ರ ಬರೆಯಬಹುದು. ಸರ್ಕಾರವು ಶೇ.3 ಕ್ಕೆ ಇಳಿಸಿದ್ದರೆ ವಿಶ್ವವಿದ್ಯಾನಿಲಯದ ಆರ್ಥಿಕ ದೃಷ್ಟಿಯಿಂದ ನಮಗೆ ಅನುಕೂಲವಾಗುತ್ತದೆ ಹಾಗೂ ಈಗಾಗಲೇ ಈ ಆಯವ್ಯಯವು ಹಣಕಾಸು ಸಮಿತಿಯಲ್ಲಿ ಅನುಮೋದಿಸಲ್ಪಟ್ಟಿದೆ. ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ಸದಸ್ಯರುಗಳು ನೀಡಿದ್ದ ಸಲಹೆಗಳಂತೆ ಶೇ.100 ರಷ್ಟು ಆಗದೇ ಇದ್ದರೂ ಸುಮಾರು ತಿದ್ದುಪಡಿಗಳನ್ನು ಮಾಡಲಾಗಿದೆ. ಆದರೂ ಸಮಯವಿಲ್ಲದ್ದ ಕಾರಣ ಈ ಬಜೆಟ್ ಅನ್ನು ಅಂಗೀಕರಿಸಬೇಕಾಗಿದೆ ಎಂದು ತಿಳಿಸಿದರು. |
| ತೀರ್ಮಾನ | **ಮೈಸೂರು ವಿಶ್ವವಿದ್ಯಾನಿಲಯದ 2024-2025ನೇ ಆರ್ಥಿಕ ಸಾಲಿನ ಆಯವ್ಯಯ ಅಂದಾಜುಗಳನ್ನು ಅನುಮೋದಿಸಿ ಸರ್ಕಾರಕ್ಕೆ ಕಳುಹಿಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.** |
| ಸಾಮಾನ್ಯ ಸಭೆ 2024/6.31 | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿಶೇಷ ಘಟಕದ ವತಿಯಿಂದ ಪಿಎಚ್.ಡಿ ಸಂಶೋಧನೆ ಕೈಗೊಂಡಿರುವ ಸಂಶೋಧಕರುಗಳಿಗೆ ಕಿರಿಯ ಸಂಶೋಧಕರಿಂದ ಹಿರಿಯ ಸಂಶೋಧಕರಾಗಿ ಬಡ್ತಿ ನೀಡಿರುವ ಸಂಬಂಧ ಹಿಂಬಾಕಿ ಶಿಷ್ಯವೇತನವನ್ನು ಪಾವತಿಸುವ ಬಗ್ಗೆ. |
| | ಕುಲಸಚಿವರು ಮಾತನಾಡಿ, ಸಂಶೋಧಕರುಗಳು ಎರಡು ವರ್ಷ ಕಿರಿಯ ಸಂಶೋಧನಾ ಶಿಷ್ಯವೇತನವನ್ನು ವಿಶ್ವವಿದ್ಯಾನಿಲಯದಿಂದ ಪಡೆದಿರುತ್ತಾರೆ. ತದನಂತರ, ತಜ್ಞರ ಸಮಿತಿಯಲ್ಲಿ ತೀರ್ಮಾನವಾಗಿ ಹಿರಿಯ ಸಂಶೋಧಕರಾಗಿ ಬಡ್ತಿ ಹೊಂದುತ್ತಾರೆ. ಕೆಲವರು ನಾಲ್ಕು ವರ್ಷವಾದರೂ ಹಿರಿಯ ಸಂಶೋಧನಾ ಶಿಷ್ಯವೇತನ ಪಡೆದಿರುವುದಿಲ್ಲ. ಪ್ರಸ್ತುತ ಕಿರಿಯ ಸಂಶೋಧನಾ ಶಿಷ್ಯವೇತನದಿಂದ ಹಿರಿಯ ಸಂಶೋಧನಾ ಶಿಷ್ಯವೇತನವನ್ನು ಪಡೆಯುತ್ತಿದ್ದಾರೆ. ಆದರೆ, ಕಳೆದ ಎರಡು ವರ್ಷಗಳ ಹಿಂಬಾಕಿಯ ವ್ಯತ್ಯಾಸದ ಮೊತ್ತವನ್ನು ಕೇಳುತ್ತಿದ್ದಾರೆ. ಹಿಂದೆ ರೂ.22,000/- ದಿಂದ 23,000/-ಗಳ ಶಿಷ್ಯವೇತನವನ್ನು ಪಾವತಿಸಲಾಗುತ್ತಿತ್ತು. ಪ್ರಸ್ತುತ ರೂ.23,000/- ದಿಂದ 25,000/-ಗಳವರೆಗೆ ಶಿಷ್ಯವೇತನ ಪಡೆಯುತ್ತಿದ್ದಾರೆ.<br><br>ಶ್ರೀ ಶಿವಮೂರ್ತಿ ಇವರನ್ನೊಳಗೊಂಡಂತೆ ಇತರೆ 05 ಮಂದಿ ಸಂಶೋಧಕರು ಅರ್ಜಿ ಸಲ್ಲಿಸಿ, ಹಿಂಬಾಕಿ ಶಿಷ್ಯವೇತನವನ್ನು ಪಾವತಿಸುವಂತೆ ಕೋರಿರುತ್ತಾರೆ. ಈ ರೀತಿಯಾಗಿ 05 ಸಂಶೋಧಕರಿಗೆ ಹಿಂಬಾಕಿ ಶಿಷ್ಯವೇತನವನ್ನು ಪಾವತಿಸಿದ್ದಲ್ಲಿ, ಇನ್ನುಳಿದ 15 ಮಂದಿ ಸಂಶೋಧಕರುಗಳು ಸಹ ಹಿಂಬಾಕಿ ಶಿಷ್ಯವೇತನವನ್ನು ಪಾವತಿಸುವಂತೆ ಕೋರುವ ಸಂಭವವಿರುತ್ತದೆ. ನಿಯಮಗಳನ್ವಯ ಯಾವ ವರ್ಷ ಜೆಆರ್ಎಫ್ ನಿಂದ ಎಸ್ಆರ್ಎಫ್ ಗೆ ಬಡ್ತಿ ಪಡೆಯಬೇಕೋ, ಆ ವರ್ಷದಲ್ಲಿಯೇ ಶಿಷ್ಯವೇತನವನ್ನು ಪಡೆದುಕೊಳ್ಳಬೇಕೆಂಬ |

<table>
<tr><td></td><td>ನಿಯಮವಿರುತ್ತದೆ. ಉದಾಹರಣೆಗೆ 2023 ರಲ್ಲಿ ಯಾವ ಮಾಹೆಯಲ್ಲಿ ಜೆಆರ್‌ಎಫ್ ಅಂತ್ಯಗೊಂಡು ಎಸ್‌ಆರ್‌ಎಫ್ ಗೆ ಬಡ್ತಿ ಹೊಂದಬೇಕೋ, ಅಂತಹ ಸಂದರ್ಭದಲ್ಲಿ 2-4 ತಿಂಗಳ ಅಂತರದಲ್ಲಿ ಜೆಆರ್‌ಎಫ್ ನಿಂದ ಎಸ್‌ಆರ್‌ಎಫ್ ಗೆ ಬಡ್ತಿ ಪಡೆದುಕೊಳ್ಳುತ್ತಿದ್ದರು. ಆದರೆ, ಸದರಿ ಸಂಶೋಧಕರು ಶಿಷ್ಯವೇತನದ ಅವಧಿಯ ಅಂತಿಮ ಘಟ್ಟವನ್ನು ತಲುಪಿದ್ದು, 2, 3 ಮತ್ತು 4 ವರ್ಷಗಳ ಹಿಂಬಾಕಿ ಶಿಷ್ಯವೇತನವನ್ನು ಪಾವತಿಸುವಂತೆ ಮನವಿ ಸಲ್ಲಿಸುತ್ತಿದ್ದು, ಇವರುಗಳಿಗೆಲ್ಲಾ ಹಿಂಬಾಕಿ ಶಿಷ್ಯವೇತನವನ್ನು ಪಾವತಿಸಿದ್ದಲ್ಲಿ, ತಲಾ ಸಂಶೋಧನಾ ವಿದ್ಯಾರ್ಥಿಗೆ ಅಂದಾಜು ರೂ.83,000/-ಗಳನ್ನು ಪಾವತಿಸಬೇಕಾಗಿರುತ್ತದೆ. ಇದೇ ರೀತಿ 15 ಮಂದಿ ಸಂಶೋಧಕರಿಗೂ ಹಿಂಬಾಕಿ ಶಿಷ್ಯವೇತನವನ್ನು ಪಾವತಿ ಮಾಡಿದ್ದಲ್ಲಿ, ಸುಮಾರು ರೂ.28,00,000/-ಗಳ ಹಿಂಬಾಕಿ ಶಿಷ್ಯವೇತನವನ್ನು ಪಾವತಿಸಬೇಕಾಗುತ್ತದೆ ಎಂಬ ಅಂಶವನ್ನು ಸಭೆಯ ಗಮನಕ್ಕೆ ತಂದರು.<br><br>ಡಾ. ಹೆಚ್.ಎಸ್.ನಟರಾಜು ಅವರು ಮಾತನಾಡಿ, ಶಿಷ್ಯವೇತನದ ಅವಧಿಯೊಳಗೆ ಯಾವ ಸಂಶೋಧಕರು ಅರ್ಜಿ ಸಲ್ಲಿಸಿರುತ್ತಾರೆಯೋ, ಆ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾತ್ರ ಹಿಂಬಾಕಿ ಶಿಷ್ಯವೇತನವನ್ನು ಪಾವತಿಸಿ, ಅದರ ಸಂಖ್ಯೆಯು ಮೂರು ಅಥವಾ ಐದು ಸಂಶೋಧಕರಾಗಿದ್ದರೂ ಸಾಕೆಂದು ಪ್ರಸ್ತಾಪಿಸಿದರು.<br><br>ಮಾನ್ಯ ಕುಲಪತಿ ಹಾಗೂ ಸಭೆಯ ಸದಸ್ಯರುಗಳು ಡಾ. ಹೆಚ್.ಎಸ್.ನಟರಾಜು ಅವರ ಪ್ರಸ್ತಾವನೆಗೆ ಒಪ್ಪಿಗೆ ಸೂಚಿಸಿದರು.</td></tr>
<tr><td>ತೀರ್ಮಾನ</td><td>ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿಶೇಷ ಘಟಕದ ವತಿಯಿಂದ ಪಿಎಚ್.ಡಿ ಸಂಶೋಧನೆ ಕೈಗೊಂಡಿರುವ ಸಂಶೋಧಕರುಗಳಲ್ಲಿ ಕಿರಿಯ ಸಂಶೋಧಕರಿಂದ ಹಿರಿಯ ಸಂಶೋಧಕರಾಗಿ ಬಡ್ತಿ ಹೊಂದಲು ಶಿಷ್ಯವೇತನದ ಅವಧಿಯೊಳಗೆ ಅರ್ಜಿ ಸಲ್ಲಿಸಿರುವಂತಹ ಸಂಶೋಧಕರುಗಳನ್ನು ಮಾತ್ರ ಪರಿಗಣಿಸಿ, ಅಂತಹ ಸಂಶೋಧಕರುಗಳಿಗೆ ಮಾತ್ರ ಹಿರಿಯ ಶಿಷ್ಯವೇತನದ ಹಿಂಬಾಕಿ ಮೊತ್ತವನ್ನು ಪಾವತಿಸಲು ಸಿಂಡಿಕೇಟ್ ಸಭೆಯು ಅನುಮತಿಸಿತು.</td></tr>
<tr><td>ಸಾಮಾನ್ಯ ಸಭೆ 2024/6.32</td><td>PROMOTIONS TO UNIVERSITY TEACHERS UNDER UGC-CAS</td></tr>
<tr><td>ತೀರ್ಮಾನ</td><td>The recommendations of the Selection Committee in various subjects from the post of Professor to Senior Professor in various disciplines (from Academic Level 14 to Academic Level 15) furnished before the syndicate is approved. Further, the Syndicate has also decided to extend the monitory benefits to the teachers from the date of the University order and subsequent reporting to the post to which they are promoted.
<table>
<tr><th>Sl.No.</th><th>Name of the Professor</th><th>Subject</th><th>Date of Interview</th><th>Date of reporting to duty as Professor (AGP Rs. 10000)</th><th>Date of Eligibility for reporting to the duty as Senior Professor</th><th>Remarks</th></tr>
<tr><td>1.</td><td>Dr. S. Ravi</td><td>Statistics</td><td>30.08.2024</td><td>01.03.2010</td><td>01.03.2020</td><td>Recommended</td></tr>
<tr><td>2.</td><td>Dr. B.S. Biradar</td><td>Statistics</td><td>30.08.2024</td><td>20.08.2014</td><td>20.08.2024</td><td>Recommended</td></tr>
<tr><td>3.</td><td>Dr. G.R. Janardhana</td><td>Botany</td><td>30.08.2024</td><td>01.07.2007</td><td>18.07.2018</td><td>Recommended</td></tr>
</table></td></tr>
</table>

| | | | | | | | |
|---|---|---|---|---|---|---|---|
| | 4. | Dr. Chandrashekara M. | Library and Information Science | 30.08.2024 | **03.11.2011** | **03.11.2021** | Recommended |
| | 5. | Dr. N.S. Harinarayana | Library and Information Science | 30.08.2024 | **23.03.2013** | **23.03.2023** | Recommended |
| | 6. | Dr. D. Nagaraju | Earth Science | 30.08.2024 | **25.10.2011** | **25.10.2021** | Recommended |
| | 7. | Dr. Chandrasheara B. | Computer Science | 30.08.2024 | **26.07.2011** | **26.07.2021** | Recommended |
| | 8. | Dr. Suresha | Computer Science | 30.08.2024 | **01.01.2009** | **01.01.2019** | Recommended |
| | 9. | Dr. D.S. Guru | Computer Science | 30.08.2024 | **06.02.2012** | **06.02.2022** | Recommended |
| | 10. | Dr. H.S. Nagendraswamy | Computer Science | 30.08.2024 | **08.08.2014** | **08.08.2024** | Recommended |
| | 11. | Dr. Sridhar M.A. | Physics | 30.08.2024 | **12.07.2007** | **18.07.2018** | Recommended |
| | 12. | Dr. N.K. Lokanath | Physics | 30.08.2024 | **17.07.2007** | **18.07.2018** | Recommended |
| | 13. | Dr. Jnanaprakash | Physics | 30.08.2024 | **14.07.2013** | **14.07.2023** | Recommended |
| | 14. | Dr. M. Bhagya | Zoology | 30.08.2024 | **17.01.012** | **17.01.2022** | Recommended |
| | 15. | Dr. Aisha M. Sheriff | Management Science | 31.08.2024 | **28.07.2007** | **18.07.2018** | Recommended |
| | 16. | Dr. D. Anand | Management Science | 31.08.2024 | **01.11.2007** | **18.07.2018** | Recommended |
| | 17. | Dr. S.J. Manjunath | Management Science | 31.08.2024 | **03.04.2013** | **03.04.2023** | Recommended |
| | 18. | Dr. R. Mahesh | Management Science | 31.08.2024 | **10.07.2013** | **10.07.2023** | Recommended |
| | 19. | Dr. Shubha Gopal | Microbiology | 31.08.2024 | **23.03.2013** | **23.03.2023** | Recommended |
| | 20. | Dr. R. Shivappa | Social Work | 31.08.2024 | **13.07.2013** | **13.07.2023** | Recommended |
| | 21. | Dr. Sadashiva K. | History | 31.08.2024 | **01.01.2009** | **01.01.2019** | Recommended |
| | 22. | Dr. Y.H. Nayakwadi | History | 31.08.2024 | **11.11.2010** | **11.11.2020** | Recommended |
| | 23. | Dr. G.T. Somashekar | History | 31.08.2024 | **25.10.2013** | **25.10.2023** | Recommended |

| | |
|---|---|
| ಸಾಮಾನ್ಯ ಸಭೆ 2024/6.33 | 2020-2021ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕ ಪರಿಶೋಧನಾ ವರದಿಯ ಆಕ್ಷೇಪಣೆಗಳಿಗೆ ಅನುಪಾಲನಾ ವರದಿ. |
| ತೀರ್ಮಾನ | **2020-2021ನೇ ಸಾಲಿನ ವಾರ್ಷಿಕ ಲೆಕ್ಕ ಪರಿಶೋಧನಾ ವರದಿಯ ಆಕ್ಷೇಪಣೆಗಳಿಗೆ ಸಿದ್ಧಪಡಿಸಿರುವ ಅನುಪಾಲನಾ ವರದಿಯನ್ನು ಸರ್ಕಾರಕ್ಕೆ ಕಳುಹಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |

ಇತರೆ ವಿಷಯಗಳು:

1) ಡಾ. ಬಸವರಾಜು.ಸಿ ಇವರು ಮಾತನಾಡಿ, ದಿನಾಂಕ: 14-08-2024 ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನಕ ಅಧ್ಯಯನ ಪೀಠವನ್ನು ಸ್ಥಾಪಿಸುವುದರ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ನಿರ್ಣಯಿಸಲಾಗಿದ್ದು, ಈ ಸಂಬಂಧ ಓರ್ವ ದಾನಿಗಳು ಒಂದು ಕೋಟಿ ರೂ.ಗಳ ಅನುದಾನವನ್ನು ಮೀಸಲಿಡಲು ನಿರ್ಧರಿಸಿರುವ ಹಿನ್ನೆಲೆಯಲ್ಲಿ ತೆಗೆದುಕೊಂಡಿರುವ ಕ್ರಮದ ಕುರಿತು ಅಧ್ಯಕ್ಷರನ್ನು ಕೋರಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನಕ ಅಧ್ಯಯನ ಪೀಠವನ್ನು ಸ್ಥಾಪಿಸುವುದರ ಕುರಿತು ಈಗಾಗಲೇ ಸೂಕ್ತ ಪ್ರಸ್ತಾವನೆಯನ್ನು ಸಿದ್ಧಪಡಿಸಿಕೊಡುವಂತೆ ಕೋರಿ ನಿರ್ದೇಶಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಇವರಿಗೆ ಪತ್ರ ಬರೆಯಲಾಗಿದೆ. ಸದರಿ ಪ್ರಸ್ತಾವನೆಯು ಕೈಸೇರಿದ ಕೂಡಲೇ ಸರ್ಕಾರಕ್ಕೆ ಸಲ್ಲಿಸಲು ಕ್ರಮವಹಿಸಲಾಗುವುದು ಎಂದರು.

ಮಾನ್ಯ ಕುಲಸಚಿವರು ಸಭೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಸೂಕ್ತ ಸಲಹೆ ಹಾಗೂ ತೀರ್ಮಾನಗಳನ್ನು ನೀಡಿರುವ ಗೌರವಾನ್ವಿತ ಅಧ್ಯಕ್ಷರು ಹಾಗೂ ಸದಸ್ಯರುಗಳಿಗೆ ವಂದನೆಗಳನ್ನರ್ಪಿಸುವ ಮೂಲಕ ಸಿಂಡಿಕೇಟ್ ಸಭೆಯು ಮುಕ್ತಾಯವಾಯಿತು.

ಕುಲಸಚಿವ ಮತ್ತು ಸದಸ್ಯ ಕಾರ್ಯದರ್ಶಿ

ಕುಲಪತಿ ಮತ್ತು ಅಧ್ಯಕ್ಷರು